ಸಂಪುಟ: 14 Volume | ಸಂಚಿಕೆ: 104 Issue | ಪುಟಗಳು 08 Pages | ಬುಧವಾರ 29 ಜುಲೈ 2026 | ₹4 | PRGINO.120927 (RNINO:KARKAN/2011/48371) | BDR/054/2026-2027 | www.mallammanudi.in | mallammanudi@gmail.com | 9448604450, 9845028349

ಬೆಂಗಳೂರು | ಹುಬ್ಬಳ್ಳಿ | ಬೀದರ ಆವೃತ್ತಿ: ಕಲ್ಬುರ್ಗಿ, ಯಾದಗಿರಿ, ರಾಯಚೂರು, ಕೊಪ್ಪಳ, ಬಳ್ಳಾರಿ, ಬಾಗಲಕೋಟೆ, ವಿಜಯನಗರ & ವಿಜಯಪುರ ಜಿಲ್ಲೆಗಳಲ್ಲಿ ಏಕಕಾಲಕ್ಕೆ ಪ್ರಕಟ

# ಮಲ್ಲಮ್ಮ ನುಡಿ

ಕನ್ನಡ ಕಿರಣ

Mallammanudi Regional News Paper
ಪ್ರಾದೇಶಿಕ ಕನ್ನಡ ದೈನಿಕ

ಸಂಪಾದಕರು: ರಮೇಶ ರೆಡ್ಡಿ

**ಬೆಳಗು**

ಲೋಕವೆಂಬುದೊಂದು ಸಂತೆ, ಬೇಕು ಬೇಡಗಳ ಕಂತೆ, ಸಾಕು ನಮಗಾ ಚಿಂತೆ.
–ಡಿ.ವಿ.ಗುಂಡಪ್ಪ



ಬೆಂಗಳೂರು ನಗರ ಜಿಲ್ಲೆಯ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳ ಕಚೇರಿಯಲ್ಲಿ ಜಿಲ್ಲಾ ನೀರು ಮತ್ತು ನೈರ್ಮಲ್ಯ ಮಿಷನ್ ಸಮಿತಿ ಸಭೆಯು ಜಿಲ್ಲಾ ಪಂಚಾಯತ್ ಉಪ ಕಾರ್ಯದರ್ಶಿ ಸೋಮೇಶ್ ಅವರ ಅಧ್ಯಕ್ಷತೆಯಲ್ಲಿ ನಡೆಯಿತು. ಸಭೆಯಲ್ಲಿ ಜಿಲ್ಲಾ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಬೆಂಗಳೂರು ವಿಭಾಗದ ಕಾರ್ಯಪಾಲಕ ಅಭಿಯಂತರರಾದ ಮಂಜುನಾಥ್ ಹೆಚ್ ಎನ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಅಧಿಕಾರಿ ಡಾ. ಮದಿನಿ, ಮತ್ತು ಇತರೆ ಇಲಾಖೆಯ ಅಧಿಕಾರಿಗಳು ಉಪಸ್ಥಿತರಿದ್ದರು.

## ಖಾಲಿಯಿರುವ ಹುದ್ದೆಗಳ ನೇಮಕಾತಿ

ಬೆಂಗಳೂರು: ಕೈಗಾರಿಕಾ ತರಬೇತಿ ಮತ್ತು ಉದ್ಯೋಗ ಇಲಾಖೆ ವತಿಯಿಂದ ಜುಲೈ 29 ರಂದು ಬೆಳಿಗ್ಗೆ 10.30 ರಿಂದ ಮಧ್ಯಾಹ್ನ 2.00 ಗಂಟೆಯವರೆಗೆ ಖಾಸಗಿ ಸಂಸ್ಥೆಗಳಲ್ಲಿ ಖಾಲಿಯಿರುವ ಹುದ್ದೆಗಳ ನೇಮಕಾತಿಗಾಗಿ ನೇರ ಸಂದರ್ಶನ ಹಮ್ಮಿಕೊಳ್ಳಲಾಗಿದೆ.

10ನೇ ತರಗತಿ ಉತ್ತೀರ್ಣ, ಪಿ.ಯು.ಸಿ. ಹಾಗೂ ಯಾವುದೇ ಪದವಿ ವಿದ್ಯಾರ್ಹತೆ ಹೊಂದಿರುವ, 35 ವರ್ಷಗಳ ವಯೋಮಿತಿಯೊಳಗಿನ ಅಭ್ಯರ್ಥಿಗಳು ನೇರ ಸಂದರ್ಶನದಲ್ಲಿ ಭಾಗವಹಿಸಬಹುದು. ಹೆಚ್ಚಿನ ಮಾಹಿತಿಗಾಗಿ ಉಪ ಪ್ರಾದೇಶಿಕ ಉದ್ಯೋಗ ವಿನಿಮಯ ಕಚೇರಿ, ಸಿ.ಓ.ಇ. ಕಟ್ಟಡ, ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆ ಆವರಣ, ತುಮಕೂರು ರಸ್ತೆ, ಪೀಣ್ಯ, ಬೆಂಗಳೂರು ಅಥವಾ ದೂರವಾಣಿ ಸಂಖ್ಯೆ 8970615380 ಅನ್ನು ಸಂಪರ್ಕಿಸಬಹುದು ಎಂದು ಉಪ ಪ್ರಾದೇಶಿಕ ಉದ್ಯೋಗ ವಿನಿಮಯ ಕಚೇರಿಯ ಸಹಾಯಕ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಸಿಎಂ ಡಿ ಕೆ ಶಿವಕುಮಾರ್ ಅವರು ದೆಹಲಿಯಲ್ಲಿ ನಿನ್ನೆ ಕರೆದಿದ್ದ ಕರ್ನಾಟಕ ಸಂಸದರ ಸಭೆ ಅಭೂತ ಪೂರ್ವ ಯಶಸ್ಸು ಕಂಡಿದೆ. ಸಭೆಯಲ್ಲಿ ಹಾಜರಿದ್ದ ಪ್ರತಿಕ್ಷದವರು ಕೂಡ ಸಭೆಯ ಧ್ಯೇಯೋದ್ದೇಶ, ಸರ್ವರನ್ನೂ ಒಳಗೊಳ್ಳುವ ಸಿಎಂ ನಡೆ ಬಗ್ಗೆ ಶ್ಲಾಘನೆ ಮಾಡಿದ್ದಾರೆ. ಬಿಜೆಪಿ ಮುಖಂಡರು, ಕೇಂದ್ರ ಸಚಿವರಾದ ಪ್ರಹ್ಲಾದ್ ಜೋಶಿ, ಶೋಭಾ ಕರಂದ್ಲಾಜೆ, ಜಗದೀಶ್ ಶೆಟ್ಟರ್, ಸೋಮಣ್ಣ, ಬಸವರಾಜ ಬೊಮ್ಮಾಯಿ ಅವರಿಂದ ಹಿಡಿದು ರಾಜ್ಯಸಭೆ ಸದಸ್ಯೆ ಶ್ರೀಮತಿ ಸುಧಾ ಮೂರ್ತಿವರೆಗೂ ಹಿಂದೆಂದೂ ಇಷ್ಟೊಂದು ಸಂಖ್ಯೆಯಲ್ಲಿ ಸಂಸದರು ಸೇರಿರಲಿಲ್ಲ, ಇದೇ ಮೊದಲು ಎಂದು ಕೊಂಡಾಡಿದರು. ಕೇಂದ್ರ ಸಚಿವರಾದ ನಿರ್ಮಲ ಸೀತಾರಾಮನ್, ಕುಮಾರಸ್ವಾಮಿ, ರಾಜ್ಯಸಭಾ ಸದಸ್ಯರಾದ ಮಲ್ಲಿಕಾರ್ಜುನ ಖರ್ಗೆ, ಜಗ್ಗೇಶ್, ಲೆಹರ್ ಸಿಂಗ್, ಡಾ. ವೀರೇಂದ್ರ ಹೆಗಡೆ ಅವರು ಅನ್ಯ ಕಾರ್ಯಗಳ ನಿಮಿತ್ತ ಸಭೆಯಲ್ಲಿ ಭಾಗಿಯಾಗಿರಲಿಲ್ಲ. ಈ ಬಗ್ಗೆ ಮೊದಲೇ ಮಾಹಿತಿ ನೀಡಿದ್ದರು.

## ಹಕ್ಕುಗಳಿಗಾಗಿ ಹೋರಾಡಿದವರ ಸ್ಮರಣೆ

• ಮಲ್ಲಮ್ಮ ನುಡಿ ವಾರ್ತೆ ಗಂಗಾವತಿ

ನಗರದ ಬಸ್ ನಿಲ್ದಾಣ ಸಮೀಪದ ಟಿ.ಎ.ಪಿ.ಸಿ.ಎಂ.ಎಸ್. ಆವರಣದಲ್ಲಿರುವ IFTU (ಇಂಡಿಯನ್ ಫೆಡರೇಷನ್ ಆಫ್ ಟ್ರೇಡ್ ಯೂನಿಯನ್ಸ್) ಕಾರ್ಯಾಲಯದಲ್ಲಿ ಕ್ರಾಂತಿಕಾರಿ ನಾಯಕ ಚಾರು ಮುಜುಂದಾರ ಅವರ 54ನೇ ಹುತಾತ್ಮ ದಿನವನ್ನು ಮಂಗಳವಾರ ಭಾವಪೂರ್ಣವಾಗಿ ಆಚರಿಸಲಾಯಿತು.

ಕಾರ್ಯಕ್ರಮದಲ್ಲಿ ಚಾರು ಮುಜುಂದಾರ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಸಲ್ಲಿಸಿ ಗೌರವ ನಮನ ಸಲ್ಲಿಸಲಾಯಿತು. ನಂತರ ಮಾತನಾಡಿದ IFTU ರಾಜ್ಯ ಸಮಿತಿ ಸದಸ್ಯ ಭಾರಧ್ವಾಜ್, ದೇಶದ ಕಾರ್ಮಿಕರು, ರೈತರು ಹಾಗೂ ಶೋಷಿತ ವರ್ಗದ ಜನರ ಹಕ್ಕುಗಳಿಗಾಗಿ ಹೋರಾಟ ನಡೆಸಿದ ಚಾರು ಮುಜುಂದಾರ ಅವರ ತ್ಯಾಗ, ಹೋರಾಟ ಮತ್ತು ಆದರ್ಶಗಳು ಇಂದಿಗೂ ಪ್ರಸ್ತುತವಾಗಿವೆ. ಸಮಾಜದಲ್ಲಿ ಸಮಾನತೆ, ನ್ಯಾಯ




ಮತ್ತು ಶೋಷಣೆ ಮುಕ್ತ ಬದುಕಿಗಾಗಿ ಅವರು ನಡೆಸಿದ ಹೋರಾಟ ಹೊಸ ತಲೆಮಾರಿನ ಯುವಕರು ಹಾಗೂ ಕಾರ್ಮಿಕರಿಗೆ ಪ್ರೇರಣೆಯಾಗಿದೆ ಎಂದು ಹೇಳಿದರು.

ಕಾರ್ಮಿಕರ ಹಕ್ಕುಗಳನ್ನು ರಕ್ಷಿಸುವ ನಿಟ್ಟಿನಲ್ಲಿ ಸಂಘಟಿತ ಹೋರಾಟದ ಅಗತ್ಯವನ್ನು ಒತ್ತಿ ಹೇಳಿದ ಅವರು, ಅಸಂಘಟಿತ ಕಾರ್ಮಿಕರು ತಮ್ಮ ಹಕ್ಕುಗಳು ಮತ್ತು ಸರ್ಕಾರಿ ಸೌಲಭ್ಯಗಳನ್ನು ಪಡೆಯಲು ಸಂಘಟಿತರಾಗಬೇಕು ಎಂದು ಕರೆ ನೀಡಿದರು.

## ಪ್ರಕರಣದ ತನಿಖೆ, ಸಿಐಡಿಗೆ ವರ್ಗಾವಣೆ..!

• ಮಲ್ಲಮ್ಮ ನುಡಿ ವಾರ್ತೆ ಬೆಂಗಳೂರು

ಪಶು ವೈದ್ಯಾಧಿಕಾರಿಗಳ ನೇಮಕಾತಿ ಪ್ರಕ್ರಿಯೆಯಲ್ಲಿ ಅಕ್ರಮ ಆರೋಪದ ಹಿನ್ನೆಲೆಯಲ್ಲಿ ಪ್ರಕರಣದ ತನಿಖೆಯನ್ನು ಸಿಐಡಿಗೆ ವರ್ಗಾವಣೆ ಮಾಡಲಾಗಿದೆ. ಹಗರಣದ ಬಗ್ಗೆ ಸದ್ದು ಗದ್ದಲದ ಬೆನ್ನಲ್ಲೇ ಸರ್ಕಾರ ಈ ಮಹತ್ವದ ನಿರ್ಧಾರವನ್ನು ಕೈಗೊಂಡಿದೆ. ವಿಧಾನಸೌಧ ಠಾಣೆಯಲ್ಲಿ ದಾಖಲಾಗಿರುವ ಎರಡು ಪ್ರಕರಣಗಳನ್ನು ಸಿಐಡಿ ತನಿಖೆಗೆ ವಹಿಸಿ ಪೊಲೀಸ್ ಮಹಾನಿರ್ದೇಶಕ ಡಾ ಎಂ.ಎ ಸಲೀಂ ಆದೇಶಿಸಿದ್ದಾರೆ.



ನೇಮಕಾತಿ ಪ್ರಕ್ರಿಯೆಯಲ್ಲಿ ಪ್ರತಿಯೊಂದು ಹುದ್ದೆಗೆ ಬರೋಬ್ಬರಿ 80 ಲಕ್ಷ ರೂಪಾಯಿ ಬೇಡಿಕೆ ಇಡಲಾಗಿತ್ತು ಎನ್ನಲಾದ ಆಡಿಯೋ ರೆಕಾರ್ಡಿಂಗ್ಗಳು ವೈರಲ್ ಆಗಿದ್ದು, ರಾಜ್ಯಾದ್ಯಂತ ತೀವ್ರ ಸಂಚಲನ ಸೃಷ್ಟಿಸಿದೆ. ಅಖಿಲ ಕರ್ನಾಟಕ ರಾಜ್ಯ ವಿದ್ಯಾರ್ಥಿಗಳ ಸಂಘದ ಅಧ್ಯಕ್ಷ ಕಾಂತಕುಮಾರ್ ಹಾಗೂ ಪರೀಕ್ಷೆ ಬರೆದಿದ್ದ ಅಭ್ಯರ್ಥಿಯೊಬ್ಬರು ನಡೆಸಿದ ರಹಸ್ಯ ಕಾರ್ಯಾಚರಣೆಯಲ್ಲಿ ಮಧ್ಯವರ್ತಿ ಎನ್ನಲಾದ ಮೊಹಮದ್ ಆರೀಫ್ ಎಂಬಾತನ ಸಂಭಾಷಣೆಯೇ ಹಗರಣ ಕುರಿತ ಅನುಮಾನಕ್ಕೆ ಎಡೆಮಾಡಿಕೊಟ್ಟಿದೆ. ಪ್ರತಿ ಹುದ್ದೆಗೆ 80 ಲಕ್ಷ ರೂ.ಅಂತಿಮಗೊಳಿಸಿ, ಬಳಿಕ 70 ಲಕ್ಷಕ್ಕೆ ಡೀಲ್ ಮುಗಿಸುವ ಮಾತುಕತೆ ಆಡಿಯೋದಲ್ಲಿದೆ. ಸಂಭಾಷಣೆಯಲ್ಲಿ ಮುತ್ತು ಎಂಬುವವರು ಕಡಿಮೆ ಮೊತ್ತಕ್ಕೆ ಒಪ್ಪುವುದಿಲ್ಲ ಎಂದು ಏಜೆಂಟ್ ಉಲ್ಲೇಖಿಸಿದ್ದಾನೆ. ಈಗಾಗಲೇ ಅಭ್ಯರ್ಥಿಯಿಂದ ಪಡೆದುಕೊಂಡಿರುವ ಅಡ್ವಾನ್ಸ್ ಚೆಕ್ ಹಾಗೂ 40 ಲಕ್ಷ ರೂ.ಹಣ ಸಿದ್ಧವಿರುವ ಬಗ್ಗೆಯೂ ಚರ್ಚೆ ನಡೆದಿದೆ.

# ಕಮಲದಡಿಯಲ್ಲೇ ಕಿಡಿ

## ಬಿಜೆಪಿ ನಾಯಕತ್ವ ಬದಲಾವಣೆಯ ಚರ್ಚೆ | ಉಸ್ತುವಾರಿ ತಲೆ ತಂಡಕ್ಕೂ ಒಳಗೊಳಗೇ ಒತ್ತಾಯ

• ಮಲ್ಲಮ್ಮ ನುಡಿ ವಾರ್ತೆ ಬೆಂಗಳೂರು

ರಾಜ್ಯ ಬಿಜೆಪಿಯಲ್ಲಿ ಮತ್ತೆ ಬದಲಾವಣೆಯ ಗುಸುಗುಸು ಶುರುವಾಗಿದೆ. ನಾಯಕತ್ವ ಬದಲಾವಣೆ ಚರ್ಚೆ ಬೆನ್ನಲ್ಲೇ, ಉಸ್ತುವಾರಿ ತಲೆ ತಂಡಕ್ಕೂ ಒತ್ತಾಯ ಮಾಡಲಾಗುತ್ತಿದೆ. ಬಿಜೆಪಿಯ ಸಂಘಟನಾತ್ಮಕ ಹಿಡಿತ ಹಾಗೂ ರಾಜಕೀಯ ಸವಾಲುಗಳ ಕುರಿತು ಪಕ್ಷದ ಆಂತರಿಕ ವಲಯದಲ್ಲಿ ತೀವ್ರ ಚರ್ಚೆಗಳು ಜೋರಾಗಿವೆ.

**ಅಸಮಾಧಾನದ ಸ್ಫೋಟ:** ವಿಶೇಷವಾಗಿ, ರಾಜ್ಯ ಬಿಜೆಪಿ ಉಸ್ತುವಾರಿ ಡಾ. ರಾಧಾಮೋಹನ್ ಅಗರ್ವಾಲ್ ಅವರ ಕಾರ್ಯವೈಖರಿಯ ಬಗ್ಗೆ ಪಕ್ಷದೊಳಗೆ ತಳಮಳ, ಅಸಮಾಧಾನ ಸ್ಫೋಟಗೊಂಡಿದೆ. ವಿಧಾನ ಪರಿಷತ್ ಚುನಾವಣೆಗಳಲ್ಲಿ ನಡೆದಿದೆ ಎನ್ನಲಾದ ಅಡ್ಡಮತದಾನದ ಬೆಳವಣಿಗೆಗಳು ಮತ್ತು ಹಿರಿಯ ಮುಖಂಡರ ಬಹಿರಂಗ ವಾಕ್ಸಮರ ತಲೆನೋವಾಗಿ ಪರಿಣಮಿಸಿವೆ.

**ಮುಖಂಡತ್ವದ ಚರ್ಚೆ:** ರಾಜ್ಯ ಬಿಜೆಪಿ ಉಸ್ತುವಾರಿ ರಾಧಾ ಮೋಹನ್ ದಾಸ್ ಅಗರ್ವಾಲ್ ಅವರ ಕಾರ್ಯವೈಖರಿ ಹಾಗೂ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಅವರ ಮುಖಂಡತ್ವದ ಬಗ್ಗೆ ಕಮಲ ಪಾಳಯದಲ್ಲಿ ತೀವ್ರ ಚರ್ಚೆಗಳು ಆರಂಭವಾಗಿವೆ. ರಾಜ್ಯದಲ್ಲಿ ಪಕ್ಷದ ಒಗ್ಗಟ್ಟು –ಭಿನ್ನಮತ ಶಮನ ಮಾಡುವಲ್ಲಿ ಅವರು ವಿಫಲರಾಗಿದ್ದಾರೆ ಎಂಬ ಆರೋಪಗಳು ಕೇಳಿಬಂದಿದೆ.

### ಅಗರ್ವಾಲ್ ವೈಫಲ್ಯ..!

ಬೇರೆ ಬೇರೆ ಕಾರಣಕ್ಕೆ ಬಿಜೆಪಿಯ ಹಲವು ಹಿರಿಯ ನಾಯಕರು ಮತ್ತು ಸ್ಥಳೀಯ ಘಟಕಗಳಲ್ಲಿ ಭಿನ್ನಾಭಿಪ್ರಾಯಗಳು ತಲೆದೋರಿವೆ. ಈ ಅಸಮಾಧಾನಗಳನ್ನು ಆರಂಭದಲ್ಲೇ ಹತ್ತಿಕ್ಕಿ, ಎಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಂಡು ಮುನ್ನಡೆಯುವಲ್ಲಿ ಡಾ. ರಾಧಾಮೋಹನ್ ಅಗರ್ವಾಲ್ ಅವರ ರಣತಂತ್ರಗಳು ಸಂಪೂರ್ಣವಾಗಿ ಯಶಸ್ವಿಯಾಗಿಲ್ಲ ಎಂಬುದು ಪ್ರಮುಖ ನಾಯಕರ ಆರೋಪವಾಗಿದೆ.



### ಹೈಕಮಾಂಡ್ ರಣ ತಂತ್ರವೇನು..?

ಕೆಲ ದಿನಗಳ ಹಿಂದೆ ಬಂಡಾಯಗಾರರಿಗೆ ಕಠಿಣ ಎಚ್ಚರಿಕೆ ಹಾಗೂ ಶಿಸ್ತಿನ ಪಾಠ ಮಾಡಲು ರಾಧಾ ಮೋಹನ್ ದಾಸ್ ಯತ್ನಿಸಿದ್ದರೂ, ತಳಮಟ್ಟದಲ್ಲಿ ನಾಯಕರ ನಡುವಿನ ಮುಸುಕಿನ ಗುದ್ದಾಟ ಮಾತ್ರ ನಿಂತಿಲ್ಲ. ಇದು ಹೈಕಮಾಂಡ್‌ಗೂ ತಲೆನೋವಾಗಿ ಪರಿಣಮಿಸಿದೆ. ದೆಹಲಿ ಮಟ್ಟದಲ್ಲಿ ನಾಯಕರು ಯಾವ ರಣತಂತ್ರ ರೂಪಿಸಲಿದ್ದಾರೆ ಎಂದು ಕಾರುಕರ್ತರು ನಿರೀಕ್ಷೆಯಲ್ಲಿದ್ದಾರೆ.



### ಬಂಡಾಯ ಶಮನ ಇಲ್ಲ

ಸಂಸದ ಕೆ.ಸುಧಾಕರ್–ಶಾಸಕ ಎಸ್.ಆರ್.ವಿಶ್ವನಾಥ್ ಸೇರಿದಂತೆ ಹಲವು ಪ್ರಮುಖರು ಮಾಧ್ಯಮಗಳ ಮುಂದೆ ಪರಸ್ಪರ ಆರೋಪ–ಪ್ರತ್ಯಾರೋಪಗಳಲ್ಲಿ ತೊಡಗಿರುವುದು ಪಕ್ಷಕ್ಕೆ ಮುಜುಗರ ತಂದಿದೆ. ಬಂಡಾಯವನ್ನು ಸಮಾಧಾನ ಪಡಿಸುವ ಬದಲು, ತೆಗೆದುಕೊಳ್ಳುವ ಏಪಕ್ಷೀಯ ನಿರ್ಧಾರ ಪಕ್ಷದೊಳಗೆ ಮತ್ತಷ್ಟು ಬಿರುಕು ಮೂಡಲು ಕಾರಣ ಎನ್ನುವುದು ಪ್ರಮುಖ ದೂರು.





### ರೆಬಲ್‌ಗೆ ಕಡಿವಾಣವಿಲ್ಲ

ಮಾಜಿ ಸಿಎಂ ಡಿ.ವಿ.ಸದಾನಂದ ಗೌಡವರ ಹೆಸರಿನಲ್ಲಿ ವೈರಲ್ ಆದ ಆಡಿಯೊ ವಿವಾದ, ರೆಬಲ್ ಬಸನಗೌಡ ಪಾಟೀಲ್ ಯತ್ನಾಳ್ ಬಣದ ನಿರಂತರ ಆಕ್ರೋಶವು ಬಿಜೆಪಿಯಲ್ಲಿ ತಳಮಳ ಸೃಷ್ಟಿಸಿದೆ. ಬಂಡಾಯವನ್ನು ಹತ್ತಿಕ್ಕುವಲ್ಲಿ ರಾಜ್ಯ ಬಿಜೆಪಿ ಉಸ್ತುವಾರಿ ರಾಧಾ ಮೋಹನ್ ದಾಸ್ ಅಗರ್ವಾಲ್ ಸಂಪೂರ್ಣವಾಗಿ ವಿಫಲರಾಗಿದ್ದು, ಅವರೂ ಬದಲಾಬೇಕಿದೆ ಎನ್ನಲಾಗಿದೆ.

## ಅಧಿಕಾರಿಗಳೊಂದಿಗೆ ಸಮಾಲೋಚನೆ

• ಮಲ್ಲಮ್ಮ ನುಡಿ ವಾರ್ತೆ ನವದೆಹಲಿ

ನಗರದ ಕರ್ನಾಟಕ ಭವನದಲ್ಲಿ ಇಂದು ಮುಖ್ಯಮಂತ್ರಿಗಳಾದ ಶ್ರೀ ಡಿಕೆ ಶಿವಕುಮಾರ್ ಅವರ ಅಧ್ಯಕ್ಷತೆಯಲ್ಲಿ ನಡೆದ ಉನ್ನತ ಮಟ್ಟದ ಸಭೆಯಲ್ಲಿ ಪಾಲ್ಗೊಳ್ಳಲಾಯಿತು ಎಂದು ಸಚಿವ ರಾಮಲಿಂಗಾರೆಡ್ಡಿ ತಮ್ಮ ಖಾತೆಯಲ್ಲಿ ಹಂಚಿಕೊಂಡಿದ್ದಾರೆ.



ಮೇಕೆದಾಟು, ಮಹದಾಯಿ, ಕೃಷ್ಣ, ತುಂಗಭದ್ರಾ ಸೇರಿದಂತೆ ರಾಜ್ಯದ ಪ್ರಮುಖ ಜಲಸಂಪನ್ಮೂಲ ಯೋಜನೆಗಳ ಪ್ರಗತಿ, ಜಲಾಶಯಗಳಲ್ಲಿನ ಪ್ರಸ್ತುತ ನೀರಿನ ಮಟ್ಟ ಹಾಗೂ ಕುಡಿಯುವ ನೀರಿನ ಪೂರೈಕೆ ಸ್ಥಿತಿಗತಿಗಳ ಕುರಿತು ಕಾನೂನು ಮತ್ತು ಜಲಸಂಪನ್ಮೂಲ ಇಲಾಖೆಯ ಹಿರಿಯ ಅಧಿಕಾರಿಗಳೊಂದಿಗೆ ಸುದೀರ್ಘ ಸಮಾಲೋಚನೆ ನಡೆಸಲಾಯಿತು.

ದೆಹಲಿಯಲ್ಲಿನ ಕರ್ನಾಟಕ ಸರ್ಕಾರದ ವಿಶೇಷ ಪ್ರತಿನಿಧಿ ಡಾ. ಟಿ.ಬಿ. ಜಯಚಂದ್ರ, ಅಡ್ವಕೇಟ್ ಜನರಲ್ ಶಶಿಕಿರಣ್ ಶೆಟ್ಟಿ ಹಾಗೂ ಹಿರಿಯ ಅಧಿಕಾರಿಗಳು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

## ರಸ್ತೆ ಹಾಗೂ ಚರಂಡಿ ವ್ಯವಸ್ಥೆಗೆ ಒತ್ತಾಯ..!

• ಮಲ್ಲಮ್ಮ ನುಡಿ ವಾರ್ತೆ ಬಸವಕಲ್ಯಾಣ

ಇಲ್ಲಿನ ಯಾಖುಬಪೂರ ಬಡಾವಣೆಯ 25 ನೇಯ ವಾರ್ಡ್‌ನಲ್ಲಿ ಇರುವ ಸರ್ಕಾರಿ ಉರ್ದು ಹಿರಿಯ ಪ್ರಾಥಮಿಕ ಶಾಲೆಗೆ ಹೋಗಲು ಸರಿಯಾದ ರಸ್ತೆ ಹಾಗೂ ಚರಂಡಿ ಇಲ್ಲದ ಕಾರಣ ಶಾಲೆಯ ಮಕ್ಕಳಿಗೆ ಹೋಗಲು ಬರಲು ಬಹಳಷ್ಟು ತೊಂದರೆಯಾಗುತದೆ ಎಂದು ಇಲ್ಲಿನ ನಿವಾಸಿಗಳು ನಗರ ಸಭೆಯ ಬೇಟಿ ನೀಡಿ ಮನವಿ ಪತ್ರ ಸಲ್ಲಿಸಿದರು. ಇದರ ಬಗ್ಗೆ ಬಹಳಷ್ಟು ಸಲ ಸಂಬಂಧಪಟ್ಟ ಅಧಿಕಾರಿಗಳಿಗೆ ತಿಳಿಸಿದರು ಯಾರು ಕೂಡ ಇತ್ತಕಡೆ ಗಮನ ಹರಿಸದ



ಮೌನಕ್ಕೆ ಜಾರಿದ್ದಾರೆ ಎಂದು ಮಕ್ಕಳ ಪಾಲಕರು ಹಾಗೂ ಸಾರ್ವಜನಿಕರು ಆಕ್ರೋಶ ವ್ಯಕ್ತಪಡಿಸಿದರು. ಇನ್ನು ಮುಂದೆ ಯಾದರು ಸಂಬಂಧ ಪಟ್ಟವರು ಗಮನ ಹರಿಸಿ ಸುಗಮ ಸಂಚಾರಕ್ಕೆ ಅನುಕೂಲ ಮಾಡಿಕೊಡಬೇಕು ಎಂದು ನಗರ ಸಭೆಗೆ ಬೇಟಿ ನೀಡಿ ಮನವಿ ಪತ್ರ ಸಲ್ಲಿಸಿದರು.

## ವಿದ್ಯಾರ್ಥಿಗಳ ಪರದಾಟ, ಅಧಿಕಾರಿಗಳ ಮೌನದಾಟ..!

• ಎಂ.ಜಂಬುನಾಥ, ಬಳ್ಳಾರಿ ಜಿಲ್ಲಾ ವರದಿಗಾರ

ಕುಡುತಿನಿ ಪ್ರದೇಶದಿಂದ ಬಳ್ಳಾರಿ ನಗರದ ಆರ್‌ಟಿಒ ಕಚೇರಿ ರಸ್ತೆ ಮಾರ್ಗವಾಗಿ ಹಾಗೂ ರಾಯಲ್ ಸರ್ಕಲ್‌ನಿಂದ ನಲ್ಲಚೆರುವಿನ ಸಿಟಿ ಡಿಗ್ರಿ ಕಾಲೇಜು ಸೇರಿದಂತೆ ವಿವಿಧ ಸರ್ಕಾರಿ ಶಿಕ್ಷಣ ಸಂಸ್ಥೆಗಳಿಗೆ ತೆರಳುವ ಸಾವಿರಾರು ವಿದ್ಯಾರ್ಥಿಗಳು ಸಮರ್ಪಕ ಸರ್ಕಾರಿ ಬಸ್ ಸೌಲಭ್ಯವಿಲ್ಲದೆ ಪ್ರತಿದಿನ ಸಂಕಷ್ಟ ಅನುಭವಿಸುತ್ತಿದ್ದಾರೆ. ಪ್ರಯಾಣ ಅನಿವಾರ್ಯ: ಬೆಳಗ್ಗೆ ಶಾಲೆ ಕಾಲೇಜುಗಳಿಗೆ ತೆರಳುವ ಸಮಯದಲ್ಲೂ, ಸಂಜೆ ಮನೆಗೆ ಮರಳುವ ವೇಳೆಯಲ್ಲೂ ಅಗತ್ಯ ಪ್ರಮಾಣದಲ್ಲಿ ಬಸ್ಗಳು ಸಂಚರಿಸದ ಕಾರಣ ವಿದ್ಯಾರ್ಥಿಗಳು ದುಬಾರಿ ಆಟೋಗಳ ಮೊರೆ ಹೋಗುವುದು ಅಥವಾ ಲಿಫ್ಟ್ ಪಡೆದು ಶಿಕ್ಷಣ ಸಂಸ್ಥೆಗಳಿಗೆ ತೆರಳುವುದು ಅನಿವಾರ್ಯವಾಗಿದೆ.

**ತರಗತಿಗಳಿಗೆ ಲೇಟ್:** ಗ್ರಾಮೀಣ ಪ್ರದೇಶಗಳಿಂದ ವಿದ್ಯಾಭ್ಯಾಸಕ್ಕಾಗಿ ಆಗಮಿಸುವ ವಿದ್ಯಾರ್ಥಿನಿಯರು ಹಾಗೂ ವಿದ್ಯಾರ್ಥಿಗಳಿಗೆ ಸುರಕ್ಷಿತ ಮತ್ತು ಕೈಗೆಟುಕುವ ಸಾರ್ವಜನಿಕ ಸಾರಿಗೆ ಸೌಲಭ್ಯದ ಕೊರತೆ ಗಂಭೀರ ಸಮಸ್ಯೆಯಾಗಿ ಪರಿಣಮಿಸಿದೆ. ಸಮಯಕ್ಕೆ ಸರಿಯಾಗಿ ಬಸ್ ಸಿಗದ ಕಾರಣ ಅನೇಕ ವಿದ್ಯಾರ್ಥಿಗಳು ತರಗತಿಗಳಿಗೆ ತಡವಾಗಿ ತಲುಪುತ್ತಿದ್ದು, ಕೆಲವೊಮ್ಮೆ ಪಾಠಗಳನ್ನೇ ತಪ್ಪಿಸಿಕೊಳ್ಳುವ ಪರಿಸ್ಥಿತಿ ನಿರ್ಮಾಣವಾಗಿದೆ.

**ರಸ್ತೆ ಮಾರ್ಗದಲ್ಲಿ ಬಸ್ ಕೊರತೆ..!**

**ವ್ಯಾಪಕ ಅಸಮಾಧಾನ:** ಇದರಿಂದ ವಿದ್ಯಾರ್ಥಿಗಳ ಶೈಕ್ಷಣಿಕ ಪ್ರಗತಿಗೂ ಧಕ್ಕೆ ಉಂಟಾಗುತ್ತಿದೆ ಎಂದು ಪೋಷಕರು ಮತ್ತು ಶಿಕ್ಷಕರು ಆತಂಕ ವ್ಯಕ್ತಪಡಿಸಿ ದ್ದಾರೆ. ಆರ್‌ಟಿಒ ರಸ್ತೆ ಮಾರ್ಗದಲ್ಲೇ ಜೆ.ಟಿ.ಎಸ್. ಸರ್ಕಾರಿ ಪ್ರೌಢಶಾಲೆ, ಸರ್ಕಾರಿ ಐಟಿಐ ಕಾಲೇಜು, ಕೌಶಲ್ಯ ಅಭಿವೃದ್ಧಿ ತರಬೇತಿ ಕೇಂದ್ರ, ರೇಡಿಯೋ ಪಾರ್ಕ್ನ ಸರ್ಕಾರಿ ಪ್ರೌಢಶಾಲೆ, ಬಿ.ಎಡ್. ಕಾಲೇಜು, ಸರ್ಕಾರಿ ರಿಸರ್ಚ್ ಮತ್ತು ಟ್ರೈನಿಂಗ್ ಕಾಲೇಜು, ನಲ್ಲಚೆರುವಿನ ಸಿಟಿ ಡಿಗ್ರಿ ಕಾಲೇಜು ಹಾಗೂ ಸರ್ಕಾರದ ಫ್ಯಾಶನ್ ತಂತ್ರಜ್ಞಾನದ ಕಾಲೇಜು ಸೇರಿದಂತೆ ಹಲವು ಪ್ರಮುಖ ಸರ್ಕಾರಿ ಶಿಕ್ಷಣ ಸಂಸ್ಥೆಗಳು ಕಾರ್ಯನಿರ್ವಹಿಸುತ್ತಿವೆ. ಪ್ರತಿದಿನ ಸಾವಿರಾರು ವಿದ್ಯಾರ್ಥಿಗಳು ಇದೇ ಮಾರ್ಗದಲ್ಲಿ ಸಂಚರಿಸುತ್ತಿದ್ದರೂ,



ವಿದ್ಯಾರ್ಥಿಗಳ ಸಂಖ್ಯೆಗೆ ಅನುಗುಣವಾಗಿ ಬಸ್ಗಳನ್ನು ನಿಯೋಜಿಸದಿರುವುದು ವ್ಯಾಪಕ ಅಸಮಾಧಾನಕ್ಕೆ ಕಾರಣವಾಗಿದೆ. ವಿದ್ಯಾರ್ಥಿಗಳು, ಪೋಷಕರು ಹಾಗೂ ಶಿಕ್ಷಕರು ಸಾರಿಗೆ ಇಲಾಖೆ ಅಧಿಕಾರಿಗಳು ಸ್ಥಳ ಪರಿಶೀಲನೆ ನಡೆಸಿ ಬೆಳಿಗ್ಗೆ ಮತ್ತು ಸಂಜೆ ಶಾಲಾಕಾಲೇಜುಗಳ ವೇಳೆಗೆ ಅನುಗುಣವಾಗಿ ಹೆಚ್ಚುವರಿ ಬಸ್ಗಳನ್ನು ನಿಯೋಜಿಸಬೇಕು ಎಂದು ಆಗ್ರಹಿಸಿದ್ದಾರೆ. ಶೈಕ್ಷಣಿಕ ಅವಧಿಯಲ್ಲಿ ವಿಶೇಷ ವಿದ್ಯಾರ್ಥಿ ಬಸ್ ಸೇವೆ ಆರಂಭಿಸಿದರೆ ಸಮಸ್ಯೆಗೆ ಶಾಶ್ವತ ಪರಿಹಾರ ದೊರೆಯಲಿದೆ ಎಂಬ ಅಭಿಪ್ರಾಯ ವ್ಯಕ್ತವಾಗಿದೆ.

### ವರ್ಷಗಳಿಂದ ಇದ್ದ ಬೇಡಿಕೆಗೆ ಡೋಂಟ್ ಕೇರ್



ಇಲ್ಲಿ ಗ್ರಾಮೀಣ ಭಾಗದ ಎಸ್ಸಿ, ಎಸ್ಟಿ ಸೇರಿದಂತೆ ಸಾವಿರಾರು ವಿದ್ಯಾರ್ಥಿಗಳು ವಿದ್ಯಾಭ್ಯಾಸ ಮಾಡುತ್ತಿದ್ದಾರೆ. ಅನೇಕ ವರ್ಷಗಳಿಂದ ವಿದ್ಯಾರ್ಥಿಗಳು, ಪೋಷಕರು ಹಾಗೂ ಶಿಕ್ಷಕರು ಬೆಳಿಗ್ಗೆ ಮತ್ತು ಸಂಜೆ ಈ ಮಾರ್ಗದಲ್ಲಿ ಬಸ್ ಸೌಲಭ್ಯ ಕಲ್ಪಿಸುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಮನವಿ ಮಾಡುತ್ತಲೇ ಬಂದಿದ್ದಾರೆ. ಸಮಸ್ಯೆ ಇಂದಿಗೂ ಬಗೆಹರಿದಿಲ್ಲ. ಮತ್ತೊಮ್ಮೆ ಸಾರಿಗೆ ಇಲಾಖೆ ಅಧಿಕಾರಿಗಳಿಗೆ ಮನವಿ ಸಲ್ಲಿಸಿ ಸಮಸ್ಯೆ ಪರಿಹರಿಸುವಂತೆ ಒತ್ತಾಯಿಸಲಾಗುವುದು ಎಂದು ಸರ್ಕಾರಿ ಐಟಿಐ ಕಾಲೇಜು, ಟಿ. ವೆಂಕಟೇಶ್ ತಿಳಿಸಿದ್ದಾರೆ.



ನಾನು ಹೊಸಪೇಟೆ ರಸ್ತೆಯ ವಿನಾಯಕನಗರದಿಂದ ಪ್ರತಿದಿನ ಕಾಲೇಜಿಗೆ ಬಂದು ಹೋಗುತ್ತೇನೆ. ದಿನಕ್ಕೆ 60 ಆಟೋ ವೆಚ್ಚವಾಗುತ್ತದೆ. ಆರ್ಥಿಕವಾಗಿ ದುರ್ಬಲವಾಗಿದ್ದು ನಮಗೆ ತುಂಬಾ ಕಷ್ಟ. ಪ್ರತಿದಿನ ಸಾರಿಗೆ ಸಮಸ್ಯೆಯಿಂದ ಪರದಾಡುವ ಪರಿಸ್ಥಿತಿ ಎದುರಾಗಿದೆ. ಅಧಿಕಾರಿಗಳು ನಮ್ಮ ಕಷ್ಟವನ್ನು ಅರಿತು ವಿಶೇಷ ವಿದ್ಯಾರ್ಥಿ ಬಸ್ ಸೇವೆ ಆರಂಭಿಸಬೇಕು.

–ಎಂ. ಚೈತನ್ಯ, ವಿದ್ಯಾರ್ಥಿನಿ, ಸರ್ಕಾರದ ಫ್ಯಾಶನ್ ತಂತ್ರಜ್ಞಾನದ ಕಾಲೇಜು, ನಲ್ಲಚೆರವು

### ಬಡ ವಿದ್ಯಾರ್ಥಿಗಳು ಆಟೋ ಹತ್ತಲಾಗದು..!

ಬಹುತೇಕ ವಿದ್ಯಾರ್ಥಿಗಳು ಗ್ರಾಮೀಣ ಪ್ರದೇಶ ಹಾಗೂ ನಗರದ ಬಡ ಕುಟುಂಬಗಳಿಗೆ ಸೇರಿದವರಾಗಿದ್ದಾರೆ. 8, 9 ಮತ್ತು 10ನೇ ತರಗತಿಗಳಲ್ಲಿ ಸುಮಾರು 174 ವಿದ್ಯಾರ್ಥಿಗಳು ವಿದ್ಯಾಭ್ಯಾಸ ಮಾಡುತ್ತಿದ್ದಾರೆ. ಪ್ರತಿದಿನ ದುಬಾರಿ ಹಣ ನೀಡಿ ಆಟೋಗಳಲ್ಲಿ ಶಾಲೆಗೆ ಬರುವುದು ಪೋಷಕರಿಗೆ ತುಂಬಾ ಕಷ್ಟ. ಈ ರಸ್ತೆ ಮಾರ್ಗದಲ್ಲಿ ನಿಯಮಿತ ಬಸ್ ಸೌಲಭ್ಯ ಕಲ್ಪಿಸುವಂತೆ ಒತ್ತಾಯಿಸುತ್ತೇವೆ ಎನ್ನುತ್ತಾರೆ ಜೆ.ಟಿ.ಎಸ್. ಶಾಲೆಯ ಪ್ರಾಂಶುಪಾಲ ಜಗದೀಶ್ ಬಾನವಳ್ಳಿ.

## ಪ್ರಹ್ಲಾದ್ ಜೋಶಿ ಕೊಳಕು ಮನುಷ್ಯ: ಅತ್ಯಾಚಾರಿಯನ್ನು ರಕ್ಷಿಸುವವರು ನೂತನ ಶಿಕ್ಷಣ ಸಚಿವರಾಗಿದ್ದಾರೆ: ರಾಹುಲ್

## ಭ್ರಷ್ಟಾಚಾರಕ್ಕೆ ಕಡಿವಾಣ ಯಾವಾಗ?

ಭ್ರಷ್ಟಾಚಾರವು ದೇಶದ ಅಭಿವೃದ್ಧಿಗೆ ದೊಡ್ಡ ಅಡ್ಡಿಯಾಗಿದೆ. ಜನರ ತೆರಿಗೆ ಹಣವು ಜನರ ಕಲ್ಯಾಣಕ್ಕೆ ಬಳಸಬೇಕಾದರೆ, ಅದು ಕೆಲವರ ಸ್ವಾರ್ಥಕ್ಕೆ ಬಳಕೆಯಾಗುವುದು ಸಮಾಜಕ್ಕೆ ಹಾನಿಕಾರಕ. ಲಂಚ, ಅಕ್ರಮ ಮತ್ತು ಅಧಿಕಾರದ ದುರುಪಯೋಗದಿಂದ ಸಾಮಾನ್ಯ ನಾಗರಿಕರ ನಂಬಿಕೆ ಕುಸಿಯುತ್ತದೆ.

### ಸಂಪಾದಕೀಯ



**ಮಾಣಿಕರೆಡ್ಡಿ ಕೌಡಾಳೆ**
**ಪ್ರಧಾನ ಸಂಪಾದಕರು**
**ಮೊ: 9845028349**

ಭ್ರಷ್ಟಾಚಾರಕ್ಕೆ ಕಡಿವಾಣ ಹಾಕಬೇಕಾದರೆ ಕಾನೂನುಗಳು ಕಠಿಣವಾಗಿರುವುದಷ್ಟೇ ಸಾಕಾಗುವುದಿಲ್ಲ; ಅವುಗಳನ್ನು ಪಕ್ಷಪಾತವಿಲ್ಲದೆ ಜಾರಿಗೊಳಿಸಬೇಕು. ತಪ್ಪಿತಸ್ಥರು ಎಷ್ಟೇ ಪ್ರಭಾವಿಗಳಾಗಿದ್ದರೂ ಅವರ ವಿರುದ್ಧ ತ್ವರಿತ ಕ್ರಮ ಕೈಗೊಳ್ಳಬೇಕು. ಸರ್ಕಾರಿ ಸೇವೆಗಳಲ್ಲಿ ಪಾರದರ್ಶಕತೆ ಹೆಚ್ಚಬೇಕು ಮತ್ತು ಜನರ ದೂರುಗಳಿಗೆ ಶೀಘ್ರ ಸ್ಪಂದನೆ ದೊರೆಯಬೇಕು.

ಅದೇ ಸಮಯದಲ್ಲಿ, ನಾಗರಿಕರೂ ತಮ್ಮ ಕರ್ತವ್ಯವನ್ನು ಮರೆಯಬಾರದು. ಲಂಚ ನೀಡುವುದನ್ನು ಮತ್ತು ಪಡೆಯುವುದನ್ನು ನಿರಾಕರಿಸುವ ಮನೋಭಾವ ಬೆಳೆಸಬೇಕು. ಶಿಕ್ಷಣ ಸಂಸ್ಥೆಗಳಲ್ಲಿ ಪ್ರಾಮಾಣಿಕತೆ ಮತ್ತು ನೈತಿಕ ಮೌಲ್ಯಗಳ ಬಗ್ಗೆ ಜಾಗೃತಿ ಮೂಡಿಸಬೇಕು.

ಭ್ರಷ್ಟಾಚಾರ ಮುಕ್ತ ಸಮಾಜ ನಿರ್ಮಾಣವು ಸರ್ಕಾರದ ಜವಾಬ್ದಾರಿಯಷ್ಟೇ ಅಲ್ಲ, ಪ್ರತಿಯೊಬ್ಬ ನಾಗರಿಕನ ಜವಾಬ್ದಾರಿಯೂ ಆಗಿದೆ. ಪ್ರಾಮಾಣಿಕತೆ, ಪಾರದರ್ಶಕತೆ ಮತ್ತು ಕಾನೂನಿನ ಕಟ್ಟುನಿಟ್ಟಿನ ಅನುಷ್ಠಾನದಿಂದ ಮಾತ್ರ ಭ್ರಷ್ಟಾಚಾರಕ್ಕೆ ನಿಜವಾದ ಕಡಿವಾಣ ಹಾಕಲು ಸಾಧ್ಯ.

## ಪತ್ರಿಕೆ ಓದುವ ಅಭ್ಯಾಸವೇ ವಿದ್ಯಾರ್ಥಿಗಳ ಯಶಸ್ಸಿನ ಗುಟ್ಟು




**ಭಾಲ್ಕಿ:** ವಿದ್ಯಾರ್ಥಿಗಳು ಪಠ್ಯಪುಸ್ತಕದ ಜ್ಞಾನದೊಂದಿಗೆ ಪ್ರಚಲಿತ ವಿದ್ಯಮಾನಗಳ ಅರಿವನ್ನೂ ಬೆಳೆಸಿಕೊಂಡಾಗ ಮಾತ್ರ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಹಾಗೂ ಜೀವನದಲ್ಲಿ ಯಶಸ್ಸು ಸಾಧಿಸಲು ಸಾಧ್ಯ ಎಂದು ನಿರ್ಮಲಾ ಕ್ರಿಯೇಟಿವ್ ಸ್ಟಡೀಸ್ ಪದವಿ ಪೂರ್ವ ಕಾಲೇಜಿನ ಅಧ್ಯಕ್ಷ ಅಮರ ಹಲಮಂಡಗೆ ಹೇಳಿದರು.

ಪಟ್ಟಣದ ನಿರ್ಮಲಾ ಹಲಮಂಡಗೆ ಪ.ಪೂ. ಕಾಲೇಜಿನಲ್ಲಿ ಮಂಗಳವಾರ ಆಯೋಜಿಸಿದ್ದ ಪತ್ರಿಕಾ ದಿನಾಚರಣೆ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಇಂದಿನ ಡಿಜಿಟಲ್ ಯುಗದಲ್ಲಿ ಸಾಮಾಜಿಕ ಜಾಲತಾಣಗಳ ಮಾಹಿತಿಗಿಂತ ಮುದ್ರಣ ಮಾಧ್ಯಮದ ಪತ್ರಿಕೆಗಳು ಹೆಚ್ಚು ವಿಶ್ವಾಸಾರ್ಹವಾಗಿದ್ದು, ಸತ್ಯಾಂಶವನ್ನು ಜನರಿಗೆ ತಲುಪಿಸುವ ಮಹತ್ತರ ಜವಾಬ್ದಾರಿಯನ್ನು ನಿರ್ವಹಿಸುತ್ತಿವೆ ಎಂದರು. ವಿದ್ಯಾರ್ಥಿಗಳು ಪ್ರತಿನಿತ್ಯ ಪತ್ರಿಕೆ ಓದುವ ಹವ್ಯಾಸ ರೂಢಿಸಿಕೊಂಡರೆ ಸಾಮಾನ್ಯ ಜ್ಞಾನ ವೃದ್ಧಿಯಾಗಿ ಗುರಿ ಸಾಧನೆಗೆ ನೆರವಾಗುತ್ತದೆ ಎಂದು ತಿಳಿಸಿದರು.

ಹಿರಿಯ ಪತ್ರಕರ್ತ ಜಯರಾಜ ದಾಬಶೆಟ್ಟಿ ಮಾತನಾಡಿ, ಪತ್ರಿಕೆಗಳು ಕೇವಲ ಸುದ್ದಿಗಳ ಸಂಕಲನವಾಗಿರದೆ, ಜ್ಞಾನ, ವಿಶ್ಲೇಷಣೆ, ಸಮಕಾಲೀನ ಮಾಹಿತಿ ಹಾಗೂ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಅಗತ್ಯವಾದ ವಿಷಯಗಳ ಭಂಡಾರವಾಗಿವೆ. ಪ್ರತಿದಿನ ಪತ್ರಿಕೆ ಓದುವುದು ನೂರಾರು ಗ್ರಂಥಗಳನ್ನು ಅಧ್ಯಯನ ಮಾಡಿದಷ್ಟೇ ಜ್ಞಾನವನ್ನು ನೀಡುತ್ತದೆ ಎಂದು ಹೇಳಿದರು.

ಪತ್ರಕರ್ತರ ಸಂಘದ ಗೌರವಾಧ್ಯಕ್ಷ ಅಶೋಕ ರಾಜೋಳೆ, ಪ್ರಧಾನ ಕಾರ್ಯದರ್ಶಿ ಸಂತೋಷ ಬಿ.ಜಿ. ಪಾಟೀಲ ಹಾಗೂ ಗೌರವ ಸಲಹೆಗಾರ ವಿಜಯಕುಮಾರ ಪರ್ಮಾ ಪತ್ರಿಕೋದ್ಯಮದ ಇತಿಹಾಸ, ಸಾಮಾಜಿಕ ಹೊಣೆಗಾರಿಕೆ ಹಾಗೂ ಪ್ರಜಾಪ್ರಭುತ್ವದಲ್ಲಿ ಪತ್ರಿಕೆಗಳ ಮಹತ್ವ ಕುರಿತು ಉಪನ್ಯಾಸ ನೀಡಿದರು. ಪತ್ರಕರ್ತರ ಸಂಘದ ಅಧ್ಯಕ್ಷ ಜಯರಾಜ ಪಾತ್ರೆ ಅಧ್ಯಕ್ಷತೆ ವಹಿಸಿದ್ದರು. ಶಿಕ್ಷಣ ಸಂಸ್ಥೆಯ ಈಶ್ವರ ರುಮ್ಮಾ, ಸಂಜೀವಕುಮಾರ ಚನ್ನಾಳೆ, ಮೀನಾಕ್ಷಿ ಪಾಟೀಲ, ಗಣಪತಿ ಬೋಚರೆ, ಅಲ್ಪನಾ ಸೂರ್ಯಾನ, ಜಾಲಿಂದರ ಮೇತ್ರೆ ಸೇರಿದಂತೆ ಹಲವರು ಉಪಸ್ಥಿತರಿದ್ದರು. ಆಕಾಂಕ್ಷಾ ಉಮೇಶ್ ದೇಶಭಕ್ತಿಗೀತೆ ಹಾಡಿದರು. ಅಮರ ಎಚ್. ಸ್ವಾಗತಿಸಿದರು. ಅಲ್ಪನಾ ಸೂರ್ಯಾನ ಕಾರ್ಯಕ್ರಮ ನಿರೂಪಿಸಿ, ಎಸ್. ಚನ್ನಾಳೆ ವಂದಿಸಿದರು.

## ಅನ್ನಸಂತರ್ಪಣೆ ಕಾರ್ಯಕ್ರಮ



**ಚಿಕ್ಕಬಳ್ಳಾಪುರ:** ಏಡುಕೊಂಡಲು ಬಿಲ್ಡರ್ಸ್, ಡೆವಲಪರ್ಸ್ ಅಂಡ್ ಕನ್ಸಲ್ಟೆಂಟ್ಸ್ ಪ್ರೈವೇಟ್ ಲಿಮಿಟೆಡ್ ವತಿಯಿಂದ ಆಯೋಜಿಸಿರುವ 9ನೇ ವರ್ಷದ ಗ್ರಾಮ ದೇವತೆಗಳ ಜಾತ್ರಾ ಮಹೋತ್ಸವದ ಮೂರನೇ ದಿನವಾದ ಮಂಗಳವಾರ ದೀಪೋತ್ಸವ ಹಾಗೂ ಅನ್ನಸಂತರ್ಪಣೆ ಕಾರ್ಯಕ್ರಮ ಭಕ್ತಿಭಾವದಿಂದ ನೆರವೇರಿತು.

ಸುತ್ತಮುತ್ತಲಿನ ಗ್ರಾಮಗಳ ನೂರಾರು ಮಹಿಳೆಯರು ದೀಪೋತ್ಸವದಲ್ಲಿ ಶ್ರದ್ಧಾ-ಭಕ್ತಿಯಿಂದ ಪಾಲ್ಗೊಂಡು ದೇವತೆಗಳಿಗೆ ವಿಶೇಷ ಪೂಜೆ ಸಲ್ಲಿಸಿದರು. ಜಾತ್ರಾ ಮಹೋತ್ಸವಕ್ಕೆ ಆಗಮಿಸಿದ್ದ ಸಹಸ್ರಾರು ಭಕ್ತರಿಗೆ ಅನ್ನಸಂತರ್ಪಣೆಯ ವ್ಯವಸ್ಥೆ ಮಾಡಲಾಗಿತ್ತು.

ಕಾರ್ಯಕ್ರಮದಲ್ಲಿ ವಿಧಾನ ಪರಿಷತ್ ಪ್ರತಿಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ ಭಾಗವಹಿಸಿ 16 ಗ್ರಾಮ ದೇವತೆಗಳ ದರ್ಶನ ಪಡೆದು ಧಾರ್ಮಿಕ ಕೈಂಕರ್ಯದಲ್ಲಿ ಭಾಗವಹಿಸಿ ದೇವರ ಕೃಪೆಗೆ ಪಾತ್ರರಾದರು.ಬಳಿಕ ಮಾತನಾಡಿದ ಅವರು,ಸಮಾಜ ಸೇವೆ, ಶಿಕ್ಷಣ ಹಾಗೂ ಆರೋಗ್ಯ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸುತ್ತಿರುವ ಡಾ. ಟಿ. ಶ್ರೀನಿವಾಸಪ್ಪ ಅವರು ಒಂದೇ ಸ್ಥಳದಲ್ಲಿ 16 ಗ್ರಾಮ ದೇವತೆಗಳನ್ನು ಪ್ರತಿಷ್ಠಾಪಿಸಿ ಸಾರ್ವಜನಿಕರಿಗೆ ದರ್ಶನದ ಅವಕಾಶ ಕಲ್ಪಿಸಿರುವುದು ಶ್ಲಾಘನೀಯ ಕಾರ್ಯವಾಗಿದೆ. ಲೋಕಕಲ್ಯಾಣದ ಉದ್ದೇಶದಿಂದ ಇಂತಹ ಧಾರ್ಮಿಕ ಕಾರ್ಯಕ್ರಮಗಳನ್ನು ಆಯೋಜಿಸುವ ಮೂಲಕ ಸಮಾಜ ಸೇವೆಯ ಜೊತೆಗೆ ದೈವಭಕ್ತಿಯನ್ನೂ ಬೆಳೆಸುತ್ತಿರುವುದು ಅಭಿನಂದನಾರ್ಹ ಎಂದು ಹೇಳಿದರು.

# ಅಕ್ರಮ ಮರಳು ಗಣಿಗಾರಿಕೆಗೆ ಕಡಿವಾಣ

• **ಮಲ್ಲಮ್ಮ ನುಡಿ ವಾರ್ತೆ ಬೆಂಗಳೂರು**

ರಾಜ್ಯದಲ್ಲಿ ಅಕ್ರಮ ಮರಳು ಗಣಿಗಾರಿಕೆ, ಸಂಗ್ರಹಣೆ ಹಾಗೂ ಸಾಗಾಣಿಕೆಯನ್ನು ಸಂಪೂರ್ಣವಾಗಿ ತಡೆಗಟ್ಟುವ ಉದ್ದೇಶದಿಂದ ಗೃಹ ಸಚಿವ, ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗೂ ಇ-ಆಡಳಿತ ಸಚಿವ ಪ್ರಿಯಾಂಕ್ ಖರ್ಗೆ ಅವರ ನಿರ್ದೇಶನದ ಮೇರೆಗೆ ರಾಜ್ಯ ಪೊಲೀಸ್ ಮಹಾನಿರ್ದೇಶಕರು (ಡಿಜಿ ಮತ್ತು ಐಜಿಪಿ) ರಾಜ್ಯದ ಎಲ್ಲಾ ಪೊಲೀಸ್ ಆಯುಕ್ತರು, ಪೊಲೀಸ್ ಮಹಾನಿರೀಕ್ಷಕರು, ಉಪ ಮಹಾನಿರೀಕ್ಷಕರು ಹಾಗೂ ಜಿಲ್ಲಾ ಪೊಲೀಸ್ ಅಧೀಕ್ಷಕರಿಗೆ ಸಮಗ್ರ ಸುತ್ತೋಲೆ ಹೊರಡಿಸಿದ್ದಾರೆ.

ಅಕ್ರಮ ಮರಳು ಗಣಿಗಾರಿಕೆ ಪರಿಸರಕ್ಕೆ ಹಾನಿ ಉಂಟುಮಾಡುವುದಲ್ಲದೆ, ಕಾನೂನು ಸುವ್ಯವಸ್ಥೆ ಮತ್ತು ಸರ್ಕಾರದ ಆದಾಯಕ್ಕೂ ಧಕ್ಕೆ ತರುತ್ತಿದೆ. ಇಂತಹ ಅಕ್ರಮ ಚಟುವಟಿಕೆಗಳನ್ನು ಯಾವುದೇ ಕಾರಣಕ್ಕೂ ಸಹಿಸದ 'ಶೂನ್ಯ ಸಹಿಷ್ಣುತೆ ನೀತಿಯನ್ನು ಸರ್ಕಾರ ಅನುಸರಿಸುತ್ತಿದ್ದು, ರಾಜ್ಯಾದ್ಯಂತ ಕಟ್ಟುನಿಟ್ಟಿನ ಜಾರಿಯನ್ನು ಖಚಿತಪಡಿಸಲು ಈ ಸುತ್ತೋಲೆ ಹೊರಡಿಸಲಾಗಿದೆ.

ಸುತ್ತೋಲೆಯಲ್ಲಿ ಜಿಲ್ಲೆ ಹಾಗೂ ತಾಲ್ಲೂಕು ಮಟ್ಟದಲ್ಲಿ ಈಗಾಗಲೇ ರಚಿಸಲಾಗಿರುವ ಟಾಸ್ಕ್ ಫೋರ್ಸ್‌ಗಳನ್ನು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸುವಂತೆ



ಸೂಚಿಸಲಾಗಿದೆ. ಅಕ್ರಮ ಮರಳು ಗಣಿಗಾರಿಕೆ ನಡೆಯುವ ಪ್ರದೇಶಗಳನ್ನು ಗುರುತಿಸಿ ನಿರಂತರ ನಿಗಾ ವಹಿಸುವುದು, ಅಕ್ರಮ ಸಾಗಾಣಿಕೆ ಮತ್ತು ಸಂಗ್ರಹಣೆಯನ್ನು ತಡೆಯುವುದು ಹಾಗೂ ಕಾನೂನು ಕ್ರಮ ಕೈಗೊಳ್ಳುವುದು ಸಂಬಂಧಿತ ಪೊಲೀಸ್ ಅಧಿಕಾರಿಗಳ ಜವಾಬ್ದಾರಿಯಾಗಿದೆ ಎಂದು ಸ್ಪಷ್ಟಪಡಿಸಲಾಗಿದೆ.

ರಾಜ್ಯದ ಗಡಿ ಪ್ರದೇಶಗಳು ಸೇರಿದಂತೆ ಅಂತರರಾಜ್ಯ ಮಾರ್ಗಗಳಲ್ಲಿ ಅಕ್ರಮ ಮರಳು ಸಾಗಾಣಿಕೆಯನ್ನು ತಡೆಗಟ್ಟಲು ಗಣಿ ಮತ್ತು ಭೂವಿಜ್ಞಾನ ಇಲಾಖೆ, ಕಂದಾಯ ಇಲಾಖೆ ಹಾಗೂ ಅರಣ್ಯ ಇಲಾಖೆಯೊಂದಿಗೆ ಸಮನ್ವಯ ಸಾಧಿಸಿ ಕಾರ್ಯನಿರ್ವಹಿಸುವಂತೆ ಸೂಚಿಸಲಾಗಿದೆ. ತನಿಖಾ ಕೇಂದ್ರಗಳು ಸಮರ್ಪಕವಾಗಿ ಕಾರ್ಯನಿರ್ವಹಿಸುತ್ತಿರುವುದನ್ನು ಖಚಿತಪಡಿಸಿಕೊಳ್ಳಲು ಹಾಗೂ ಅಗತ್ಯ ಮೂಲಸೌಕರ್ಯಗಳ ಕೊರತೆ ಕಂಡುಬಂದರೆ ಸಂಬಂಧಿತ ಇಲಾಖೆಯ ಗಮನಕ್ಕೆ ತರುವಂತೆ ನಿರ್ದೇಶಿಸಲಾಗಿದೆ.

**ಕಾನೂನು ಲೋಪವಾಗದಂತೆ ಕಣ್ಗಾವಲು**

"ಕಾನೂನಿಗಿಂತ ಯಾರೂ ದೊಡ್ಡವರಲ್ಲ. ಅಕ್ರಮ ಮರಳು ದಂಧೆಯಲ್ಲಿ ತೊಡಗಿರುವವರ ವಿರುದ್ಧ ಕಾನೂನು ಪ್ರಕಾರ ಕಠಿಣ ಕ್ರಮ ಜರುಗಿಸಲಾಗುವುದು. ಜೊತೆಗೆ ಕರ್ತವ್ಯ ಲೋಪ ಎಸಗುವ ಅಧಿಕಾರಿಗಳ ವಿರುದ್ಧವೂ ನಿರ್ದಾಕ್ಷಿಣ್ಯ ಶಿಸ್ತು ಕ್ರಮ ಕೈಗೊಳ್ಳಲಾಗುವುದು. ನೈಸರ್ಗಿಕ ಸಂಪತ್ತಿನ ಸಂರಕ್ಷಣೆ ಮತ್ತು ಕಾನೂನು ಲೋಪವಾಗದಂತೆ ಕಣ್ಗಾವಲು ಇರಿಸುವುದು ಸರ್ಕಾರದ ಆದ್ಯತೆಯಾಗಿದೆ ಎಂದಿದ್ದಾರೆ.

ಪ್ರತಿ ಪೊಲೀಸ್ ಘಟಕವು ತನ್ನ ವ್ಯಾಪ್ತಿಯಲ್ಲಿರುವ ಅಕ್ರಮ ಮರಳು ಚಟುವಟಿಕೆಗಳ ಬಗ್ಗೆ ಗುಪ್ತಚರ ಮಾಹಿತಿ ಸಂಗ್ರಹಿಸಿ, ಅಗತ್ಯವಿದ್ದಲ್ಲಿ ದಿಢೀರ್ ದಾಳಿ ನಡೆಸಬೇಕು. ಈ ಅಕ್ರಮ ದಂಧೆಯಲ್ಲಿ ನಿರಂತರವಾಗಿ ತೊಡಗಿರುವವರ ವಿರುದ್ಧ ಗೂಂಡಾ ಕಾಯ್ದೆಯಡಿ ಕ್ರಮ ಕೈಗೊಳ್ಳುವಂತೆಯೂ ಸುತ್ತೋಲೆಯಲ್ಲಿ ಸೂಚಿಸಲಾಗಿದೆ.

ಪ್ರತಿ ತಿಂಗಳ ಅಪರಾಧ ಪರಿಶೀಲನಾ ಸಭೆಯಲ್ಲಿ ಅಕ್ರಮ ಮರಳು ಗಣಿಗಾರಿಕೆ, ಸಾಗಾಣಿಕೆ ಹಾಗೂ ಸಂಗ್ರಹಣೆ ಪ್ರಕರಣಗಳ ಕುರಿತು ಠಾಣಾವಾರು ಪರಿಶೀಲನೆ ನಡೆಸಿ, ಅಧೀನ ಅಧಿಕಾರಿಗಳಿಗೆ ಅಗತ್ಯ ಸೂಚನೆಗಳನ್ನು ನೀಡಬೇಕು. ಅಲ್ಲದೆ, ಜಿಲ್ಲಾ ಮತ್ತು ತಾಲ್ಲೂಕು ಮಟ್ಟದ ಟಾಸ್ಕ್ ಫೋರ್ಸ್ ಸಭೆಗಳನ್ನು ನಿಯಮಿತವಾಗಿ ನಡೆಸಿ ಎಲ್ಲ ಇಲಾಖೆಗಳ ಸಮನ್ವಯದೊಂದಿಗೆ ಅಕ್ರಮ ಚಟುವಟಿಕೆಗಳನ್ನು ನಿಯಂತ್ರಿಸಲು ಕ್ರಮ ಕೈಗೊಳ್ಳುವಂತೆ ನಿರ್ದೇಶಿಸಲಾಗಿದೆ.

ಯಾವುದೇ ಪೊಲೀಸ್ ಘಟಕವು ತನ್ನ ವ್ಯಾಪ್ತಿಯಲ್ಲಿ ಅಕ್ರಮ ಮರಳು ಗಣಿಗಾರಿಕೆ ಹಾಗೂ ಸಾಗಾಣಿಕೆಯನ್ನು ತಡೆಯುವಲ್ಲಿ ವಿಫಲವಾದರೆ, ಸಂಬಂಧಿತ ಅಧಿಕಾರಿಗಳ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಲಾಗುವುದು ಎಂದು ಸುತ್ತೋಲೆಯಲ್ಲಿ ಎಚ್ಚರಿಕೆ ನೀಡಲಾಗಿದೆ.

> **ಅಕ್ರಮ ಮರಳು ಗಣಿಗಾರಿಕೆ ಮತ್ತು ಸಾಗಾಣಿಕೆ ರಾಜ್ಯದ ನೈಸರ್ಗಿಕ ಸಂಪತ್ತಿನ ಲೂಟಿ ಮಾತ್ರವಲ್ಲ, ಇದು ಕಾನೂನು ಸುವ್ಯವಸ್ಥೆ ಹಾಗೂ ಸಾರ್ವಜನಿಕ ಹಿತಾಸಕ್ತಿಗೆ ಸವಾಲು ಎಸೆಯುವ ಗಂಭೀರ ಅಪರಾಧವಾಗಿದೆ. ಸರ್ಕಾರ ಯಾವುದೇ ಅಕ್ರಮ ಚಟುವಟಿಕೆಯನ್ನು ಸಹಿಸುವುದಿಲ್ಲ. ಕಾನೂನನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸಿ, ತಪ್ಪಿತಸ್ಥರ ವಿರುದ್ಧ ನಿರ್ದಾಕ್ಷಿಣ್ಯ ಕ್ರಮ ಕೈಗೊಳ್ಳಬೇಕು ಎಂದು ಪೊಲೀಸ್ ಇಲಾಖೆಗೆ ಸ್ಪಷ್ಟ ನಿರ್ದೇಶನ ನೀಡಲಾಗಿದೆ.**
> **-ಪ್ರಿಯಾಂಕ್ ಖರ್ಗೆ**

# ಉತ್ತರ ಕ್ಷೇತ್ರದಲ್ಲಿಯೇ ಅಂದಾಜು 40 ಸಾವಿರ ನಕಲಿ ಮತದಾರರಿರುವ ಶಂಕೆ

• **ಮಲ್ಲಮ್ಮ ನುಡಿ ವಾರ್ತೆ ಬೀದರ್**

ಬೀದರ್ ಉತ್ತರ ಕ್ಷೇತ್ರವೊಂದರಲ್ಲಿಯೇ ಅಂದಾಜು 40,000 ನಕಲಿ ಮತದಾರರಿರುವ ಶಂಕೆ ಇದೆ ಎಂದು ನಾರಂಜಾ ಸಹಕಾರ ಸಕ್ಕರೆ ಕಾರ್ಖಾನೆಯ ಅಧ್ಯಕ್ಷರು ಹಾಗೂ ಜೆಡಿಎಸ್ ಮುಖಂಡರಾದ ಸೂರ್ಯಕಾಂತ ನಾಗಮಾರಪಳ್ಳಿ ಗಂಭೀರ ಆರೋಪ ಮಾಡಿದ್ದಾರೆ.

ನಗರದ ಜಿಲ್ಲಾ ಪತ್ರಿಕಾ ಭವನದಲ್ಲಿ ಮಂಗಳವಾರ ಸುದ್ದಿಗೋಷ್ಠಿ ಉದ್ದೇಶಿಸಿ ಮಾತನಾಡಿರುವ ಅವರು, ಈಗಾಗಲೆ 21,000 ನಕಲಿ ಮತದಾರರನ್ನು ಪತ್ತೆ ಹಚ್ಚಲಾಗಿ ಅವರೆಲ್ಲರ ವಿವರನ್ನು ಜಿಲ್ಲಾಧಿಕಾರಿಗಳಿಗೆ ದೂರು ಸಲ್ಲಿಸಲಾಗಿದೆ ಎಂದರು.

ಎಸ್.ಆಯ್.ಆರ್ ಅಭಿಯಾನವು ಮತದಾರರ ಪಟ್ಟಿಯನ್ನು ಶುದ್ಧೀಕರಿಸುವ ಅತ್ಯಂತ ಮಹತ್ವದ ಕಾರ್ಯವಾಗಿದ್ದು, ಅರ್ಹ ಮತದಾರರ ಹೆಸರು ಸೇರ್ಪಡೆ ಹಾಗೂ ಅನರ್ಹರ ಹೆಸರುಗಳನ್ನು ತೆಗೆದು ಹಾಕುವ ಮೂಲಕ ಪ್ರಜಾಪ್ರಭುತ್ವ ಮತ್ತು ಸಂವಿಧಾನದ ಆಶಯಗಳನ್ನು ಮತ್ತಷ್ಟು ಬಲಪಡಿಸುವ ಉದ್ದೇಶ ಹೊಂದಿರುವುದು ಸಂತೋಷ ಎಂದು ತಿಳಿಸಿದರು.



ಅನರ್ಹ ಮತದಾರರ ಹೆಸರುಗಳು ಚುನಾವಣೆಯ ಪಾರದರ್ಶಕತೆಗೆ ಧಕ್ಕೆ ಉಂಟು ಮಾಡುತ್ತವೆ ಎಂದು ಅವರು ಆರೋಪಿಸಿದರು.

ತೆಲಂಗಾಣದ ಜಹೀರಾಬಾದ್ ಹಾಗೂ ಸುತ್ತಮುತ್ತಲಿನ ಪ್ರದೇಶಗಳ ಕೆಲವು ನಿವಾಸಿಗಳು ಕರ್ನಾಟಕ ಮತ್ತು ತೆಲಂಗಾಣ ಎರಡೂ ರಾಜ್ಯಗಳಲ್ಲಿ ಮತದಾರರ ಗುರುತಿನ ಚೀಟಿ ಹೊಂದಿದ್ದು, ಚುನಾವಣೆ ವೇಳೆ ಬೀದರ್‌ಗೆ ಬಂದು ಮತ ಚಲಾಯಿಸುತ್ತಿದ್ದಾರೆ ಎಂದು ಆರೋಪಿಸಿದರು. ಅಲ್ಲದೆ, ಬೀದರ್ ನಗರದಲ್ಲಿಯೇ ಕೆಲವು ವ್ಯಕ್ತಿಗಳು ಎರಡು ಬೇರೆ ಮತಗಟ್ಟೆಗಳಲ್ಲಿ ಅಥವಾ ಗ್ರಾಮೀಣ ಹಾಗೂ ನಗರ ಭಾಗಗಳಲ್ಲಿ ಪ್ರತ್ಯೇಕ ಮತದಾರರ ಗುರುತಿನ ಚೀಟಿಗಳನ್ನು ಹೊಂದಿರುವ ಪ್ರಕರಣಗಳಿವೆ ಎಂದು ಹೇಳಿದರು.

ಪ್ರಸ್ತುತ ನಡೆಯುತ್ತಿರುವ ಎಸ್.ಆಯ್.ಆರ್ ಅಭಿಯಾನದಲ್ಲಿ ಸ್ಥಳೀಯ ಮಟ್ಟದ ಅಧಿಕಾರಿಗಳು ದಾಖಲೆಗಳ ಸಮರ್ಪಕ ಪರಿಶೀಲನೆ ಹಾಗೂ ಮತದಾರರ ನೈಜ ವಾಸಸ್ಥಳದ ದೃಢೀಕರಣವನ್ನು ಪರಿಣಾಮಕಾರಿಯಾಗಿ ನಡೆಸಬೇಕು. ಇಲ್ಲದಿದ್ದರೆ ಅನರ್ಹರ ಹೆಸರುಗಳು ಮತದಾರರ ಪಟ್ಟಿಯಲ್ಲಿಯೇ ಮುಂದುವರಿಯುವ ಸಾಧ್ಯತೆ ಇದೆ ಎಂದು ಆತಂಕ ವ್ಯಕ್ತಪಡಿಸಿದರು.

ಹೊರ ರಾಜ್ಯಗಳಿಂದ ಉದ್ಯೋಗಕ್ಕಾಗಿ ಬೀದರ್‌ಗೆ ಬಂದಿರುವ ಕೆಲವರ ಹೆಸರುಗಳನ್ನೂ ಮತದಾರರ ಪಟ್ಟಿಗೆ ಸೇರಿಸಿರುವ ಆರೋಪವಿದ್ದು, ವಿವಿಧ ರಾಜ್ಯಗಳ ವಲಸೆ ಕಾರ್ಮಿಕರು ಹಾಗೂ ಇತರ ಅನರ್ಹರ ಹೆಸರುಗಳ ಬಗ್ಗೆ ಸಮಗ್ರ ಪರಿಶೀಲನೆ ನಡೆಸಬೇಕು ಎಂದು ಒತ್ತಾಯಿಸಿದರು. ಕೆಲವು ವಿದ್ಯಾರ್ಥಿಗಳು ಹಾಗೂ ಮೃತ ವ್ಯಕ್ತಿಗಳ ಹೆಸರಿನಲ್ಲಿಯೂ ಮತದಾನ ನಡೆದಿರುವ ದಾಖಲೆಗಳು ತಮ್ಮ ಬಳಿ ಇವೆ ಎಂದು ಅವರು ಹೇಳಿದರು.

ಬೀದರ್ ಉತ್ತರ ವಿಧಾನಸಭೆ ಕ್ಷೇತ್ರವನ್ನು ಅತಿ ಸೂಕ್ಷ್ಮ ಕ್ಷೇತ್ರವೆಂದು ಪರಿಗಣಿಸಿ ವಿಶೇಷ ನಿಗಾ ವಹಿಸಬೇಕು. ಎಸ್.ಆಯ್.ಆರ್ ಅಭಿಯಾನವನ್ನು ಪಾರದರ್ಶಕವಾಗಿ ಜಾರಿಗೊಳಿಸಿ, ಅನರ್ಹ ಮತದಾರರ ಹೆಸರುಗಳನ್ನು ತೆರವುಗೊಳಿಸುವ ಮೂಲಕ ಶುದ್ಧ ಮತದಾರರ ಪಟ್ಟಿಯನ್ನು ಸಿದ್ಧಪಡಿಸಬೇಕು, ನಕಲಿ ಮತದಾರರ ಹೆಸರುಗಳನ್ನು ಮತದಾರರ ಪಟ್ಟಿಯಿಂದ ಶಾಶ್ವತವಾಗಿ ತೆರವುಗೊಳಿಸಬೇಕಾದರೆ ಆಧಾರ ಕಡ್ಡಾಯಗೊಳಿಸಬೇಕು. ಅದರಲ್ಲೂ ಬೈಮೆಟ್ರಿಕ್ ಪದ್ದತಿ ಕಟ್ಟು ನಿಟ್ಟಾಗಿ ಜಾರಿಯಾಗಬೇಕು ಎಂದು ನಾಗಮಾರಪಳ್ಳಿ ಆಗ್ರಹಿಸಿದರು.

# ಮಾದಕ ದ್ರವ್ಯ ಜಪ್ತಿ, ಆರೋಪಿಗಳ ಬಂಧನ..!

• **ಮಲ್ಲಮ್ಮ ನುಡಿ ವಾರ್ತೆ ಬೀದರ್**

ಜಿಲ್ಲೆಯನ್ನು ನಶೆಮುಕ್ತ ಹಾಗೂ ಮಾದಕದ್ರವ್ಯ ಮುಕ್ತವನ್ನಾಗಿಸುವ ನಿಟ್ಟಿನಲ್ಲಿ ಬೀದರ್ ಜಿಲ್ಲಾ ಪೊಲೀಸರು 2023ರ ಜನವರಿಯಿಂದ 2026ರ ಜುಲೈ 27ರ ಅವಧಿಯಲ್ಲಿ ಕೈಗೊಂಡಿರುವ ಬೃಹತ್ ಕಾರ್ಯಾಚರಣೆ ನಡೆಸಿ ಜಿಲ್ಲಾದ್ಯಂತ ನಡೆಸಿದ ಸರಣಿ ದಾಳಿಗಳಲ್ಲಿ ಒಟ್ಟು 145 ಪ್ರಕರಣಗಳನ್ನು ದಾಖಲಿಸಿಕೊಂಡು, 202 ಆರೋಪಿಗಳನ್ನು ಬಂಧಿಸಲಾಗಿದೆ ಎಂದು ಬೀದರ ಜಿಲ್ಲಾ ಪೊಲೀಸ್ ವರೀಷ್ಠಾಧಿಕಾರಿ ಪ್ರದೀಪ್ ಗುಂಟಿ ಹೇಳಿದರು

ಅವರು ಮಂಗಳವಾರ ನಗರದ ಪೊಲೀಸ್ ಅಧೀಕ್ಷಕರ ಕಛೇರಿ ಸಭಾಂಗಣದಲ್ಲಿ ಕರೆದ ಪತ್ರಿಕಾಗೋಷ್ಠಿಯನ್ನುದ್ದೇಶಿಸಿ ಮಾತನಾಡಿದರು ಈ ಕಾರ್ಯಾಚರಣೆಗಳ ವೇಳೆ ಒಟ್ಟು ₹28,92,45,989 (₹28.92 ಕೋಟಿ) ಮೌಲ್ಯದ ವಿವಿಧ ನಮೂನೆಯ ಮಾದಕ ದ್ರವ್ಯಗಳನ್ನು ಜಪ್ತಿ ಮಾಡಲಾಗಿದೆ ಅವುಗಳಲ್ಲಿ



ಗಾಂಜಾ: 3,524.647 ಕೆ.ಜಿ,
**ವಿವಿಧ ಮಾತ್ರೆಗಳು:** 66,955,
**ಕೆಮ್ಮಿನ ಸಿರಪ್ ಬಾಟಲಿಗಳು:** 1,991,
**ಕೊಕೇನ್:** 366 ಗ್ರಾಂ,ಎಂಡಿ ಮೆಥಾಂಫಿಟಮೈನ್ (MDMethamphetamine): 499 ಗ್ರಾಂ,ಎಂಡಿಎಂಎ (ಒಆಒಂ): 6.75 ಗ್ರಾಂ ಹಾಗೂ 5 ಮಾತ್ರೆಗಳು ಸೇರಿವೆ.

**ವರ್ಷಾವಾರು ಕಾರ್ಯಾಚರಣೆಯ ಅಂಕಿ-ಅಂಶಗಳು:**

**2023:** 32 ಪ್ರಕರಣಗಳು ದಾಖಲಾಗಿ 66 ಆರೋಪಿಗಳ ಬಂಧನ. ₹11,21,55,526/- ಮೌಲ್ಯದ ಮಾದಕ ವಸ್ತು ಜಪ್ತಿ.

**2024:** 24 ಪ್ರಕರಣಗಳು ದಾಖಲಾಗಿ 44 ಆರೋಪಿಗಳ ಬಂಧನ. ₹5,33,75,700/- ಮೌಲ್ಯದ ಮಾದಕ ವಸ್ತು ಜಪ್ತಿ.

**2025:** 34 ಪ್ರಕರಣಗಳು ದಾಖಲಾಗಿ 55 ಆರೋಪಿಗಳ ಬಂಧನ. ₹11,16,96,926/- ಮೌಲ್ಯದ ಮಾದಕ ವಸ್ತು ಜಪ್ತಿ.

**2026(ಜುಲೈ 27ರವರೆಗೆ):** 55 ಪ್ರಕರಣಗಳು ದಾಖಲಾಗಿ 37 ಆರೋಪಿಗಳ ಬಂಧನ. ₹1,20,17,837/- ಮೌಲ್ಯದ ಮಾದಕ ಜಪ್ತಿಮಾಡಲಾಗಿದೆ.

**ಜಾಗೃತಿ ಅಭಿಯಾನಕ್ಕೆ ವಿಶೇಷ ಆದ್ಯತೆ:**

ಅಪರಾಧಗಳನ್ನು ತಡೆಯುವುದರ ಜೊತೆಗೆ, ಯುವಜನತೆ ಮತ್ತು ಸಾರ್ವಜನಿಕರಲ್ಲಿ ಅರಿವು ಮೂಡಿಸಲು ಪೊಲೀಸರು ವ್ಯಾಪಕ ಜಾಗೃತಿ ಕಾರ್ಯಕ್ರಮಗಳನ್ನು ಆಯೋಜಿಸಿದ್ದಾರೆ. 2024 ರಿಂದ 2026ರ ನಡುವೆ ಒಟ್ಟು 13,853 ಜಾಗೃತಿ ಕಾರ್ಯಕ್ರಮಗಳನ್ನು ನಡೆಸಿ, ಸುಮಾರು 75,000ಕ್ಕೂ ಹೆಚ್ಚು ವಿದ್ಯಾರ್ಥಿಗಳು ಹಾಗೂ 65,000ಕ್ಕೂ ಹೆಚ್ಚು ಸಾರ್ವಜನಿಕರನ್ನು ತಲುಪಲಾಗಿದೆ. ಜೊತೆಗೆ ಸಾಮಾಜಿಕ ಮಾಧ್ಯಮಗಳ ಮೂಲಕವೂ ನಿರಂತರವಾಗಿ ಜಾಗೃತಿ ಅಭಿಯಾನ ಹಮ್ಮಿಕೊಳ್ಳಲಾಗಿದೆ. ಜಿಲ್ಲೆಯಲ್ಲಿ ಮಾದಕ ದ್ರವ್ಯ ಜಾಲವನ್ನು ಸಂಪೂರ್ಣವಾಗಿ ನಿರ್ಮೂಲನೆ ಮಾಡುವವರೆಗೆ ಪೊಲೀಸರ ಈ ವಿಶೇಷ ಕಾರ್ಯಾಚರಣೆ ಹಾಗೂ ಕಠಿಣ ಕ್ರಮಗಳು ಮುಂದುವರಿಯಲಿವೆ ಎಂದರು.

# ಪ್ರಾಮಾಣಿಕ ಪತ್ರಿಗಾರಿಕೆಯಿಂದ ಸಮಾಜದಲ್ಲಿ ಗೌರವ ಹೆಚ್ಚಳ

• **ಮಲ್ಲಮ್ಮ ನುಡಿ ವಾರ್ತೆ ಬೀದರ್**

ಪ್ರಾಮಾಣಿಕ ಹಾಗೂ ಪಾರದರ್ಶಿಕೆಯಿಂದ ಪತ್ರಿಕಾ ರಂಗದಲ್ಲಿ ತೊಡಗಿಕೊಂಡಲ್ಲಿ ಸಮಾಜದಲ್ಲಿ ವೃತ್ತಿ ಹಾಗೂ ವ್ಯಕ್ತಿ ಗೌರವ ಎರಡು ವೃದ್ಧಿಯಾಗುತ್ತವೆ ಎಂದು ಜಿಲ್ಲಾಧಿಕಾರಿ ಶಿಲ್ಪಾ ಶರ್ಮಾ ತಿಳಿಸಿದರು.

ಸೋಮವಾರ ನಗರದ ಗುರುನಾನಕ ಗೇಟ್ ಒ:ಳಗೆ ಎಸ್.ಆರ್.ಎಸ್ ಫಂಕ್ಷನ್ ಹಾಲ್‌ನಲ್ಲಿ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದಿಂದ ಜರುಗಿದ ಪತ್ರಿಕಾ ದಿನಾಚರಣೆ ಉದ್ಘಾಟಿಸಿ ಮಾತನಾಡಿರುವ ಅವರು, ಪ್ರಜಾಪ್ರಭುತ್ವದ ನಾಲ್ಕೆನೇ ಸ್ಥಮಭವಾಗಿರುವ ಪತ್ರಿಕಾ ರಂಗದಲ್ಲಿ ನಾವು ಎಚ್ಚರಿಕೆಯ ಹೆಜ್ಜೆಯನ್ನಿಡಬೇಕಿದೆ. ನಾವು ಯಾವತ್ತೂ ಒಬ್ಬರ ಪರವಾಗಿ ನಮ್ಮ ಬರವಣಿಗೆ ಸೀಮಿತವಾಗಿರದೆ ನಿಸ್ಪಕ್ಷಪಾತವಾಗಿ ನಿಂತರೆ ನಮ್ಮ ವೃತ್ತಿ ಧರ್ಮಕ್ಕೆ ಪಾವಿತ್ರತೆ ತಂದು ಕೊಳ್ಳಬಹುದಾಗಿದೆ ಎಂದರು.

ಕಳೆದ ಎರಡು ಮೂರು ತಿಂಗಳಿನಿಂದ ದೇಶದಲ್ಲಿ ಅನೇಕ ಘಟನಾವಳಿಗಳು ಚರ್ಚೆಯಲ್ಲಿವೆ. ಇದು ವ್ಯಾಪಕವಾಗಿ ವಿಸ್ತಾರಗೊಳ್ಳಲು ಮಾಧ್ಯಮಗಳ ಪಾತ್ರ ಬಹಳಷ್ಟಿದೆ. ಆದರೆ ನಮ್ಮ ಬರವಣಿಗೆ ಮತ್ತಷ್ಟು ಪರಿಣಾಮಕಾರಿಯಾಗಬೇಕಾದರೆ ವಿಶ್ವಾಸಾರ್ಹ ಸುದ್ದಿ ಸಂಗ್ರಹಣೆಗೆ ಒತ್ತು ನೀಡಬೇಕು. ಸಮಾಜದ ಕಟ್ಟ ಕಡೆಯ ವ್ಯಕ್ತಿಗೂ ಮಾಧ್ಯಮದವರ ಮೇಲೆ ಅಭಿಮಾನ ಬರುವಂತೆ ನಾವು ನಡೆದುಕೊಳ್ಳಬೇಕೆಂದು ಕರೆ ನೀಡಿದರು.

ಅಧ್ಯಕ್ಷತೆ ವಹಿಸಿದ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ರಾಜ್ಯಾಧ್ಯಕ್ಷರಾದ ಶಿವಾನಂದ ತಗಡೂರು ಅವರು ಮಾತನಾಡಿ, ಪತ್ರಕರ್ತರು



ಸಮಾಜದ ನಿಜವಾದ ವೈದ್ಯರು. ಸಮಾಜಕ್ಕಾಗುವ ರೋಗವನ್ನು ಸರಿಪಡಿಸುವ ಶಕ್ತಿ ಮಾಧ್ಯಮಕ್ಕಿದೆ. ನಮ್ಮ ವೃತ್ತಿ ಅತ್ಯಂತ ಪವಿತ್ರವಾದದ್ದು. ನಮ್ಮ ವೃತ್ತಿಗೆ ನ್ಯಾಯ ದೊರಕಿಸಿಕೊಡುವ ಕಾರ್ಯ ಮಾಡಬೇಕಿದೆ. ನಮ್ಮ ಬರವಣಿಗೆ ಒಬ್ಬ ಕಟ್ಟಕಡೆಯ ವ್ಯಕ್ತಿಯ ಕಣ್ಣೊರೆಸುವಂತಾದರೆ ಅಂದು ನಮ್ಮ ಬರವಣಿಗೆ ಸಾರ್ಥಕವಾದಂತೆ ಎಂದು ಪ್ರತಿಪಾದಿಸಿದರು.

ವೃತ್ತಿಪರತೆಯಲ್ಲಿ ವ್ಯಕ್ತಿ ಮುಖ್ಯವಲ್ಲ. ಸಂಘಟನೆ ಮುಖ್ಯ. ನಾವು ಸಂಘಜೀವಿಯಾಗಿ ಬದುಕಿದರೆ ನಮ್ಮ ಶಕ್ತಿ ಹೆಚ್ಚಾಗುತ್ತದೆ. ಬೀಡಾಡಿ ದನಗಳ ಹಾಗೆ ಸಂಘಟನೆ ಬಿಟ್ಟು ಹೊರ ಹೋಗದೆ ಸಂಘದೊಂದಿಗೆ ಗುರುತಿಸಿದಲ್ಲಿ ನಿಮಗೆ ಬೆಲೆ ಇರುತ್ತದೆ. ಸಮಾಜ ನಿಮ್ಮನ್ನು ಪ್ರೀತಿಪೂರ್ವಕವಾಗಿ ನೋಡುತ್ತದೆ ಎಂದರು.

ಇಂದು ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘ ನಾಡಿನ ಎಲ್ಲ ಜಿಲ್ಲಾ ಕೇಂದ್ರಗಳು, ತಾಲೂಕು ಕೇಂದ್ರಗಳಲ್ಲಿ ಮಾತ್ರವಲ್ಲದೆ ಹೊರನಾಡಿನಲ್ಲೂ ತನ್ನ ಬಾಹು ಚಾಚಿದೆ. ಮುಂಬೈ, ಕಾಸರಗೂಡುಗಳಂತಹ ಗಡಿ ಪ್ರದೇಶಗಳಲ್ಲಿ ಅದು ಪ್ರಭಾವಶಾಲಿಯಾಗಿ ಬೆಳೆದಿದೆ. ಅದಕ್ಕೆಲ್ಲ ತಾವು ಪಟ್ಟ ಪರಿಶ್ರಮ ಎಂಬುದನ್ನು ಹೆಮ್ಮೆಯಿಂದ ಹೇಳಿಕೊಳ್ಳಬೇಕೆಂದು ತಗಡೂರು ಕರೆ ನೀಡಿದರು.

ಸಂಘದ ಜಿಲ್ಲಾಧ್ಯಕ್ಷ ಅನಂದ ದೇವಪ್ಪ ಪ್ರಾಸ್ತಾವಿಕ ಮಾತನಾಡಿ, ರಾಜ್ಯದ ಎಲ್ಲ ಜಿಲ್ಲೆಗಳಲ್ಲಿ ಪತ್ರಿಕಾ ಭವನವನ್ನು ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘವೇ ನಿರ್ವಹಣೆ ಮಾಡಿಕೊಂಡು ಬರುತ್ತಿದೆ. ಬೀದರ್ ಜಿಲ್ಲೆಯಲ್ಲೂ ಕೂಡಲೇ ಕೆಯುಡಬ್ಲುಜೆಗೆ ಸಂಘದ ನಿರ್ವಹಣೆ ಜವಾಬ್ದಾರಿ ವಹಿಸಿ. ನಿತ್ಯ ಒಂದಲ್ಲ ಒಂದು ಸಂಘಟನೆ ಹೆಸರಲ್ಲಿ ಕಿರಿಕ್ ಮಾಡುವವರಿಗೆ ಇದರಿಂದ ದೂರವಿಟ್ಟು ಹಿಂದು ಅವರು ಎಸಗಿದ ಭ್ರಷ್ಟಾಚಾರದ ಸಮಗ್ರ ತನಿಖೆ ಆಗಬೇಕೆಂದು ಕೋರಿದರು. ಬೀದರ್ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಬಸವರಾಜ ಜಾಬಶೆಟ್ಟಿ ಮಾತನಾಡಿದರು.

ಈ ಸಂದರ್ಭದಲ್ಲಿ ರಾಜ್ಯದ ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತರಾಜ ಸಚಿವರು ಹಾಗೂ ಜಿಲ್ಲಾ ಉಸ್ತುವಾರಿ ಮಂತ್ರಿ ಈಶ್ವರ ಖಂಡ್ರೆ ಅವರು ದೂರವಾಣಿ ಮೂಲಕ ತಮ್ಮ ಶುಭಾಷಯ ತಿಳಿಸಿದರು.

ಇದೇ ವೇಳೆ ಎಸ್.ಎಸ್ ಎಲ್.ಸಿ ಹಾಗೂ ಪಿ.ಯು.ಸಿಯಲ್ಲಿ ಶೇಕಡಾ 70 ಪ್ರತಿಶತಕ್ಕಿಂತ ಅಧಿಕ ಅಂಕ ಗಳಿಸಿದ ಪತ್ರಕರ್ತರ ಮಕ್ಕಳಾದ ಕು.ಅಹಮ್ಮದಿ ನಾಝ್, ಶೇಖ್ ಶಾದಿಯಾ, ಭೂವನೇಶ್ವರಿ, ಸುಹಾಸಿನಿ, ಹರ್ಷಿತಾ, ತನಿಷ್, ಪ್ರಜ್ವಲ್, ಶೃತಿ ಹಾಗೂ ಇತರರಿಗೆ ಪ್ರತಿಭಾ ಪುರಸ್ಕಾರ ವಿತರಿಸಲಾಯಿತು. ಎಲ್ಲ ತಾಲೂಕು ಅಧ್ಯಕ್ಷ-ಪ್ರಧಾನ ಕಾರ್ಯದರ್ಶಿಗಳಿಗೆ ಸನ್ಮಾನಿಸಿ ಗೌರವಿಸಲಾಯಿತು.

ರಾಜ್ಯ ಕಾರ್ಯಕಾರಿಣಿ ಸಮಿತಿ ಸದಸ್ಯ ಅಪ್ಪಾರಾವ್ ಸೌದಿ, ರಾಷ್ಟ್ರೀಯ ಕಾರ್ಯಕಾರಿಣಿ ಮಂಡಳಿ ಸದಸ್ಯ ಬಸವರಾಜ ಪವಾರ, ಸಂಘದ ಗೌರವ ಸಲಹೆಗಾರರಾದ ಗಂಧರ್ವ ಸೇನಾ, ಮಲ್ಲಿಕಾರ್ಜುನ ಬಿರಾದಾರ, ಉಪಾಧ್ಯಕ್ಷರಾದ ಬಸವರಾಜ ಕಾಮಶೆಟ್ಟಿ, ಪ್ರಥ್ವಿರಾಜ.ಎಸ್, ಶ್ರೀಕಾಂತ ಬಿರಾದಾರ, ಕಾರ್ಯದರ್ಶಿ ಸ್ವಾಮಿದಾಸ ನಾಗೂರೆ, ಸಂತೋಷ ಚಟ್ಟಿ, ಖಜಾಂಚಿ ಸುನಿಲಕುಮಾರ ಕುಲಕರ್ಣಿ ಹಾಗೂ ವೇದಿಕೆಯಲ್ಲಿದ್ದರು.

ಸಂಘದ ಸದಸ್ಯರಾದ ಪ್ರಿಯಂಕಾ ಗುರುರಾಜ ಹಾಗೂ ಸಂಗಡಿಗರಿಂದ ವಂದೆ ಮಾತ್ರಂ ಗೀತೆ ಜರುಗಿತು. ಐಎಫ್‌ಡಬ್ಲುಜೆ ಸದಸ್ಯ ಅಶೋಕಕುಮಾರ ಕರಂಜಿ ಸ್ವಾಗತಿಸಿ, ಕಾರ್ಯದರ್ಶಿ ಶಶಿಕಾಂತ ಶೆಂಬೆಳ್ಳಿ ಕಾರ್ಯಕ್ರಮ ನಿರೂಪಿಸಿ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಶಿವಕುಮಾರ ಸ್ವಾಮಿ ವಂದಿಸಿದರು.

**PAPER PUBLICATION**
**IN THE COURT OF THE II ADDL. SR. CIVIL JUDGE AT BIDAR**
**MVC NO. 440/2023**

RAVINDRA @RAVI Son of Manikappa, aged 48 years, Occupation Coolie/Driver, R/o village Meenkera, Tq. Humnabad, Dist. Bidar, Now at Vaishnavi colony Bidar.
**...Claimant.**

-Versus-

1) KISHOR Son of Tanaji Reddy, aged Major, Occupation Business, R/o village Yalladgundi, Tq. Basavakalyan, Dist. Bidar. (Owner of the Motorcycle Splendor Plus Regd. No. KA-56/J-1792)

2) THE Manager National Insurance company Ltd. Gurgaon DO-1, SCO No.41-42-43, Sector-31, Gurgaon-122001, Branch office Bidar.
(Vide Policy No.36140031226702521919)
(Valid from 12-02-2023 To 11-02-2024)
**.Respondents**

**NOTICE TO:**
**KISHOR Son of Tanaji Reddy, aged Major, Occupation Business, R/o village Yalladgundi, Tq. Basavakalyan, Dist. Bidar. (Owner of the Motorcycle Splendor Plus Regd. No. KA-56/J-1792)**

Whereas the above named claimant, has filed the claim petition U/s 166 of M.V. Act against the respondents, for grant of compensation on account of injuries sustained by him in a motor vehicle accident, and this Honble court has issued the notices on several times to the respondent No.1 through the court and also through Regd. Post, which were got returned un-served, which shows that, you are willfully and deliberately avoiding the service of notice.

Therefore, you are hereby directed to appear before this court on 10/9/26 at 11.00 am, either in person or through your pleader duly instructed to answer the claim of claimant, failing which the claim petition will be heard and decided in you absence, in accordance with law.

Given under my hand and the seal of the court, this the 6th day of July 2026 at Bidar

**// By order of the court //**
**Chief Ministerial Officer,Prl. Sr. Civil Judge at Bidar.**

---

**:CITATION:**
**IN THE COURT OF THE PRL. CIVIL JUDGE AND JMFC., AT HUMNABAD.**
**CRL. MISC. No.4249/2026.**

**Petitioners :**
Sandhyarani W/o Late Pradeep Kumar, Age: 35-yrs. Occu: House hold. R/o H. No.8/66 village Hudagi. Tq. Humnabad. Dist. Bidar.

**Respondent:**
**The Registrar of Birth and Death through The Tahasildar Humnabad. Dist. Bidar.**

**Sub: Petition U/Sec. 13(3) of Birth and Death Registration Act-1969**

Whereas, the above mentioned petitioner has filed the petition under section 13(3) of Birth and Death Registration Act-1969 praying this Honorable Court to issue Death Certificate of Husband of petitioner by namely LATE. PRADEEP KUMAR S/O GURULINGAPPA SINDHANAKERA, he has died on 26.05.2021 at H. No.8/66, Village Hudagi. Tq. Humnabad, Dist. Bidar. The petitioner claiming the Death Certificate of said for transfer of property and other official purpose and home record.

Therefore, it is hereby proclaimed that if any persons have got any objection in this regard, may approach to this Court on 23.09.2026 at 11.00 AM in person or any authorized pleader to answer such claim otherwise the matter will be heard and determined in your absence as per law.

Given under my hand and seal of he court, this the 22-07-2026.

**//By order of the court//**
**Chief Ministerial Officer,**
**Prl. Civil Judge & JMFC Court, Humnabad.**

---

**:CITATION:**
**IN THE COURT OF THE PRL. CIVIL JUDGE AND JMFC., AT HUMNABAD.**
**CRL. MISC. No.4264/2026.**

**Petitioners :**
1. Ratnamma W/o Late Gundappa, Age: 77-yrs. Occu: House hold. R/o H. No.1/124/3 Village Kappargaon. Tq. Humnabad.
2. Rajshekhar S/o Gundappa Bhaskar, Age: 52-yrs. Occu: Agriculture. R/o Village Kappargaon, Tq. Humnabad.
3. Pushpa D/o Gundappa, W/o Vishwanath, Age: 56-yrs. Occu: House hold. R/o Gulbarga.
4. Jagadevi W/o Ramesh Gadag, Age: 53-yrs. Occu: House hold. R/o Mumbai-MS.
5. Surekha Ashok Mistri, Age: 43-yrs. Occu: House hold, R/o Mumbai-MS.
6. Mallamma W/o Nagendrappa Kote, Age: 43-yrs. Occu: House hold. R/o Chincholi-H. Kalaburagi.
7. Panchasheela D/o Gundappa Bhaskar, Age: 41-yrs. Occu: House hold. R/o Village Kappargaon, Tq. Humnabad.

**Respondent:**
**The Registrar of Birth and Death through The Tahasildar Humnabad.**

**Sub: Petition U/Sec. 13(3) of Birth and Death Registration Act-1969**

Whereas, the above mentioned petitioners have filed the petition under section 13(3) of Birth and Death Registration Act-1969 praying this Honorable Court to issue Death Certificate of husband of petitioner No.1 and Father of the petitioner No. 2 to 7 by namely LATE. GUNDAPPA S/O KHATALAPPA, who has died on 30.08.1987 at Village Kappargaon, Tq. Humnabad Dist. Bidar. The petitioners claiming the Death Certificate of said for transfer of property and other official purpose and home record.

Therefore, it is hereby proclaimed that if any persons have got any objection in this regard, may approach to this Court on 24.09.2026 at 11.00 AM in person or any authorized pleader to answer such claim otherwise the matter will be heard and determined in your absence as per law.

Given under my hand and seal of he court, this the 23-07-2026

**//By order of the court//**
**Chief Ministerial Officer,**
**Prl. Civil Judge & JMFC Court, Humnabad.**

---

**:CITATION:**
**IN THE COURT OF THE PRL. CIVIL JUDGE AND JMFC., AT HUMNABAD.**
**CRL. MISC. No.4232/2026.**

**Petitioners :**
Shabbeer Miya S/o Maheboob Sab, Age: 66-yrs. Occu: Agriculture, R/o Village Jalasangi. Tq. Humnabad. Dist. Bidar.

**Respondent:**
**The Registrar of Birth and Death through The Tahasildar Humnabad. Dist. Bidar.**

**Sub: Petition U/Sec. 13(3) of Birth and Death Registration Act-1969**

Whereas, the above mentioned petitioner has filed the petition under section 13(3) of Birth and Death Registration Act-1969 praying this Honorable Court to issue Death Certificate of Father of petitioner by namely LATE. MAHEBOOB S/O CHAND SAB, he has died on 01.01.1980 at Village Allur. Tq. Humnabad, Dist. Bidar. The petitioner claiming the Death Certificate of said for transfer of property and other official purpose and home record.

Therefore, it is hereby proclaimed that if any persons have got any objection in this regard, may approach to this Court on 02.09.2026 at 11.00 AM in person or any authorized pleader to answer such claim otherwise the matter will be heard and determined in your absence as per law.

Given under my hand and seal of he court, this the 20-07-2026.

**//By order of the court//**
**Chief Ministerial Officer,**
**Prl. Civil Judge & JMFC Court, Humnabad.**

---

**:CITATION:**
**IN THE COURT OF THE PRL. CIVIL JUDGE AND JMFC., AT HUMNABAD.**
**CRL. MISC. No. 4250/2026.**

**Petitioners:**
1. Sarojani W/o late Balaji. Age: 58-yrs. Occu: House hold & Agriculture. R/o H. No.2/105, Village Sultanbad. Tq. Humnabad. Dist. Bidar.
2. Sangeeta W/o Raghavendra. D/o Late Balaji. Age: 39-yrs. Occu: House hold. R/o Village Sultanabad. Tq. Humnabad. Now at Village Sonth.
3. Sujata W/o Chandrakanth. D/o Late Balaji. Age: 37-yrs. Occu: House hold. R/o Village Sultanabad. Tq. Humnabad. Now at Village Kattalli.
4. Vishal S/o Late Balaji. Age: 27-yrs. Occu: Agriculture, R/o Village Sultanabad. Tq. Humnabad.

**Respondent:**
**The Registrar of Birth and Death through The Tahasildar Humnabad. Dist. Bidar.**

**Sub: Petition U/Sec. 13(3) of Birth and Death Registration Act-1969**

Whereas, the above mentioned petitioner has filed the petition under section 13(3) of Birth and Death Registration Act-1969 praying this Honorable Court to issue Death Certificate of Husband of petitioner No.1 and Father of petitioner 2 to 4 by namely LATE. BALAJI S/O VISHWANATH MADREWAR, he was died on 25.10.2001 at Village Sultanbad. Tq. Humnabad, Dist. Bidar. The petitioner claiming the Death Certificate of said for transfer of property and other official purpose and home record.

Therefore, it is hereby proclaimed that if any persons have got any objection in this regard, may approach to this Court on 23.09.2026 at 11.00 AM in person or any authorized pleader to answer such claim otherwise the matter will be heard and determined in your absence as per law.

Given under my hand and seal of he court, this the 22-07-2026.

**//By order of the court//**
**Chief Ministerial Officer,**
**Prl. Civil Judge & JMFC Court, Humnabad.**

---

# ಯೋಗವನ್ನು ಪ್ರತಿದಿನ ಅಭ್ಯಾಸ ಮಾಡಿ ನಿಮ್ಮ ಜೀವನವನ್ನು ಉಜ್ವಲಗೊಳಿಸಿಕೊಳ್ಳಿ



• ಮಲ್ಲಮ್ಮ ನುಡಿ ವಾರ್ತೆಬಸವನಬಾಗೇವಾಡಿ

ತಾಲೂಕಿನ ನಾಗೂರು ಗ್ರಾಮದ ಸರ್ಕಾರಿ ಕನ್ನಡ ಹಿರಿಯಪ್ರಾಥಮಿಕ ಶಾಲೆಯಲ್ಲಿ 10 ದಿನಗಳ ಯೋಗ ಶಿಬಿರಕ್ಕೆಸೋಮವಾರಚಾಲನೆನೀಡಲಾಯಿತು.ಜಿಲ್ಲಾ ಶಾಲಾ ಉಪನಿರ್ದೇಶಕರಾದ ಎಂ.ಎ.ಗುಳೇದಗುಡ್ಡ ಕಾರ್ಯಕ್ರಮಉದ್ಘಾಟಿಸಿ, ಶಾರೀರಿಕ ಹಾಗೂ ಮಾನಸಿಕಆರೋಗ್ಯದಮೇಲೆಬೆಳಕು ಚೆಲ್ಲುವ ಯೋಗವನ್ನು ಪ್ರತಿದಿನ ಅಭ್ಯಾಸ ಮಾಡಿನಿಮ್ಮ ಜೀವನವನ್ನು ಉಜ್ವಲಗೊಳಿಸಿಕೊಳ್ಳಿ ಎಂದು ಹೇಳಿದರು. ಕ್ಷೇತ್ರ ಶಿಕ್ಷಣಾಧಿಕಾರಿ ವಸಂತ ರಾಠೋಡ ಮಾತನಾಡಿ,ಭಾರತೀಯರು ಜಗತ್ತಿಗೆ ನೀಡಿದ ಕೊಡುಗೆ ಯೋಗ, ಇಂತಹ ಯೋಗವನ್ನುವಿದೇಶಿಯರು ಕಲಿತು ನಮ್ಮ ದೇಶಕ್ಕೆ ಬಂದು ತರಬೇತಿ ನೀಡುತ್ತಿರುವ ವಿಶೇಷವಾಗಿ ಜರ್ಮನಿಯಿಂದ ಬಂದಂತಹ ಅಂತರರಾಷ್ಟ್ರೀಯಯೋಗ ತರಬೇತುದಾರರಾದ ಕುಮಾರಿ ಲಿಂಡಾ ಮತ್ತು ನಾಗೂರುಶಾಲೆಯ ಶಿಕ್ಷಕರಾದ ರಾಜಶೇಖರ ಗುಬ್ಬಿ ಇವರು ಹತ್ತು ದಿನಗಳ ಕಾಲ ಯೋಗ ಶಿಬಿರವನ್ನು ಹಮ್ಮಿಕೊಂಡಿದ್ದು ಹೆಮ್ಮೆಯವಿಷಯಎಂದರು. ದಿವ್ಯ ಸಾನಿಧ್ಯವನ್ನು ವಹಿಸಿದ್ದ ಸಿದ್ದಲಿಂಗ ಮಹಾಸ್ವಾಮೀಜಿ ಮಾತನಾಡಿದರು.ಶಿಕ್ಷಣಸಂಯೋಕರಾದ ಎ.ಎಸ.ಗುಬ್ಬಾ, ಬಿ.ಆರ್.ಪಿಗಳಾದ ಎಂ.ವಿ. ಗಬ್ಬೂರ, ಸಿ.ಆರ್.ಪಿಗಳಾದ ಮಹೇಶ ಪೂಜಾರಿ , ಮುಖ್ಯಗುರುಗಳಾದ ಸಂಗಮೇಶ್‌ಪೂಜಾರ್,ಎಸ್. ಬಿ ಗಂಗೂರ , ಪಿ. ಎಸ್ ಹೊಸಮಠ, ರೇವಣಸಿದ್ದ ನಂದ್ಯಾಳ ವೇದಿಕೆಯ ಮೇಲೆ ಉಪಸ್ಥಿತರಿದ್ದರು. ಮುಖಂಡರಾದ ಚಂದ್ರಶೇಖರ ಮುಳವಾಡ, ಹೈದರಸಾಬ ಚಪ್ಪರಬಂದ, ಬಂದೆನವಾಜ ವಾಲಿಕಾರ, ಮಹೇಶ ಮುಳವಾಡ, ಚಂದ್ರಶೇಖರಡೋಣೂರ , ಶರಣಪ್ಪ ನಾಲತವಾಡ , ಅಮರಯ್ಯ ಹಿರೇಮಠ ಭಾಗವಹಿಸಿದ್ದರು.

# ಇಂದು ಶರಣ ಹಡಪದ ಅಪ್ಪಣ್ಣನವರ ಜಯಂತಿ ಆಚರಣೆ

• ಮಲ್ಲಮ್ಮ ನುಡಿ ವಾರ್ತೆ ಕಲಬುರಗಿ

ಗುಲಬರ್ಗಾ ವಿಶ್ವವಿದ್ಯಾಲಯದ ಶ್ರೀ ಶರಣ ಹಡಪದಅಪ್ಪಣ್ಣ ಅಧ್ಯಯನ ಪೀಠದ ವತಿಯಿಂದ ಶ್ರೀ ಶರಣ ಹಡಪದ ಅಪ್ಪಣ್ಣನವರ ಜಯಂತ್ಯೋತ್ಸವವನ್ನುಶ್ರೀ ಶರಣ ಹಡಪದ ಅಪ್ಪಣ್ಣ ಅಧ್ಯಯನಪೀಠದಲ್ಲಿ ಜು. 29, 2026 ರಂದು ಬೆಳಿಗ್ಗೆ 10:30 ಗಂಟೆಗೆ ಆಯೋಜಿಸಲಾಗಿದೆ. ಗುಲಬರ್ಗಾ ವಿಶ್ವವಿದ್ಯಾಲಯದ ಕುಲಪತಿ ಪ್ರೊ. ಶಶಿಕಾಂತ ಎಸ್. ಉಡಿಕೇರಿ ಅಧ್ಯಕ್ಷತೆ ವಹಿಸುವರು. ಕನ್ನಡ ಅಧ್ಯಯನ ಸಂಸ್ಥೆ ನಿರ್ದೇಶಕ ಹಾಗೂ ಕಲಾ ನಿಕಾಯದ ಡೀನ್ ಪ್ರೊ. ಎಚ್.ಟಿ. ಪೋತೆ,ಕರ್ನಾಟಕ ಸರ್ಕಾರದ ಧಾರವಾಡ ಜಿಲ್ಲಾ ಕೇಂದ್ರ ಗ್ರಂಥಾಲಯದಉಪನಿರ್ದೇಶಕ ಅಜಯಕುಮಾರ, ಮೌಲ್ಯಮಾಪನ ಕುಲಸಚಿವ ಡಾ. ಎನ್.ಜಿ.ಕಣ್ಣೂರ್, ವಿತ್ತಾಧಿಕಾರಿ ಶ್ರೀಮತಿ ಜಯಾಂಬಿಕ, ಕುಲಸಚಿವ ಪ್ರೊ. ರಮೇಶ ಲಂಡನಕರ್ ಹಾಗೂ ಶ್ರೀ ಶರಣ ಹಡಪದ ಅಪ್ಪಣ್ಣ ಅಧ್ಯಯನ ಪೀಠದ ನಿರ್ದೇಶಕ ಡಾ. ಸುರೇಶ ಜಂಗೆ ಮುಖ್ಯ ಅತಿಥಿಗಳಾಗಿ ಬಾಗವಹಿಸುವರು ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಗುರು ಬ್ರಹ್ಮ ಗುರು ವಿಷ್ಣು ಗುರು ದೇವೋ ಮಹೇಶ್ವರ

ಬದುಕಿನಲ್ಲಿ ಜ್ಞಾನದೀಪ ಬೆಳಗಿಸಿ ನಮ್ಮ ಬದುಕನ್ನು ಸುಂದರಗೊಳಿಸಿದ ಗುರುಗಳಿಗೆ ಹಾಗೂ ಗುರುಮಾತೆಯರಿಗೆ ನಮನಗಳು,

ತಂದೆಯಾಗಿ ತಾಯಿಯಾಗಿ ಗುರುವಾಗಿ ಸ್ನೇಹಿತೆಯಾಗಿ ಸಕಲ ಜ್ಞಾನ ಸಂಪತ್ತನ್ನು ಧಾರೆ ಎರೆದ ಗುರುಗಳಿಗೆ ಹಾಗೂ ಗುರುಮಾತೆಯರಿಗೆ ನಮನಗಳು,

ನಮ್ಮ ಜೀವನವನ್ನು ರೂಪಿಸಿಕೊಂಡು ಇಡೀ ಜಗತ್ತನ್ನೇ ಪ್ರೀತಿಸುವಷ್ಟು ಜ್ಞಾನದ ಪಾಠವನ್ನು ಬೋಧಿಸಿದ ಗುರುಗಳಿಗೆ ಹಾಗೂ ಗುರುಮಾತೆರಿಗೆ ನಮನಗಳು.

ಆಟ ದೊಂದಿಗೆ ಪಾಠ ಧ್ಯಾನದೊಂದಿಗೆ ಯೋಗ ಪುಸ್ತಕದಿಂದ ಮಸ್ತಕದವರಿಗೆ ಜ್ಞಾನ ವೃದ್ಧಿಸಿದ ನನ್ನ ಎಲ್ಲಾ ಗುರುಗಳಿಗೆ ಹಾಗೂ ಗುರುಮಾತೆರಿಗೆ ನಮನಗಳು.

ಪ್ರತಿಯೊಬ್ಬರ ಜೀವನದಲ್ಲೂ ಗುರುವಿಲ್ಲದೆ ಬದುಕಲು ಸಾಧ್ಯವಿಲ್ಲ ಗುರು ಎಂದರೆ ಅಜ್ಞಾನವೆಂಬ ಕತ್ತಲೆಯಿಂದ ಬೆಳಕಿನೆಡೆಗೆ ಕೊಂಡೊಯ್ಯುವ ಮಹಾನ್ ಚೇತನ ಎಲ್ಲಾ ನನ್ನ ಗುರು ಬಾಂಧವರಿಗೆ ಗುರುಪೂರ್ಣಿಮೆಯ ಶುಭಾಶಯಗಳು.

ಗುರುವೇ ನಮ್ಮ ದಾರಿ ದೀಪ ಅಜ್ಞಾನ ಕಳೆಯುವ ಜ್ಯೋತಿ

ಗುರು ಎಂದರೆ ದೇಹವಲ್ಲ ಗುರು ಎಂದರೆ ಬೆಳಕು ಗುರು ಎಂದರೆ ಜ್ಞಾನ ಬೆಳಕು ಮತ್ತು ಜ್ಞಾನವು ಮಾನವನ ಜೀವನದಲ್ಲಿ ಅತ್ಯಗತ್ಯ ಗುರು ಎನ್ನುವ ಶಬ್ದ ಗು ಮತ್ತು ರು ಎಂಬ ಮೂಲ ಪದಗಳನ್ನು ಹೊಂದಿವೆ ಗು ಎಂದರೆ ಅಂಧಕಾರ ಅಥವಾ ಅಜ್ಞಾನ ರು ಎಂದರೆ ಕಲೆಯುವ ಅಥವಾ ದೂರ ಮಾಡುವ ಎಂದರ್ಥ. ಅದಕ್ಕೆ ಗುರು ಎಂದರೆ ಅಂಧಕಾರ ಕತ್ತಲೆಯನ್ನು ದೂರ ಮಾಡುವವರು ಎಂದರ್ಥ. ಬೆಳಕಿನೆಡೆಗೆ ಕೊಂಡೊಯ್ದ ಗುರುವಿಗೆ ಆಷಾಡ ಮಾಸದ ಗುರು ಪೂರ್ಣಿಮೆ ಎಂದು ನಮನಗಳನ್ನು ಸಲ್ಲಿಸಲಾಗುತ್ತದೆ ಹಿಂದೂ ಪಂಚಾಂಗದ ಪ್ರಕಾರ ಹುಣ್ಣಿಮೆಯನ್ನು ಹಿಂದೂಗಳು ಗುರು ಪೂರ್ಣಿಮೆ ಎಂದು ಆಚರಿಸುತ್ತಾರೆ. ಏಕೆಂದ–ರೆ ಗುರುಪೂರ್ಣಿಮೆಯ ದಿನ ಗುರುಸೂತ್ರದ ಪ್ರಭಾವ ಬೇರೆ ದಿನಗಳಿಗಿಂತ ಸಾವಿರಪಟ್ಟು ಹೆಚ್ಚು ಪ್ರಭಾವಶಾಲಿ ಆಗಿರುತ್ತದೆ. ಗುರುಪೂರ್ಣಿಮೆಗೆ ಧಾರ್ಮಿಕವಾಗಿ ಅಷ್ಟೇ ಅಲ್ಲ ಶೈಕ್ಷಣಿಕವಾಗಿ ಮಹತ್ವವಿದೆ. ಹಿಂದೂ ಪರಂಪರೆಯ ಶ್ರೇಷ್ಠ ಗುರುಗಳಲ್ಲಿ ಒಬ್ಬರಾದ ವೇದವ್ಯಾಸ ಮಹರ್ಷಿಗಳ ಜನ್ಮದಿನದ ಅಂಗವಾಗಿ ಈ ಹಬ್ಬವನ್ನು ಆಚರಿಸುತ್ತಾರೆ ಶೈಕ್ಷಣಿಕವಾಗಿ ಭಾರತದಲ್ಲಿ ಹಲವಾರು ಶಾಲೆ, ಕಾಲೇಜುಗಳು ಮತ್ತು ವಿಶ್ವವಿದ್ಯಾಲಯಗಳಲ್ಲಿ ಗುರು ವೃಂದದವರಿಗೆ ಕೃತಜ್ಞತೆಗಳನ್ನು ಸಲ್ಲಿಸುತ್ತಾರೆ ಈಗಿನ ಕಾಲದಲ್ಲಿ ಗುರುಗಳು ಮತ್ತು ವಿದ್ಯಾರ್ಥಿಗಳ ಸಂಬಂಧವು ಹೆಚ್ಚು ಸೌಹಾರ್ದಯುತ ಮತ್ತು ವೃತ್ತಿಪರವಾಗಿದೆ ತರಗತಿಯ ಗಡಿ ರೇಖೆಗಳನ್ನು ಮೀರಿ ಶಿಕ್ಷಕರು ಮಾರ್ಗ ದರ್ಶಕರಾಗಿ (mentor) ವಿದ್ಯಾರ್ಥಿಗಳು ಮುಕ್ತವಾಗಿ ಪ್ರಶ್ನಿಸುವ ಸ್ನೇಹಿತರಾಗಿ ಬದಲಾಗುತ್ತಿದ್ದಾರೆ ಪ್ರಾಚೀನ ಕಾಲದ ಕಟ್ಟುನಿಟ್ಟುಗಳ ಬದಲು ಈಗಿನ ಶಿಕ್ಷಣ ವ್ಯವಸ್ಥೆಯು ಭಾವನಾತ್ಮಕ ಬೆಂಬಲ ಮತ್ತು ಪರಸ್ಪರ ಗೌರವದ ಮೇಲೆ ಹೆಚ್ಚು ಅವಲಂಬಿತವಾಗಿದೆ

ವಿದ್ಯಾರ್ಥಿಗಳು ಜ್ಞಾನಾರ್ಜನೆಗಾಗಿ ಶಿಕ್ಷಣ ಕ್ಷೇತ್ರದಲ್ಲಿ ಕೆಲವೊಂದು ನಿಯಮಗಳನ್ನು ಪಾಲಿಸಬೇಕು

1) ಗುರುಗಳು ಬೋಧಿಸಿದ ಪಾಠಗಳನ್ನು ಬೋಧನೆಗಳನ್ನು ಪಾಲಿಸಬೇಕು.
2) ಗುರುಗಳು ಬೋಧಿಸಿದ ಮಾರ್ಗವನ್ನು ಅನುಸರಿಸಬೇಕು.
3) ಗುರುಗಳು ನೀಡಿದ ಶಿಕ್ಷೆಯನ್ನು ಜೀವನದ ಆದರ್ಶಕ್ಕಾಗಿ ಮನನ ಮಾಡಿಕೊಳ್ಳಬೇಕು.
4) ಗುರುಗಳಿಗೆ ಯಾವಾಗಲೂ ಗೌರವಿಸಿ ನಮಸ್ಕರಿಸಬೇಕು.
5) ಗುರುಗಳು ನೀಡುವ ಶಿಕ್ಷಣಕ್ಕೆ ಗೌರವಿಸಿ ಕೃತಜ್ಞತೆ ಭಾವನೆಯಿಂದ ಶರಣಾಗಬೇಕು.

ಶಿಕ್ಷಕರು ದಿನನಿತ್ಯದ ಜೀವನಕ್ಕೆ ಸಂಬಂಧಿಸಿದ ವಿವಿಧ ವಿಷಯಗಳ ಜ್ಞಾನವನ್ನು ನೀಡುತ್ತಾರೆ ಮತ್ತು ನಮ್ಮ ಅಜ್ಞಾನವನ್ನ ಹೋಗಲಾಡಿಸುತ್ತಾರೆ ನಮ್ಮ ಜೀವನಕ್ಕೆ ಸೂಕ್ತ ನಿರ್ದೇಶನ ಮಾರ್ಗದರ್ಶನ ನೀಡುವವರು ಗುರುಗಳೇ, ಹಾಗಾಗಿ ಕೇವಲ ಗುರು ಪೂರ್ಣಿಮೆಯ ದಿವಸ ಮಾತ್ರ ಗುರು ನಮನಗಳನ್ನು ಸಲ್ಲಿಸಿದರೆ ಸಾಲದು ನಾವು ಪ್ರತಿದಿನ ಅವರಿಗೆ ಗೌರವ ನಮನಗಳನ್ನು ಸಲ್ಲಿಸಬೇಕು.



ಶ್ರೀಮತಿ ಶ್ರೀಮತಿಬಾಯಿ ಬಿ ರೆಡ್ಡಿ
ಸರಕಾರಿ ಪ್ರೌಢಶಾಲೆ ಬೆನಚಿಂಚೋಳಿ
ದೈಹಿಕ ಶಿಕ್ಷಣ ಶಿಕ್ಷಕರು

# ಪ್ಲಾಸ್ಟಿಕ್ ಮುಕ್ತ ಗುರುಮಠಕಲ್ ಅಭಿಯಾನ: ಬೃಹತ್ ಜಾಗೃತಿ ಜಾಥಾ ಯಶಸ್ವಿ

• ಮಲ್ಲಮ್ಮ ನುಡಿ ವಾರ್ತೆ ಗುರುಮಠಕಲ್

ಜು. 28: ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಯಾದಗಿರಿ ನೇತೃತ್ವದಲ್ಲಿ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಶಿಕ್ಷಣ ಇಲಾಖೆ, ಗೃಹ ರಕ್ಷಕದಳ, ಪುರಸಭೆ ಗುರುಮಠಕಲ್, ಸ್ವಾಮಿ ವಿವೇಕಾನಂದ ಪದವಿ ಪೂರ್ವ ಕಾಲೇಜು, ಸರ್ಕಾರಿ ಬಾಲಕಿಯರ ಪದವಿ ಪೂರ್ವ ಕಾಲೇಜು, ಪೊಲೀಸ್ ಇಲಾಖೆ, ಶಶಿ ಚಾರಿಟೇಬಲ್ ಅಂಡ್ ಎಜುಕೇಶನ್ ಟ್ರಸ್ಟ್ ಹಾಗೂ ವಿವಿಧ ಸಂಘ–ಸಂಸ್ಥೆಗಳ ಸಹಯೋಗದಲ್ಲಿ "ಪ್ಲಾಸ್ಟಿಕ್ ಮುಕ್ತ ಗುರುಮಠಕಲ್ ಅಭಿಯಾನ" ಅಂಗವಾಗಿ ಮಂಗಳವಾರ ಬೃಹತ್ ಜಾಗೃತಿ ಜಾಥಾ ಯಶಸ್ವಿಯಾಗಿ ನಡೆಯಿತು.

ಎಸ್.ವಿ. ಕಾಲೇಜು ಮುಂಭಾಗದಿಂದ ಆರಂಭವಾದ ಜಾಥಾವು ಹಳೆಯ ತಹಸೀಲ್ದಾರ್ ಕಚೇರಿ, ಸಿಹಿ ನೀರು ಬಾವಿ ಮಾರ್ಗವಾಗಿ ಮಹಾತ್ಮ ಗಾಂಧಿ ಮೈದಾನದವರೆಗೆ ಸಾಗಿತು. ಜಾಥಾದಲ್ಲಿ ಯಾದಗಿರಿ ಜಿಲ್ಲೆಯ ಗೌರವಾನ್ವಿತ ನ್ಯಾಯಾಧೀಶರು ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು, ಸಿಬ್ಬಂದಿ, ವಿದ್ಯಾರ್ಥಿಗಳು ಹಾಗೂ ಸಾರ್ವಜನಿಕರು ಕಾಲ್ನಡಿಗೆಯ ಮೂಲಕ ಭಾಗವಹಿಸಿ ಏಕಬಳಕೆ ಪ್ಲಾಸ್ಟಿಕ್ ತ್ಯಜಿಸುವುದು, ಪರಿಸರ ಸಂರಕ್ಷಣೆ ಹಾಗೂ ಬಟ್ಟೆ ಚೀಲಗಳ ಬಳಕೆಯ ಮಹತ್ವದ ಕುರಿತು ಜಾಗೃತಿ ಮೂಡಿಸಿದರು.



ಈ ಸಂದರ್ಭದಲ್ಲಿ ಮಾತನಾಡಿದ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಹಾಗೂ ಹಿರಿಯ ಸಿವಿಲ್ ನ್ಯಾಯಾಧೀಶ ಮರಿಯಪ್ಪ ಅವರು, ಪರಿಸರ ಸಂರಕ್ಷಣೆ ಪ್ರತಿಯೊಬ್ಬ ನಾಗರಿಕನ ಜವಾಬ್ದಾರಿಯಾಗಿದ್ದು, ಪ್ಲಾಸ್ಟಿಕ್ ಬಳಕೆಯನ್ನು ಕಡಿಮೆ ಮಾಡುವ ಮೂಲಕ ಸ್ವಚ್ಛ ಮತ್ತು ಆರೋಗ್ಯಕರ ಸಮಾಜ ನಿರ್ಮಾಣಕ್ಕೆ ಎಲ್ಲರೂ ಕೈಜೋಡಿಸಬೇಕು ಎಂದು ಕರೆ ನೀಡಿದರು.

ಕಾರ್ಯಕ್ರಮದಲ್ಲಿ ಸಹಾಯಕ ಕಾನೂನು ಅಭಿರಕ್ಷಕರಾದ ಸುಷ್ಮಾ ಜಾದವ್, ಪರಿಸರ ಅಧಿಕಾರಿ ಹನುಮಂತಪ್ಪ, ತಾಲೂಕು ಪಂಚಾಯಿತಿ ಅಧಿಕಾರಿಗಳಾದ ಮಲ್ಲಿಕಾರ್ಜುನ ಚಂದವರೆ ಹಾಗೂ ಮಲ್ಲಿಕಾರ್ಜುನ ಶಿರಗೋಳ, ಗೃಹ ರಕ್ಷಕದಳದ ಅಂಬದಾಸ್, ಎಸ್.ವಿ. ಕಾಲೇಜಿನ ಜ್ಞಾನೇಶ್ವರ ರೆಡ್ಡಿ, ಸರ್ಕಾರಿ ಬಾಲಕಿಯರ ಪದವಿ ಪೂರ್ವ ಕಾಲೇಜಿನ ಹೋಸಮನಿ ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು, ಸಿಬ್ಬಂದಿ, ವಿದ್ಯಾರ್ಥಿಗಳು, ಸ್ವಯಂಸೇವಕರು ಹಾಗೂ ಸಾರ್ವಜನಿಕರು ಉಪಸ್ಥಿತರಿದ್ದರು.

ಜಾಥಾ ವೇಳೆ ಪರಿಸರ ಸಂರಕ್ಷಣೆಯ ಪರ ಘೋಷಣೆಗಳನ್ನು ಕೂಗುತ್ತಾ, ಪ್ಲಾಸ್ಟಿಕ್ ಬಳಕೆಯನ್ನು ತ್ಯಜಿಸಿ ಪರಿಸರ ಸ್ನೇಹಿ ಪರ್ಯಾಯಗಳನ್ನು ಅಳವಡಿಸಿಕೊಳ್ಳುವಂತೆ ಸಾರ್ವಜನಿಕರಿಗೆ ಮನವಿ ಮಾಡಲಾಯಿತು.

## ಸೈದಾಪುರ ಪಟ್ಟಣದಲ್ಲಿ ಶೀಘ್ರ ಕ್ರೀಡಾಂಗಣ ನಿರ್ಮಾಣ:ಕಂದಕೂರ



• ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ

ತೆಲಂಗಾಣದ ಗಡಿಗೆ ಅಂಟಿಕೊಂಡ ಸೈದಾಪುರ ಪಟ್ಟಣ ದಿನೇದಿನೇ ಬೆಳೆಯುತ್ತಿದ್ದು, ಈ ಭಾಗದ ವಿದ್ಯಾರ್ಥಿಗಳಿಗೆ ಅನುಕೂಲವಾಗುವ ನಿಟ್ಟಿನಲ್ಲಿ ಪಟ್ಟಣದಲ್ಲಿ ಕ್ರೀಡಾಂಗಣ ನಿರ್ಮಾಣಕ್ಕೆ ಈಗಾಗಲೇ ಕಂದಾಯ ಇಲಾಖೆ ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ ಎಂದು ಶಾಸಕ ಶರಣಗೌಡ ಕಂದಕೂರ ತಿಳಿಸಿದರು.

ಪಟ್ಟಣದ ಡಿಡಿಯು ಶಿಕ್ಷಣ ಸಂಸ್ಥೆಯ ಆವರಣದಲ್ಲಿ ಆಯೋಜಿಸಿದ್ದ ಹೋಬಳಿ ಮಟ್ಟದ ಪ್ರಾಥಮಿಕ ಹಾಗೂ ಪ್ರೌಢಶಾಲೆಗಳ ವಾರ್ಷಿಕ ಕ್ರೀಡಾಕೂಟ ಉದ್ಘಾಟಿಸಿ ಮಾತನಾಡಿ, ಪಟ್ಟಣದ ಸುತ್ತಮುತ್ತ ಕನಿಷ್ಠ ಮೂರು ಎಕರೆ ಸರ್ಕಾರಿ ಜಮಿಜನು ಗುರುತಿಸಿ ಶೀಘ್ರದಲ್ಲಿ ಕ್ರೀಡಾಂಗಣ ನಿರ್ಮಾಣಕ್ಕೆ ತಾವು ಉತ್ಸುಕರಾಗಿದ್ದೇವೆ ಎಂದರು.

ಗುರಮಠಕಲ್ ಕ್ಷೇತ್ರದ ಸೈದಾಪುರ ಮಕ್ಕಳು ಮೊಬೈಲ್ ಬಳಕೆಯಿಂದ ದೂರವಿದ್ದು ದೈಹಿಕ ಚಟುವಟಿಕೆಗಳಿಗೆ ಹೆಚ್ಚಿನ ಒತ್ತು ಕೊಡಬೇಕಿದೆ ಎಂದು ಸಲಹೆ ನೀಡಿದ ಶಾಸಕರು, ಮಕ್ಕಳನ್ನು ಕ್ರೀಡೆಗಳತ್ತ ಸೆಳೆಯಲು ಸರ್ಕಾರ ಪ್ರತಿವರ್ಷ ಕೋಟಿಗಟ್ಟಲೇ ಹಣ ಖರ್ಚು ಮಾಡುತ್ತಿದೆ. ಹೋಬಳಿ, ತಾಲೂಕು ಜಿಲ್ಲಾ ಮತ್ತು ರಾಜ್ಯ ಮಟ್ಟದಲ್ಲಿ ಕ್ರೀಡಾಕೂಟಗಳನ್ನು ಆಯೋಜಿಸುವ ಮೂಲಕ ಹೆಚ್ಚಿನ ಉತ್ತೇಜನ ನೀಡುತ್ತಿದೆ ಎಂದು ಹೇಳಿದರು.ಜಿಲ್ಲಾ ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿ ಅಧ್ಯಕ್ಷ ಶರಣೀಕ ಕುಮಾರ ದೋಕಾ ಮಾತನಾಡಿ, ನಮ್ಮ ಭಾಗದ ವಿದ್ಯಾರ್ಥಿಗಳು ಹೆಚ್ಚಿನ ಸಂಖ್ಯೆಯಲ್ಲಿ ಕ್ರೀಡಾಕೂಟದಲ್ಲಿ ಭಾಗವಹಿಸಿ ರಾಜ್ಯ ಮಟ್ಟದಲ್ಲಿ ಮಿಂಚುವಂತೆ ಹಾರೈಸಿದರು.

ಕ್ಷೇತ್ರ ಶಿಕ್ಷಣಾಧಿಕಾರಿ ವೀರಪ್ಪ ಕನ್ನೆಳ್ಳಿ ಮಾತನಾಡಿ, ಈ ಭಾಗದ 35 ಸರ್ಕಾರಿ ಶಾಲೆಗಳ ಮಕ್ಕಳು ಕ್ರೀಡಾಕೂಟದಲ್ಲಿ ಭಾಗವಹಿಸಿದ್ದಾರೆ. ಮಕ್ಕಳಲ್ಲಿ ಕ್ರೀಡಾ ಮನೋಭಾವನೆ ಹೆಚ್ಚಿಸಲು ಇಲಾಖೆಯಿಂದ ಅಗತ್ಯ ಕ್ರಮ ಕೈಗೊಳ್ಳಲಾಗುತ್ತಿದೆ ಎಂದರು.

ಪ್ರಮುಖರಾದ ಭೀಮಣ್ಣಗೌಡ ಕ್ಯಾತ್ನಾಳ, ಯೋಗೇಶ್ ಕುಮಾರ್ ಧೋಕಾ, ಗುರನಾಥರೆಡ್ಡಿ ಗೌಡ, ಚಂದ್ರುಗೌಡ, ರಾಜು ಉಡುಪಿ, ಪರಮೇಶ ವಾರದ, ಚಂದ್ರು ಗೌಡ ಹೆಗ್ಗಣಗೇರಾ, ತಾಯಪ್ಪ ಬಂದೆಪಲ್ಲಿ, ಮರೆಪ್ಪ ನಟೇಕಾರ ಆನಂದ ಮೀರಿಯಲ್, ಚಂದುಗೌಡ, ಲಕ್ಷ್ಮಣ್ ನಾಯಕ್, ಮಲೇಶಿ ನಾಯಕ, ಶಿವು ಗೌಡ ಸೈದಾಪುರ, ಅಲಾವುದ್ದಿನ ನೀಲಹಳ್ಳಿ,, ಸಾಹೇಬಗೌಡ ಗೌಡಗೇರಾ, ಬಸವರಾಜ ಹಿರೇನೋರ, ಬಸವರೆಡ್ಡಿ ಹೆಗ್ಗಣಗೇರಾ ಇದ್ದರು.

### ಖೇಲೋ ಇಂಡಿಯಾ ಯೋಜನೆಯಡಿ ಕ್ರೀಡಾಂಗಣ ನಿರ್ಮಾಣ

ಗುರಮಠಕಲ್ ಮತ್ತು ಸೈದಾಪುರ ಪಟ್ಟಣದಲ್ಲಿ ಖೇಲೋ ಇಂಡಿಯಾ ಯೋಜನೆಯಡಿ ಗ್ರಾಮೀಣ ಭಾಗದಲ್ಲಿ ಕ್ರೀಡಾಂಗಣ ನಿರ್ಮಾಣ ಮಾಡಲು ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಅವರ ಬಳಿ ಮನವಿ ಮಾಡಿದ್ದೇನೆ. ಅವರು ಸಹ ಸೂಕ್ತ ಸ್ಪಂದನೆ ನೀಡಿದ್ದಾರೆ. ಸ್ಥಳ ಗುರುತಿಸಿ ಕೊಟ್ಟಲ್ಲಿ ಮುಂದಿನ ಕಾರ್ಯಾನುಷ್ಠಾನಕ್ಕೆ ಅಗತ್ಯಕ್ರಮ ಕೈಗೊಳ್ಳುವುದಾಗಿ ಕುಮಾರಸ್ವಾಮಿ ಅವರು ಭರವಸೆ ನೀಡಿದ್ದಾರೆ ಎಂದು ಶಾಸಕ ಕಂದಕೂರ ಹೇಳಿದರು.

### ಸರಳತೆ ಮೆರೆದ ಶಾಸಕ ಕಂದಕೂರ

ಕ್ರೀಡಾಕೂಟದಲ್ಲಿ ಮಕ್ಕಳಿಂದ ಗೌರವ ವಂದನೆ ಸ್ವೀಕರಿಸಲು ಇಲಾಖೆಯಿಂದ ಪುಷ್ಪಾಲಂಕೃತ ತೆರೆದ ವಾಹನದ ವ್ಯವಸ್ಥೆ ಕಲ್ಪಿಸಲಾಗಿತ್ತು. ಅದರೆ, ಅದನ್ನು ನಿರಾಕರಿಸಿದ ಶಾಸಕರು ಕ್ರೀಡಾ ಧ್ವಜಾರೋಹಣ ನೆರವೇರಿಸಿ ಮಕ್ಕಳ ಪಥ ಸಂಚಲನ ವೀಕ್ಷಿಸುವ ಮೂಲಕ ಸರಳತೆ ಮೆರೆದರು. ಕಾರ್ಯಕ್ರಮಕ್ಕೂ ಮುನ್ನ ಶಾಲಾ ಮುದ್ದು ಮಕ್ಕಳು ಶಾಸಕರನ್ನು ಪುಷ್ಪವೃಷ್ಠಿ ಮೂಲಕ ಭವ್ಯ ಸ್ವಾಗತ ಕೋರಿದ್ದು ವಿಶೇಷ ಎನಿಸಿತು.

ದೈಹಿಕ ಶಿಕ್ಷಕರ ನೇಮಕಾತಿಯ ಬಗ್ಗೆ ಬರುವ ಅಧಿವೇಶನದಲ್ಲಿ ಸರ್ಕಾರದ ಗಮನ ಸೆಳೆಯಲಾಗುವುದು. ಈಗಾಗಲೇ ಸರ್ಕಾರ ಸಹ ಶಿಕ್ಷಕರ ನೇಮಕಾತಿ ಮಾಡಿಕೊಳ್ಳಲು ನಿರ್ಧರಿಸಿದೆ.

– ಶರಣಗೌಡ ಕಂದಕೂರ
ಗುರುಮಠಕಲ್ ಶಾಸಕ.

## ಅಣಬಿ ಅಂಬೇಡ್ಕರ್ ಶಾಲೆ ಪ್ರಾರಂಭಿಸಿ ಹಲವು ಸಮಸ್ಯೆ ಬಗೆಹರಿಸಿ: ಮನವಿ

ಶಹಾಪುರ: ತಾಲೂಕಿನ ಅಣಬಿ ಗ್ರಾಮಕ್ಕೆ ಭೇಟಿ ನೀಡಿದ ಜಿಲ್ಲಾ ಪಂಚಾಯತ್ ಮುಖ್ಯಕಾರ್ಯನಿರ್ವಹಣಾಧಿಕಾರಿಗಳಿಗೆ ಅಣಬಿ ಗ್ರಾಮದ ಯುವಕರಿಂದ ಮನವಿ. ಗ್ರಾಮದ ಅಂಬೇಡ್ಕರ್ ಶಾಲೆಯು ಅವ್ಯವಸ್ಥೆಗೊಂಡು ಶಾಲೆಯ ಸಂಪೂರ್ಣವಾಗಿ ಬಂದು ಮಾಡಲಾಗಿದೆ, ಗ್ರಾಮದ ವಿದ್ಯಾರ್ಥಿಗಳ ಭವಿಷ್ಯ ರೂಪಿಸಲು ಮರು ಶಾಲೆಯನ್ನು ಸ್ಥಾಪನೆ ಮಾಡುಬೇಕು, ಶೀತಲಗೊಂಡ ಶಾಲೆಯನ್ನು ಶೀಘ್ರದಲ್ಲಿ ಸರಿಪಡಿಸಿ



ಮರು ಚಾಲನೆ ನೀಡಬೇಕು ಮತ್ತು ಗ್ರಾಮದ ಮುಖ್ಯ ಬೀದಿಗಳಲ್ಲಿ ರಸ್ತೆ ಅದಕ್ಕೆ ಓಡಾಡಲು ಸಾರ್ವಜನಿಕರಿಗೆ ತೊಂದರೆಯಾಗಿದ್ದು ಈ ಕೂಡಲೇ ರಸ್ತೆಯ ಕಾಮಗಾರಿಯನ್ನು ಪ್ರಾರಂಭ ಮಾಡಬೇಕು ಹಾಗೂ ವಾರ್ಡ್ ಎರಡರಲ್ಲಿ ವಿದ್ಯುತ್ ಸಮಸ್ಯೆ ಹೆಚ್ಚಾಗಿದ್ದು, ಗ್ರಾಮದಲ್ಲಿ ಅನೇಕ ಸಮಸ್ಯೆಗಳು ಹೆಚ್ಚುತ್ತಿವೆ ಆದರೆ ಪರಿಹಾರ ಯಾವುದು ಕಾಣುತ್ತಿಲ್ಲ, ಈ ಕೂಡಲೇ ಶಾಲಾ ಪ್ರಾರಂಭಿಸಿ ರಸ್ತೆಗಳನ್ನು ಸುಧಾರಿಸಿ ವಿದ್ಯುತ್ ಸಮಸ್ಯೆಯನ್ನ ಬಗೆಹರಿಸಿ ಗ್ರಾಮದ ಅಭಿವೃದ್ಧಿ ಪಡಿಸಬೇಕೆಂದು ಮನವಿಯನ್ನು ಮಾಡಿದ್ದರು. ಈ ಸಂದರ್ಭದಲ್ಲಿ ವಿಶ್ವರಾಧ್ಯ ಮುಧೋಳ, ಸಚಿನ್ ಮ್ಯಾಗೇರಿ, ಮಡಿವಾಳಪ್ಪ ದೇವರಮನೆ, ಶರಣಪ್ಪ ಮಾಡಿಗಿ, ರುದ್ರಪ್ಪ ಹಾಗೂ ಗ್ರಾಮದ ಯುವಕರು ಇದ್ದರು.

## ಡಿಎಚ್‌ಒ ಆಗಿ ನೇಮಕಗೊಂಡ ಡಾ. ಈಶ್ವರ ಸವಡಿಗೆ ಸನ್ಮಾನ

• ಮಲ್ಲಮ್ಮ ನುಡಿ ವಾರ್ತೆ ಕೊಪ್ಪಳ

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಜಿಲ್ಲಾ ಆರೋಗ್ಯಾಧಿಕಾರಿ (ಡಿಎಚ್‌ಒ) ಯಾಗಿ ನೇಮಕಗೊಂಡಿರುವ ಹೆಸರಾಂತ ವೈದ್ಯರು, ಜನಸ್ನೇಹಿ ಸೇವಾ ಮನೋಭಾವದ ಡಾ. ಈಶ್ವರ ಎಸ್. ಸವಡಿ ಅವರಿಗೆ ಗಂಗಾವತಿ ಪಟ್ಟಣದ ಸ್ಫೂರ್ತಿ ಆಸ್ಪತ್ರೆಯಲ್ಲಿ ವಿವಿಧ ಸಂಘಟನೆಗಳ ಮುಖಂಡರು ಹಾಗೂ ಅಭಿಮಾನಿಗಳು ಆತ್ಮೀಯವಾಗಿ ಸನ್ಮಾನಿಸಿ ಗೌರವಿಸಿದರು.

ಸನ್ಮಾನ ಸ್ವೀಕರಿಸಿ ಮಾತನಾಡಿದ ಡಾ. ಈಶ್ವರ ಎಸ್. ಸವಡಿ, ಸರ್ಕಾರ ತಮ್ಮ ಮೇಲೆ ವಹಿಸಿರುವ ಮಹತ್ವದ ಜವಾಬ್ದಾರಿಯನ್ನು ಪ್ರಾಮಾಣಿಕತೆ, ಪಾರದರ್ಶಕತೆ ಹಾಗೂ ಸೇವಾ ಮನೋಭಾವದಿಂದ ನಿರ್ವಹಿಸುವುದಾಗಿ ತಿಳಿಸಿದರು. ಜಿಲ್ಲೆಯ ಪ್ರತಿಯೊಬ್ಬ ನಾಗರಿಕರಿಗೂ ಗುಣಮಟ್ಟದ ಆರೋಗ್ಯ ಸೇವೆ ತಲುಪಿಸುವುದರೊಂದಿಗೆ ಆರೋಗ್ಯ ಇಲಾಖೆಯ ಅಭಿವೃದ್ಧಿಗೆ ಹೊಸ ಚೈತನ್ಯ ತುಂಬುವ ನಿಟ್ಟಿನಲ್ಲಿ ಶ್ರಮಿಸುವ ಸಂಕಲ್ಪ ವ್ಯಕ್ತಪಡಿಸಿದರು.

ವೈದ್ಯಕೀಯ ಕ್ಷೇತ್ರದಲ್ಲಿ ತಮ್ಮ ಸರಳತೆ, ಮಾನವೀಯತೆ, ಸೇವಾನಿಷ್ಠೆ ಹಾಗೂ ರೋಗಿಗಳೊಂದಿಗೆ ಬೆಳೆಸಿಕೊಂಡಿರುವ ಆತ್ಮೀಯ ಬಾಂಧವ್ಯದಿಂದ ಡಾ. ಈಶ್ವರ ಎಸ್. ಸವಡಿ ಅವರು ಜನಪ್ರಿಯ ವೈದ್ಯರಾಗಿ ಗುರುತಿಸಿಕೊಂಡಿದ್ದಾರೆ. ಬಡವರು, ನಿರ್ಗತಿಕರು ಹಾಗೂ ಗ್ರಾಮೀಣ ಭಾಗದ



ಜನರ ಆರೋಗ್ಯ ಸಮಸ್ಯೆಗಳಿಗೆ ಸ್ಪಂದಿಸಿ ಹಲವು ವರ್ಷಗಳಿಂದ ನಿಸ್ವಾರ್ಥ ಸೇವೆ ಸಲ್ಲಿಸಿರುವ ಅವರ ಕಾರ್ಯಕ್ಕೆ ಸಾರ್ವಜನಿಕರಿಂದ ಅಪಾರ ಮೆಚ್ಚುಗೆ ವ್ಯಕ್ತವಾಗಿದೆ.

ಡಿಎಚ್‌ಒ ಹುದ್ದೆಗೆ ಡಾ. ಸವಡಿ ಅವರ ನೇಮಕ ಜಿಲ್ಲೆಯ ಆರೋಗ್ಯ ಸೇವೆಗಳನ್ನು ಇನ್ನಷ್ಟು ಬಲಪಡಿಸಲಿದ್ದು, ಜನಪರ ಆಡಳಿತ ಮತ್ತು ಗುಣಮಟ್ಟದ ಆರೋಗ್ಯ ಸೇವೆಗೆ ಹೊಸ ದಿಕ್ಕು ದೊರೆಯಲಿದೆ ಎಂದು ಬಿಜೆಪಿ ಎಸ್‌ಸಿ ಘಟಕದ ಕಾರ್ಯದರ್ಶಿ ಸುರೇಶ್ ಮಾಳಮನೆ ಅಭಿಪ್ರಾಯಪಟ್ಟರು.

ಈ ಸಂದರ್ಭದಲ್ಲಿ ಈಶ್ವರ, ಮುತ್ತುರಾಜ್, ಯಮನೂರ, ಸಂತೋಷ್, ಮಂಜುನಾಥ್, ಆರತಿ, ಆನಂದ್ ಸೇರಿದಂತೆ ಅನೇಕ ಮುಖಂಡರು, ಸ್ನೇಹಿತರು ಹಾಗೂ ಸಾರ್ವಜನಿಕರು ಉಪಸ್ಥಿತರಿದ್ದು, ಡಾ. ಈಶ್ವರ ಎಸ್. ಸವಡಿ ಅವರಿಗೆ ಅಭಿನಂದನೆ ಸಲ್ಲಿಸಿ, ಅವರ ನೂತನ ಜವಾಬ್ದಾರಿಯ ಯಶಸ್ವಿ ನಿರ್ವಹಣೆಗೆ ಶುಭ ಹಾರೈಸಿದರು.

## ಗೋರೆಬಾಳ ಕ್ಯಾಂಪ್ ನಿರಾಶ್ರಿತ ಕೂಲಿ ಕಾರ್ಮಿಕರನ್ನು ಒಕ್ಕಲೆಬ್ಬಿಸದಂತೆ ಕರವೇ ಆಗ್ರಹ

• ಮಲ್ಲಮ್ಮ ನುಡಿ ವಾರ್ತೆ ಸಿಂಧನೂರು

ಜು .28.ತಾಲ್ಲೂಕಿನ ಗೋರೆಬಾಳದಿಂದ ವೆಂಕಟೇಶ್ವರ ಕ್ಯಾಂಪ್ ವರೆಗಿನ ರಸ್ತೆ ಡಾಂಬರೀಕರಣ ಕಾಮಗಾರಿ ನೆಪದಲ್ಲಿ ದಶಕಗಳಿಂದ ವಾಸಿಸುತ್ತಿರುವ ನೂರಾರು ಬಡ ಕೂಲಿ ಕಾರ್ಮಿಕರ ಕುಟುಂಬಗಳನ್ನು ಒಕ್ಕಲೆಬ್ಬಿಸಲು ನೋಟಿಸ್ ನೀಡಿರುವುದನ್ನು ಕರ್ನಾಟಕ ರಕ್ಷಣಾ ವೇದಿಕೆ (ಹೆಚ್. ಶಿವರಾಮೇಗೌಡ ಬಣ) ತೀವ್ರವಾಗಿ ಖಂಡಿಸುತ್ತದೆ ಎಂದು ತಾಲೂಕು ಅಧ್ಯಕ್ಷರಾದ

ಜಿ. ಸುರೇಶ ಗೋಬ್ಬರಕಲ್ ಹೇಳಿದರು.

ತಾಲ್ಲೂಕಿನ 36ನೇ ಕಾಲುವೆ ಮಧ್ಯಭಾಗದಲ್ಲಿ ಸುಮಾರು 40–50 ವರ್ಷಗಳಿಂದ ಶೆಡ್‌ಗಳನ್ನು ನಿರ್ಮಿಸಿಕೊಂಡು ಬದುಕು ಕಟ್ಟಿಕೊಂಡಿರುವ ಬಡವರನ್ನು, ಯಾವುದೇ ಮುನ್ಸೂಚನೆ ಅಥವಾ ಪುನರ್ವಸತಿ ಕಲ್ಪಿಸದೆ ಏಕಾಏಕಿ ತೆರವುಗೊಳಿಸಲು ನೀರಾವರಿ ಇಲಾಖೆ ಅಧಿಕಾರಿಗಳು ನೋಟಿಸ್ ನೀಡಿರುವುದನ್ನು ಕರವೇ ತಾಲ್ಲೂಕು ಅಧ್ಯಕ್ಷರಾದ ಜಿ. ಸುರೇಶ ಗೋಬ್ಬರಕಲ್ ನೇತೃತ್ವದಲ್ಲಿ



ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಲಾಗಿತು ಎಂದು ತಿಳಿಸಿದರು.

ಬಡವರ ಶೆಡ್‌ಗಳನ್ನು ಜೆಸಿಬಿ ಮೂಲಕ ಬಲವಂತವಾಗಿ ತೆರವುಗೊಳಿಸಬಾರದು ಹಾಗೂ ಮೊದಲು ಸಂತ್ರಸ್ತ ಕುಟುಂಬಗಳಿಗೆ ಪರ್ಯಾಯ ಪುನರ್ವಸತಿ ಕಲ್ಪಿಸಿ ಹಕ್ಕುಪತ್ರ ವಿತರಿಸಬೇಕು. ಮೂರು ದಿನಗಳ ಗಡುವು ನೀಡಿ ಯಂತ್ರಗಳ ಸಹಾಯದಿಂದ ತೆರವುಗೊಳಿಸುವ ಬೆದರಿಕೆ ಹಾಕಿರುವುದು ಮತ್ತು ಕೂಲಿ ಕಾರ್ಮಿಕರ ಜೊತೆ ಚರ್ಚಿಸದೆ ನೋಟಿಸ್ ನೀಡಿರುವುದು ಕಾನೂನುಬಾಹಿರವಾಗಿದೆ. ಸರ್ಕಾರ ಮತ್ತು ಅಧಿಕಾರಿಗಳು ಬಡವರ ಜೀವನದೊಂದಿಗೆ ಆಟವಾಡಿದರೆ ಉಗ್ರ ಹೋರಾಟ ಹಮ್ಮಿಕೊಳ್ಳಲಾಗುವುದು ಎಂದು ಎಚ್ಚರಿಕೆ ನೀಡಲಾಗಿದೆ.

ಈ ಹಿಂದೆ 2026ರ ಜೂನ್ 30ರಂದು ಪ್ರತಿಭಟನೆ ನಡೆಸಿ ಮನವಿ ಸಲ್ಲಿಸಿದ್ದರೂ, ಅಧಿಕಾರಿಗಳು ಮತ್ತೆ ನೋಟಿಸ್ ನೀಡಿರುವುದರಿಂದ ವೃದ್ಧರು ಹಾಗೂ ಮಕ್ಕಳು ಬೀದಿಪಾಲಾಗುವ ಆತಂಕ ಎದುರಾಗಿದೆ. ಕೂಡಲೇ ಜಿಲ್ಲಾಧಿಕಾರಿಗಳು ಮಧ್ಯಪ್ರವೇಶಿಸಿ, ಬಡ ಕಾರ್ಮಿಕರಿಗೆ ಪುನರ್ವಸತಿ ಹಾಗೂ ಮೂಲಭೂತ ಸೌಕರ್ಯ ಕಲ್ಪಿಸಿಕೊಡಬೇಕೆಂದು ಕರವೇ ಮುಖಂಡರು ಜಿಲ್ಲಾಧಿಕಾರಿಗಳಿಗೆ ಮನವಿ ಪತ್ರದ ಮೂಲಕ ಒತ್ತಾಯಿಸಿದ್ದಾರೆ.

## ಪಂಚ ಗ್ಯಾರಂಟಿಯಿಂದ ಸರಕಾರ ಪಂಚರ ಆಗಿದೆ

• ಮಲ್ಲಮ್ಮ ನುಡಿ ವಾರ್ತೆಮುದಗಲ್

; ಕಾಂಗ್ರೇಸ್ ಸರಕಾರ ಪಂಚ ಗ್ಯಾರಂಟಿಯಿಂದ ಪಂಚರಾಗಿದೆ ಎಂದು ವಿಧಾನ ಪರಿಷತ್ ಸದಸ್ಯ ಹಾಗೂ ಬಿಜೆಪಿ ಮುಖಂಡ ಸಿ.ಟಿ ರವಿ ಸೋಮವಾರ ಹೇಳಿದರು. ಪಟ್ಟಣ ಸಮೀಪದ ತೊಡಕಿ ತಾಂಡದಲ್ಲಿ ಲಕ್ಷ್ಮೀ ಪತಿ ಶೆಟ್ಟರ ಹಾಗೂ ವೆಂಕಟಗೌಡರ ಹೊಲಕ್ಕೆ ಬೇಟಿ ನೀಡಿ ಬೆಳೆಪರಿಶೀಲನೆ ಮಾಡಿದರು. ಛತ್ರ ಆಂಜನೇಯ ಸ್ವಾಮಿ ದರ್ಶನ ಪಡೆದ ಬಳಿಕ ದೇವಸ್ಥಾನದ ಹೊರಾಂಗಣದಲ್ಲಿ ರೈತರೊಂದಿಗೆ ಸಂವಾದ ಮಾಡಿ ರೈತರ ಸಮಸ್ಯೆಗಳನ್ನು ಆಲಿಸಿ ಮಾತನಾಡಿದ ಅವರು ಮಳೆ ಕೊರತೆಯಿಂದ ಸಾರ್ವಜನಿಕರ ಸಂಕಷ್ಟದ ಕಣ್ಣಿರಿನ ಕಥೆ, ವಿಧಾನ ಸಭೆಯಲ್ಲಿ ಕಣ್ಣು ಕಿವಿ ತೆರೆಯುವ ಹಾಗೆ ಚರ್ಚಿಸುತ್ತೇವೆ ಎಂದು ಸರಕಾರದ ವಿರುದ್ಧ ವಾಗ್ದಾಳಿ ನಡೆಸಿದರು. ಮುಂಗಾರು ಮಳೆ ಕೈ ಕೊಟ್ಟ ಪರಿಣಾಮ ರೈತರ ಕಣ್ಣಲ್ಲಿ ನೀರು ಕೂಡ ಬತ್ತಿ ಹೋಗಿದೆ. ಈಗಾಗಲೇ ಹಲವಾರು ಸಂಕಷ್ಟದಲ್ಲಿರುವ ರೈತರಿಗೆ ಬರೆ ಮೇಲೆ ಬರೆ ಎಳೆದಂತಾಗಿದೆ. ಇಂತಹ



ಸಂದರ್ಬದಲ್ಲಿ ಅಧಿಕಾರಿಗಳು ಸ್ಥಳ ಪರಿಶೀಲನೆ ಮಾಡಿಲ್ಲ, ಇಲ್ಲಿಯವರೆಗೆ ಸಂಭಂದ ಪಟ್ಟವರು ಮಾತಾನಾಡಿಸಿಲ್ಲ. ರೈತರು ಈಗಾಲೇ ಎರಡರಿಂದ ಮೂರು ಬಾರಿ ಬಿತ್ತನೆಗಾಗಿ ಹಣ ವ್ಯಯ ಮಾಡಿಕೊಂಡು ಸಾಲಮಾಡಲಾಗಿದೆ. ಬ್ಯಾಂಕನವರು ಸಾಲ ನೀಡಲು ಮುಂದಾಗುತ್ತಿಲ್ಲ. ಫಾರಂ ಭರ್ತಿ ಮಾಡಿದರೂ ಬೆಳೆ ಪರಿಹಾರ ಬರುತ್ತೇ ಎಂಬ ವಿಶ್ವಾಸವಿಲ್ಲ. ಬರ ಪರಿಹಾಕೂಡ ಹಗರಣ ವಾಗಿರಬಹುದು. ರೈತರಿಗೆ ಡಿಎಪಿಗೊಬ್ಬರ ಸಿಗದ ಕಾರಣ ಯೂರಿಯಾ ಗೆ ಊಬ್ಬರಕ್ಕೆರಸಗೊಬ್ಬರದಂಗಡಿಯಲ್ಲಿ ಹೆಚ್ಚಿನ ಬೆಲೆಗೆ ರೈತರು ಖರೀದಿಸುವ ಸ್ಥಿತಿಯಾಗಿದೆ.

## ತಳಕಲ್‌ನಲ್ಲಿ ಭಕ್ತಿ ಸಂಭ್ರಮ ಅನ್ನದಾನೀಶ್ವರ ಮಠದ ಗೋಪುರ ಕಟ್ಟಡಕ್ಕೆ ಚಾಲನೆ

• ಮಲ್ಲಮ್ಮ ನುಡಿ ವಾರ್ತೆ ಕುಕನೂರು

ತಳಕಲ್ ಗ್ರಾಮಕ್ಕೆ ಅನ್ನದಾನೀಶ್ವರ ಶಾಖಾಮಠ ಒಂದು ಶಕ್ತಿ ಕೇಂದ್ರ, ಗೋಪುರ ನಿರ್ಮಾಣದಿಂದ ಮಠಕ್ಕೆ ಮತ್ತಷ್ಟು ಶೋಭೆ ಬರಲಿದೆ. ಈ ಪುಣ್ಯಕಾರ್ಯಕ್ಕೆ ಗ್ರಾಮಸ್ಥರು ತನು ಮನ ಧನದಿಂದ ಸಹಕರಿಸಬೇಕು ಎಂದು ಗ್ರಾಪಂ ಮಾಜಿ ಸದಸ್ಯ ವೀರೇಶ ಬಿಸನಳ್ಳಿ ಹೇಳಿದರು.

ಅವರು ತಳಕಲ್ ಗ್ರಾಮದ ಮುಂಡರಗಿ ಅನ್ನದಾನೀಶ್ವರ ಶಾಖಾಮಠದ ಗೋಪುರ ಕಟ್ಟಡದ ಕಾಮಗಾರಿಗೆ ಚಾಲನೆ ನೀಡಿ



ಮಾತನಾಡುತ್ತಾ ಮಠ ಮಾನ್ಯಗಳಿಂದಲೇ ನಮ್ಮ ಸಂಸ್ಕೃತಿ ಉಳಿದಿದೆ, ಅನ್ನದಾನೀಶ್ವರರ ಕೃಪೆಯಿಂದ ಈ ಗೋಪುರ ಕಾರ್ಯ ಯಶಸ್ವಿಯಾಗಿ ನೆರವೇರಲಿ ಇದಕ್ಕಾಗಿ ಯುವಕರ ಜೊತೆಗೆ ದಾನಿಗಳು ಹೆಚ್ಚಿನ ಸೇವೆ ಸಲ್ಲಿಸಬೇಕು ಎಂದು ಕರೆ ನೀಡಿದರು.

ಮಾಜಿ ಗ್ರಾಪಂ ಸದಸ್ಯ ನೀಲನಗೌಡ ಮಾಲೀಪಾಟೀಲ ಮಾತನಾಡಿ ಅನ್ನದಾನೀಶ್ವರರು ಅನ್ನದ ಜೊತೆಗೆ ಜ್ಞಾನವನ್ನೂ ನೀಡಿದ ಸಂತರು. ಅವರ ಶಾಖಾಮಠದ ಗೋಪುರ ನಿರ್ಮಾಣ ಇಡೀ ತಾಲೂಕಿಗೆ ಹೆಮ್ಮೆಯ ವಿಷಯ. ಎಲ್ಲಾ ಸಮುದಾಯದವರು ಒಗ್ಗಟ್ಟಾಗಿ ಈ ಕೆಲಸ ಪೂರ್ಣಗೊಳಿಸೋಣ, ಪೂಜ್ಯ ಮಹಾದೇವ ಸ್ವಾಮೀಜಿಯವರ ಕ್ರಿಯಾಶೀಲತೆ ನಮಗೆ ಪ್ರೇರಣೆಯಾಗಿದೆ ಅವರು ಕಾಯಕದಲ್ಲೇ ಗುರುಗಳನ್ನ ಕಂಡವರು ಎಂದರು.

ನಂತರ ಕುಕನೂರ ಮಠದ ಆಡಳಿತಾಧಿಕಾರಿ ಸಂಗಮೇಶ ಕಲ್ಮಠ ಮಾತನಾಡಿ ನಮ್ಮ ಕುಕನೂರ ಶ್ರೀಮಠದ ಪೂಜ್ಯರು ಅಭಿವೃದ್ಧಿ ಕಾರ್ಯಗಳಿಗೆ ಪ್ರೋತ್ಸಾಹ ನೀಡುತ್ತಾ ತಳಕಲ್ ಗ್ರಾಮದಲ್ಲಿ ಮಠದ ಅಭಿವೃದ್ಧಿಯ ಕಾರ್ಯಕ್ಕೆ ನಿಂತಾಗ ಅವರಿಗೆ ಬೆಂಬಲವಾಗಿ ನಿಂತ ಭಕ್ತರ ಕಾರ್ಯ ದೊಡ್ಡದು, ಭಕ್ತರ ಸಹಕಾರವೇ ಪೂಜ್ಯರ ಶಕ್ತಿ, ಭಕ್ತರ ಮನ ಮನೆಗಳಲ್ಲಿ ಅನ್ನದಾನೀಶ್ವರ ಸ್ಥಾಪಿಸಿದ ಶ್ರೇಯಸ್ಸು ಪೂಜ್ಯರಿಗೆ ಸಲ್ಲುತ್ತದೆ ಎಂದರು.

ಈ ಸಂದರ್ಭದಲ್ಲಿ ಪೂಜ್ಯ ಮಹಾದೇವ ಮಹಾಸ್ವಾಮಿಗಳು, ಹಿರಿಯರಾದ ಪಕ್ಕಪ್ಪ ಮುರಿಗಿ, ನಿಂಗಪ್ಪ ನಿಟ್ಟಲಿ, ಮಲ್ಲಯ್ಯ ಕಣವಿ, ಆನಂದ ಚಿಲವಾಡಿಗಿ, ಅಬ್ಬಸಾಲಿ ಮುಂಡರಗಿ, ಪಕ್ಕಪ್ಪ ಅಳವಂಡಿ, ರಾಮಣ್ಣ, ಬಸವರಾಜ ಬ್ಯಾಳಿ, ಸೋಮಪ್ಪ ಕರ್ಜಗಿ, ಮುದಿಯಪ್ಪ ಯೋಗೆಮ್ಮನವರ, ಶೇಖರಗೌಡ ಮಾಲಿಪಾಟೀಲ, ಮಲ್ಲೇಶಪ್ಪ , ಶರಣಪ್ಪ ಬಂಗಾರಿ, ತಿರುಗುಣೇಶ ಸೇರಿದಂತೆ ಅನೇಕ ಭಕ್ತರು ಪಾಲ್ಗೊಂಡಿದ್ದರು.

# ನಾಯಕತ್ವ ದೊಡ್ಡ ಜವಾಬ್ದಾರಿ : ಸಯ್ಯದ ಮುಹಮ್ಮದ ಅಲಿ ಅಲ್ ಹುಸೇನಿ ಸಾಹೇಬ

• ಮಲ್ಲಮ್ಮ ನುಡಿ ವಾರ್ತೆ ಕಲಬುರಗಿ




ಒಳ್ಳೆಯ ಕೇಳುಗರೇ ಒಳ್ಳೆಯ ನಾಯಕರು ಆಗಲು ಸಾಧ್ಯ. ಅವರಲ್ಲಿ ಸಹನೆ ಮುಖ್ಯ. ನಾಯಕತ್ವ ಒಂದು ದೊಡ್ಡ ಜವಾಬ್ದಾರಿ ಎಂದು ಖಾಜಾ ಬಂದಾನವಾಜ ವಿಶ್ವವಿದ್ಯಾಲಯದ ಕುಲಾಧಿಪತಿ ಜನಾಬ ಸಯ್ಯದ ಮುಹಮ್ಮದ ಅಲಿ ಅಲ್ ಹುಸೇನಿ ನುಡಿದರು. ಅವರು ಮಂಗಳವಾರ ಸಯ್ಯದ ಅಕ್ಬರ ಹುಸೇನಿ ಶಾಲೆಯ 2026-2027ನೇ ಸಾಲಿನ ಇನ್ವೆಸ್ಟಿಟ್ಯುರ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಮಾತನಾಡಿದರು.

ಇದು ಅತ್ಯಂತ ಪ್ರಮುಖ ಸಮಾರಂಭ. ಪ್ರಮುಖ ಸಾಮರ್ಥ್ಯದೊಂದಿಗೆ ಅತ್ಯುತ್ತಮವಾದ ವಿದ್ಯಾರ್ಥಿಯನ್ನು ಆಯ್ಕೆ ಮಾಡಲು ವಿದ್ಯಾರ್ಥಿಗಳು ಮತ್ತು ಶಿಕ್ಷಕರನ್ನು ಇದು ಒಳಗೊಂಡಿರುತ್ತದೆ. ಕ್ಯಾಪ್ಟನ್‌ಗಳು ಕೇವಲ ಸ್ಥಾನವನ್ನು ಆನಂದಿಸುವುದಲ್ಲ, ಆದರೆ ಅವರು ಇತರರಿಗೆ ಮಾದರಿ ಆಗಬೇಕು. ಅವರು ವಿನಮ್ರರಾಗಿರಬೇಕು ಹಾಗೂ ಎಲ್ಲರನ್ನು ಗೌರವಿಸಬೇಕು. ನಾಯಕ ರಾಗುವುದು ಸುಲಭವಲ್ಲ. ಇಂದಿನ ಪೀಳಿಗೆ ಮೊಬೈಲ ದಾಸರಾಗುತ್ತಿದೆ, ಅಗತ್ಯ ವಿದ್ದಷ್ಟು ಮಾತ್ರ ಮೊಬೈಲ್ ಬಳಸಿ. ಐ, ಚಾಟ್ ಜಿಪಿಟಿ ಮೇಲೆ ಅವಲಂಬಿತರಾಗಬೇಡಿ. ನಾಯಕರು ಆದೇಶಗಳು ಅಥವಾ ನಿಯಂತ್ರಣವನ್ನು ಮಾತ್ರ ರವಾನಿಸಬಾರದು. ಎಲ್ಲರ ಸಲಹೆಯನ್ನು ಸ್ವೀಕರಿಸಿ ನಂತರ ನಿರ್ಧರಿಸಬೇಕು. ತಾಳ್ಮೆ ಇರಬೇಕು.ಆಯ್ಕೆಯಾದ ಎಲ್ಲ ನಾಯಕರನ್ನು ಅಭಿನಂದಿಸಿದರು.ಅವರು ತಮ್ಮ ಸಹ ಪಾಠಿಗಳನ್ನು ಉತ್ತೇಜಿಸಬೇಕು. ಶಾಲಾ ವಿದ್ಯಾರ್ಥಿ ಜೀವನ ಅಮೂಲ್ಯ. ಇದನ್ನು ಸದ್ಬಳಿಕೆ ಮಾಡಿಕೊಳ್ಳಿ. ಕ್ರೀಡೆ ಮತ್ತು ಸಂಸ್ಕೃತಿಕ ಕಾರ್ಯಕ್ರಮಗಳಲ್ಲೂ ಕೂಡ ಪಾಲ್ಗೊಳ್ಳಿ. ಶಿಕ್ಷಕರಿಗೆ ಗೌರವಿಸಿ ಎಂದು ಹೇಳಿ ವಿದ್ಯಾರ್ಥಿಗಳಿಗೆ ಅಭಿನಂದನೆಗಳನ್ನು ತಿಳಿಸಿದರು. ನನ್ನ ತಂದೆ ದಿವಂಗತ ಡಾ ಸಯ್ಯದ ಶಾಹ ಖುಸ್ರೋ ಹುಸ್ಸೇನಿ ಸಾಹೇಬರ ಕನಸನ್ನು ಎಲ್ಲರೂ ಸೇರಿ ನನಸಾಗಿಸೋಣ ಎಂದರು.

ಪರ್ಲ್, ಸಫಿರೆ, ಎಮರಾಲ್ಡ್ ಮತ್ತು ರುಬಿ ಎಂಬ 4 ಹೌಸಗಳಿಗೆ ನಾಯಕ ಮತ್ತು ಉಪನಾಯಕರಿಗೆ ಬ್ಯಾಚಗಳನ್ನು ತೊಡಿಸಲಾಯಿತು. ವಿದ್ಯಾರ್ಥಿಗಳು ನೃತ್ಯ ಪ್ರದರ್ಶಿಸಿದರು.

ವಿದ್ಯಾರ್ಥಿಗಳಾದ ಅಬ್ದುಲ್ ಸಮದ್ ಮತ್ತು ಅಬುಲ್ ಉಜರ್ ಪ್ರಾರ್ಥಿಸಿದರೆ, ರೂಫಿ ಜಯ್ನಬ್ ಸ್ವಾಗತಿಸಿದಳು, ವಿದ್ಯಾರ್ಥಿನಿ ಸಯ್ಯದಾ ಅಲಿಷಾ ಫಾತಿಮಾ ವಂದಿಸಿದ್ರೆ, ಮೊಹಮ್ಮದ್ ಅಯಾನ ಮತ್ತು ಮಿರ್ಜಾ ಉಜೈರ್ ಬೇಗ, ಸೈದಾ ಶಿಬ್ರಾ ಹುಸ್ಸೇನಿ ನಿರೂಪಿಸಿ ದರು. ಈ ಕಾರ್ಯಕ್ರಮದಲ್ಲಿ ಕೆಬಿಎನ ಕ್ಯಾಂಪಸ ನಿರ್ದೇಶಕ ಡಾ ಸಯ್ಯದ ಮುಸ್ತಫಾ ಅಲ ಹುಸ್ಸೇನಿ, ಪ್ರಾಥಮಿಕ್ ಮತ್ತು ದ್ವಿತೀಯ ಶಿಕ್ಷಣದ ಕಾರ್ಯದರ್ಶಿ ಬೆನ್ನಿ ಕುರಿಯಾಕೋಸ್, ವಿವಿಯ ಸಮ ಉಪ ಕುಲ್ಪತಿ ಪ್ರೊ ಅಷಫಾಕ ಅಹ್ಮದ, ಕುಲಸಚಿವ ಮಿರ್ ವಿಲಾಯತ ಅಲಿ, ಶಾಲೆಯ ಪ್ರಾಂಶುಪಾಲ ಲಿಜೆಶ ತುರುತಿಲ್ಲ ಹಾಗೂ ಎಲ್ಲ ಶಿಕ್ಷಕವರ್ಗ, ವಿದ್ಯಾರ್ಥಿಗಳು ಹಾಜರಿದ್ದರು.

# ಗೃಹಲಕ್ಷ್ಮಿ ಹೆಸರಿನಲ್ಲಿ ಸಸಿ ನೆಡುವ ಕಾರ್ಯಕ್ರಮ



• ಮಲ್ಲಮ್ಮ ನುಡಿ ವಾರ್ತೆ ಬಸವನಬಾಗೇವಾಡಿ

ತಾಲೂಕಿನ ಮನಗೂಳಿಯ ಎಪಿಎಂಸಿ ಆವರಣದಲ್ಲಿ ರಾಜ್ಯ ಸರ್ಕಾರದ ಗ್ಯಾರಂಟಿ ಯೋಜನೆಗಳಲ್ಲೊಂದಾದ ಗೃಹಲಕ್ಷ್ಮಿ ಯೋಜನೆಯ ಹೆಸರಿನಲ್ಲಿ ತಾಲೂಕು ಗ್ಯಾರಂಟಿ ಯೋಜನಾ ಸಮಿತಿ ಮತ್ತು ಪಟ್ಟಣ ಪಂಚಾಯತ್ ಸಂಯುಕ್ತ ಆಶ್ರಯದಲ್ಲಿ ಸೋಮವಾರ ಗೃಹಲಕ್ಷ್ಮಿ ಸಸಿ ನೆಡುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು. ಕಾರ್ಯಕ್ರಮದಲ್ಲಿ ತಾಲೂಕು ಪಂಚಾಯತ್ ಇಓ ವೆಂಕಟೇಶ ವಂದಾಲ, ಗ್ಯಾರಂಟಿ ಯೋಜನೆಯ ಅಧ್ಯಕ್ಷ ಮೈಬೂಬ್ ಲಾ ನಾಯ್ಕೋಡಿ ಮತ್ತು ಸದಸ್ಯರು ಹಾಗೂ ಮುಖಂಡರಾದ ಚಂದ್ರಶೇಖರಗೌಡ ಪಾಟೀಲ, ವಿಶ್ವನಾಥಗೌಡ ಪಾಟೀಲ ಮುಖ್ಯಾಧಿಕಾರಿ ನಿಖಿಲೇಶ ಪಾಟೀಲ ಹಾಗೂ ಉಪಸ್ಥಿತರಿದ್ದರು. ಮಹಿಳಾ ಸಬಲೀಕರಣದ ಸಂಕೇತವಾದ ಗೃಹಲಕ್ಷ್ಮಿ ಯೋಜನೆಯಡಿ ಪರಿಸರ ಸಂರಕ್ಷಣೆಗೆ ಒತ್ತು ನೀಡುವ ಉದ್ದೇಶದಿಂದ ಈ ಸಸಿ ನೆಡುವ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ ಎಂದು ಗಣ್ಯರು ತಿಳಿಸಿದರು.

# ಪರಿಸರ ಜಾಗೃತಿಗೆ ಸಸಿಗಳನ್ನು ನೆಡುವ ಕಾರ್ಯಕ್ರಮ

• ಮಲ್ಲಮ್ಮ ನುಡಿ ವಾರ್ತೆ ಬಸವನಬಾಗೇವಾಡಿ

ಗೃಹಲಕ್ಷ್ಮಿ ದಿನಾಚರಣೆಯ ಅಂಗವಾಗಿ ತಾಲೂಕ ಗ್ಯಾರಂಟಿ ಯೋಜನೆಯ ಅಧ್ಯಕ್ಷರು ಮತ್ತು ಸದಸ್ಯರುಗಳು ಹಾಗೂ ಪುರಸಭೆಯ ವತಿಯಿಂದ ಪರಿಸರ ಜಾಗೃತಿ ಮೂಡಿಸಲು ಸಸಿಗಳನ್ನು ನೆಡುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು. ಸರ್ಕಾರ ಫಲಾನುಭವಿಗಳ ಸಬಲೀಕರಣ ಹಾಗೂ ಹಸಿರು ಪರಿಸರ ನಿರ್ಮಾಣ ಇದರ ಪ್ರಮುಖ ಉದ್ದೇಶವಾಗಿದೆ. ನಗರದ ಮತದಾರರ ಪರಿಷ್ಕರಣೆಯಲ್ಲಿ ನಿಗದಿಪಡಿಸಿದ ಅವಧಿಗಿಂತ ಮುಂಚೆ ನೂರರಷ್ಟು ಸಾಧನೆ ಮಾಡಿದ ಬಿ ಎಲ್ ಓ ಗಳಾದ ಎಸ್ ಕೆ ಬಿರಾದಾರ್, ಜಿ ಎಂ. ಕಣಕಲ, ಸವಿತಾ ಪವಾರ, ಅನ್ನುಬಾಯಿ ಲಮಾಣಿ ಹಾಗೂ ಮೇಲ್ವಿಚಾರಕರಾದ ಬಿ.ಎಸ್ ಚನಗೊಂಡ, ಎ ಎಸ್ ಜುಗುತಿ ರವರುಗಳಿಗೆ ಪುರಸಭೆಯಿಂದ ಸನ್ಮಾನ ಮಾಡಲಾಯಿತು. ಸದರಿ ಕಾರ್ಯಕ್ರಮಗಳಲ್ಲಿ ಭಾಗವಹಿಸಿದ ಮುಖ್ಯ ಅಧಿಕಾರಿಗಳಾದ ಎಚ್ ಎಸ್ ಚಿತ್ತರಗಿ, ಕಚೇರಿ ವ್ಯವಸ್ಥಾಪಕರಾದ ಸುರೇಶ ಬಾಗೇವಾಡಿ, ಶಬ್ಬೀರ ರೇವೂರಕರ, ಮುಖಂಡರುಗಳಾದ ಸುರೇಶ್ .ಬ. ಹಾರಿವಾಳ, ಶಂಕರಗೌಡ ಬಿರಾದಾರ, ಬಸಣ್ಣ ದೇಸಾಯಿ, ಶೇಖರ್ ಗೊಳಸಂಗಿ, ಮೆಹಬೂಬ. ಎಲ್. ನಾಯ್ಕೋಡಿ, ಮಾಂತೇಶ ತಳೆವಾಡ ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿಯ ಸದಸ್ಯರು, ಮುಖ್ಯಾಧಿಕಾರಿಗಳು ಮತ್ತು ಸಿಬ್ಬಂದಿ ವರ್ಗದವರು ಹಾಜರಿದ್ದರು.

# ಹುತಾತ್ಮ ಯೋಧರ ಸ್ಮರಣೆ ಅಗತ್ಯ



ಹುತಾತ್ಮರಾಗಿರುವ ಯೋಧರು ನಮಗೆ ಸದಾಕಾಲ ಪ್ರೇರಣೆಯಾಗಿ ಉಳಿಯುತ್ತಾರೆ. ನಮ್ಮ ತ್ರಿವರ್ಣ ಧ್ವಜದ ಗೌರವ ಮತ್ತು ಘನತೆಯನ್ನು ಎತ್ತಿ ಹಿಡಿಯಲು ತಮ್ಮ ಬದುಕನ್ನೇ ತ್ಯಾಗ ಮಾಡಿದ ಪ್ರತಿಯೊಬ್ಬ ಯೋಧರ ಶೌರ್ಯವನ್ನು ನಾವೆಲ್ಲರೂ ಸದಾಕಾಲ ನೆನಪಿಸಬೇಕು.

**– ಗುರುಬಸವ ಪಟ್ಟದ್ದೇವರು ಹಿರಮೇತ ಸಂಸ್ಥಾನ ಭಾಲ್ಕಿ**

• ಮಲ್ಲಮ್ಮ ನುಡಿ ವಾರ್ತೆ ಭಾಲ್ಕಿ

ತಾಲೂಕಿನ ಕರಡ್ಯಾಳ ಚನ್ನಬಸವೇಶ್ವರ ಗುರುಕುಲ ಸಮುಚ್ಚಯದ ಆವರಣದಲ್ಲಿ ಹಿರೇಮಠ ಸಂಸ್ಥಾನ ವಿದ್ಯಾಪೀಠ ಟ್ರಸ್ಟ್‌ನ ವತಿಯಿಂದ ಭಾನುವಾರ ಕಾರ್ಗಿಲ್ ವಿಜಯ ದಿವಸ ಆಚರಿಸಲಾಯಿತು.ಕಾರ್ಯಕ್ರಮದ ದಿವ್ಯ ಸಾನ್ನಿಧ್ಯ ಹಿರೇಮಠ ಸಂಸ್ಥಾನದ ಪೀಠಾಧಿಪತಿ ಗುರುಬಸವ ಪಟ್ಟದ್ದೇವರು ಹುತಾತ್ಮ ಯೋಧರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿ, ಸ್ವಾತಂತ್ರ್ಯ ನಂತರ ದೇಶ ಕಂಡ ಐದು ಯುದ್ದಗಳಲ್ಲಿ ಕಾರ್ಗಿಲ್ ಯುದ್ದ ಅತ್ಯಂತ ಮಹತ್ವ ಪಡೆದುಕೊಂಡಿದ್ದು, ಈ ಯುದ್ಧದಲ್ಲಿ ಅನೇಕ ಸೈನಿಕರು ಪ್ರಾಣ ತ್ಯಾಗ ಮಾಡಿದ್ದಾರೆ.

ಯೋಧರ ತ್ಯಾಗವನ್ನು ಸ್ಮರಿಸುವುದು ಪ್ರತಿಯೊಬ್ಬ ಭಾರತೀಯನ ಕರ್ತವ್ಯ ಎಂದರು .ಪ್ರತಿ ವರ್ಷ ಜುಲೈ 26ರಂದು ಕಾರ್ಗಿಲ್ ವಿಜಯೋತ್ಸವ ಆಚರಣೆ ಮಾಡುತ್ತೇವೆ. ಈ ವಿಜಯೋತ್ಸವದ ಹಿಂದೆ ಅನೇಕ ಭಾರತೀಯರ ತ್ಯಾಗ-ಬಲಿದಾನವಿದೆ. ದೇಶ ಸೇವೆಗೆ ತಮ್ಮ ಪ್ರಾಣವನ್ನು ಮುಡಿಪಾಗಿಟ್ಟ ಯೋಧರಿಗೆ ಗೌರವಿಸಬೇಕಾಗಿರುವುದು ನಮ್ಮೆಲ್ಲರ ಹೊಣೆಯಾಗಿದೆ ಎಂದು ತಿಳಿಸಿದರು.

ಅಧ್ಯಕ್ಷತೆ ವಹಿಸಿದ್ದ ಸಂಸ್ಥೆಯ ಆಡಳಿತಾಧಿಕಾರಿ ಮೋಹನ ರೆಡ್ಡಿ ಮಾತನಾಡಿ, ಕಾರ್ಗಿಲ್ ಯುದ್ಧ ಪ್ರತಿಯೊಬ್ಬ ಭಾರತೀಯನ ಮನಸ್ಸಿನಲ್ಲಿ ಅಚ್ಚಳಿಯದೆ ಉಳಿದಿದೆ. ದೇಶ ರಕ್ಷಣೆಗಾಗಿ ಮಡಿದ ವೀರ ಸೈನಿಕರ ತ್ಯಾಗ, ಬಲಿದಾನ, ಸಾಹಸ ಅವಿಸ್ಮರಣೀಯ.

1999ರ ಕಾರ್ಗಿಲ್ ಯುದ್ಧದಲ್ಲಿ ಭಾರತದ ರಕ್ಷಣೆಗಾಗಿ 527 ವೀರ ಯೋಧರು ಹುತಾತ್ಮರಾದರು. ಈ ಯುದ್ಧದಲ್ಲಿ ಸೇನೆಯು ಶತ್ರುಗಳನ್ನು ಸೋಲಿಸಿ ವಿಜಯ ಸಾಧಿಸಿತು ಎಂದು ಸ್ಮರಿಸಿದರು.

ಎಸ್ಸೆಸ್ಸೆಲ್ಸಿ ವಿದ್ಯಾರ್ಥಿಗಳಾದ ಸಂಸ್ಕೃತಿ, ಕೃಷ್ಣ ಮತ್ತು ಪಿಯುಸಿ ವಿಭಾಗದ ವಿದ್ಯಾರ್ಥಿಗಳಾದ ಸಿಂಚನ, ಅಮೂಲ್ಯ, ಗುರುಪ್ರಸಾದ ತಮ್ಮ ಅನಿಸಿಕೆ ವ್ಯಕ್ತ ಪಡಿಸಿದರು.

ಮಹಾಲಿಂಗ ಸ್ವಾಮೀಜಿ, ಬಸವಲಿಂಗ ಸ್ವಾಮೀಜಿ ಸಮ್ಮುಖ ವಹಿಸಿದ್ದರು.

ಈ ಸಂದರ್ಭದಲ್ಲಿ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ನಿಕಟಪೂರ್ವ ಅಧ್ಯಕ್ಷ ಶಶಿಧರ ಕೋಸಂಬೆ, ಪತ್ರಕರ್ತರಾದ ಶಶಿಕಾಂತ ಬಂಬುಳಗೆ, ಜಯರಾಜ ದಾಬಶೆಟ್ಟೆ, ಪ್ರಾಚಾರ್ಯ ಭಗವಂತ ರೆಡ್ಡಿ, ನೀಟ್ ವಿಭಾಗದ ಮುಖ್ಯಸ್ಥ ಎಂ.ಎಸ್.ರೆಡ್ಡಿ, ಶಶಿಕುಮಾರ, ಅನಿಲ ಪಾಟೀಲ್, ಗುಂಡಪ್ಪ ಸೇರಿದಂತೆ ಹಲವರು ಇದ್ದರು.ಶಿಕ್ಷಕ ಲಕ್ಷ್ಮಣ ಮೇತ್ರೆ ದೇಶಭಕ್ತಿ ಗೀತೆ ಹಾಡಿದರು. ಪ್ರಾಚಾರ್ಯ ಬಸವರಾಜ ಮೊಳಕೀರೆ ನಿರೂಪಿಸಿದರು.

# ವಿದ್ಯಾರ್ಥಿಗಳು ಸೇವಾ ಮನೋಭಾವ ಬೆಳೆಸಿಕೊಳ್ಳಬೇಕು: ಸ್ಫೂರ್ತಿ ಧನ್ನೂರು




• ಮಲ್ಲಮ್ಮ ನುಡಿ ವಾರ್ತೆ ಭಾಲ್ಕಿ

ತಾಲೂಕಿನ ಹಾಲಹಳ್ಳಿಯ ಶ್ರೀ ಗಣೇಶ್ವರ ಶಿಕ್ಷಣ ಸಂಸ್ಥೆ (ಆರ್) ಆಶ್ರಯದ ಕೆ.ಎಲ್. ಪಬ್ಲಿಕ್ ಶಾಲೆಯಲ್ಲಿ ನೂತನ ವಿದ್ಯಾರ್ಥಿ ಸಂಸತ್ತಿನ ಪದಗ್ರಹಣ ಮಹೋತ್ಸವವನ್ನು ಶನಿವಾರ ಅದ್ದೂರಿಯಾಗಿ ಹಾಗೂ ಶಿಸ್ತುಬದ್ಧವಾಗಿ ನಡೆಸಲಾಯಿತು.

ಕಾರ್ಯಕ್ರಮವನ್ನು ಗಣ್ಯರು ಜ್ಯೋತಿ ಬೆಳಗಿಸುವ ಮೂಲಕ ಉದ್ಘಾಟಿಸಿ, ಶಾಲೆಯ ಪ್ರಗತಿ ಹಾಗೂ ವಿದ್ಯಾರ್ಥಿಗಳ ಉಜ್ವಲ ಭವಿಷ್ಯಕ್ಕಾಗಿ ವಿಶೇಷ ಪೂಜೆ ನೆರವೇರಿಸಲಾಯಿತು.

ವಿಶೇಷ ಅತಿಥಿಯಾಗಿ ಭಾಗವಹಿಸಿದ್ದ ಬೀದರದ ಸಿಲ್ವರ್ ರೋಟರಿ ಕ್ಲಬ್ ಅಧ್ಯಕ್ಷೆ ಸ್ಫೂರ್ತಿ ಧನ್ನೂರು ಮಾತನಾಡಿ, ನಾಯಕತ್ವ ಎಂದರೆ ಕೇವಲ ಅಧಿಕಾರ ಅಥವಾ ಹುದ್ದೆಯಲ್ಲ, ಅದು ಜವಾಬ್ದಾರಿಯ ಸಂಕೇತವಾಗಿದೆ. ವಿದ್ಯಾರ್ಥಿ ನಾಯಕರು ತಮ್ಮ ಸಹಪಾಠಿಗಳಿಗೆ ಮಾದರಿಯಾಗಿ ಸೇವಾ ಮನೋಭಾವ ಹಾಗೂ ಶಿಸ್ತಿನಿಂದ ಕಾರ್ಯನಿರ್ವಹಿಸಬೇಕು. ಶಾಲಾ ಹಂತದಲ್ಲೇ ನಾಯಕತ್ವದ ಗುಣಗಳನ್ನು ಬೆಳೆಸಿಕೊಂಡರೆ ಭವಿಷ್ಯದಲ್ಲಿ ಉತ್ತಮ ಪ್ರಜೆಗಳಾಗಿ ರೂಪುಗೊಳ್ಳಲು ಸಾಧ್ಯ ಎಂದು ಹೇಳಿದರು.

ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದ ಬದಗಲ್ ಪಿಎಸ್‌ಐ ಕಿರಣ್ ಧೋತ್ರೆ ಮಾತನಾಡಿ, ವಿದ್ಯಾರ್ಥಿಗಳು ಬಾಲ್ಯದಿಂದಲೇ ಶಿಸ್ತು, ಸಮಯಪಾಲನೆ ಮತ್ತು ಸಾಮಾಜಿಕ ಹೊಣೆಗಾರಿಕೆಯನ್ನು ಅಳವಡಿಸಿಕೊಳ್ಳಬೇಕು ಎಂದು ಕರೆ ನೀಡಿದರು.

ಈ ಸಂದರ್ಭದಲ್ಲಿ ಧನ್ನೂರು ಠಾಣೆಯ ಎಎಸ್‌ಐಗಳಾದ ಲಕ್ಷ್ಮಣ ರೆಡ್ಡಿ ಹಾಗೂ ಅಶೋಕ್ ಕುಮಾರ್ ನೂತನ ವಿದ್ಯಾರ್ಥಿ ನಾಯಕರಿಗೆ ಬ್ಯಾಡ್ಜ್ ಧರಿಸಿ ಅಭಿನಂದಿಸಿದರು.

ಪ್ರಾಂಶುಪಾಲೆ ಅರ್ಚನಾ ರಾಜಕುಮಾರ್ ಲಿಂಗಬಶೆಟ್ಟಿ ಅವರ ನೇತೃತ್ವದಲ್ಲಿ ನೂತನ ಪದಾಧಿಕಾರಿಗಳು ತಮ್ಮ ಜವಾಬ್ದಾರಿಗಳನ್ನು ಪ್ರಾಮಾಣಿಕವಾಗಿ ನಿರ್ವಹಿಸುವುದಾಗಿ ಪ್ರಮಾಣ ವಚನ ಸ್ವೀಕರಿಸಿದರು.

ಕಾರ್ಯಕ್ರಮದಲ್ಲಿ ರಾಜಕುಮಾರ್ ಲಿಂಗಬಶೆಟ್ಟಿ, ಸಿಆರ್‌ಪಿ ವಿಜಯಕುಮಾರ್, ಬಸವರಾಜ ರಿಕ್ಕೆ, ಸತೀಶ್ ಪಾಸರ್ಗೆ, ಧನರಾಜ್ ಸೊರಳೆ ಸೇರಿದಂತೆ ಗಣ್ಯರು ಉಪಸ್ಥಿತರಿದ್ದರು. ವಿದ್ಯಾರ್ಥಿಗಳ ಶಿಸ್ತುಬದ್ಧ ಪಥಸಂಚಲನ ಹಾಗೂ ರಾಷ್ಟ್ರಗೀತೆಯೊಂದಿಗೆ ಪದಗ್ರಹಣ ಮಹೋತ್ಸವ ಯಶಸ್ವಿಯಾಗಿ ನೆರವೇರಿತು.

# ದೇಹವನ್ನು ನಾಶಮಾಡುವ ದುಶ್ಚಟಗಳಿಂದ ದೂರವಿರಿ: ಪಟ್ಟದ್ದೇವರು



• ಮಲ್ಲಮ್ಮ ನುಡಿ ವಾರ್ತೆ ಭಾಲ್ಕಿ

ದೇವಾಲಯದಂತೆ ಕಾಪಾಡಬೇಕಾದ ದೇಹವನ್ನು ನಾಶಮಾಡುವ ದುಶ್ಚಟಗಳಿಂದ ಯುವಕರು, ಹಿರಿಯರು ದೂರವಿರಬೇಕು ಎಂದು ಹಿರೇಮಠದ ಪೀಠಾಧಿಪತಿ ಗುರುಬಸವ ಪಟ್ಟದ್ದೇವರು ಹೇಳಿದರು. ತಾಲ್ಲೂಕಿನ ಕರಡ್ಯಾಳದ ಶ್ರೀ ಚನ್ನಬಸವೇಶ್ವರ ಗುರುಕುಲ ವಿಜ್ಞಾನ ಪಿಯು ಕಾಲೇಜಿನಲ್ಲಿ ಬೀದರ್ ಜಿಲ್ಲಾ ಪೊಲೀಸ್ ಇಲಾಖೆ ವತಿಯಿಂದ ಹಮ್ಮಿಕೊಂಡಿದ್ದ ಡ್ರಗ್ಸ್ ಮುಕ್ತ ಕರ್ನಾಟಕ ಅಭಿಯಾನದ ಭಿತ್ತಿ ಪತ್ರಗಳನ್ನು ಬಿಡುಗಡೆಗೊಳಿಸಿ ಅವರು ಮಾತನಾಡಿದರು. ಸದ್ಗುಣಗಳು ಯುವಕರನ್ನು ದೇಶದ ಸೂಕ್ತ ಸತ್ಪ್ರಜೆಗಳನ್ನಾಗಿ ರೂಪಿಸುತ್ತವೆ. ಹಾಗಾಗಿ ಯುವಜನತೆ ಗುಟ್ಕಾ, ಸಿಗರೇಟ್, ಬಿಡಿ, ತಂಬಾಕು ಸೇವನೆ, ಡ್ರಗ್ಸ್ ಗಳ ಬಳಕೆಯಿಂದ ದೂರವಿರಬೇಕು ಎಂದು ತಿಳಿಸಿದರು. ಡಿವೈಎಸ್ಪಿ ಬಲ್ಲಪ್ಪ ನಂದಗಾವಿ ಮಾತನಾಡಿ, ರಾಜ್ಯವನ್ನು 2028ರೊಳಗೆ ಸಂಪೂರ್ಣ ಡ್ರಗ್ಸ್ ಮುಕ್ತ ಹಾಗೂ ವ್ಯಸನಮುಕ್ತವನ್ನಾಗಿ ಮಾಡಲು ಸರ್ಕಾರ ನಿರ್ಧರಿಸಿದೆ. ಈ ನಿಟ್ಟಿನಲ್ಲಿ ಪೊಲೀಸ್ ಇಲಾಖೆ ವತಿಯಿಂದ 'ಬೇಡ ಬ್ರೋ' ಮತ್ತು 'ಆಪರೇಷನ್ ರೈಸ್' ಎಂಬ ಹೊಸ ಜಾಗೃತಿ ಅಭಿಯಾನಗಳಿಗೆ ಚಾಲನೆ ನೀಡಲಾಗಿದೆ. ಬೇಡ ಬ್ರೋ ಅಭಿಯಾನವು ಯುವಜನರು ಮತ್ತು ವಿದ್ಯಾರ್ಥಿಗಳಲ್ಲಿ ಮಾದಕ ವಸ್ತುಗಳ ದುಷ್ಪರಿಣಾಮಗಳ ಬಗ್ಗೆ ಅರಿವು ಮೂಡಿಸಿ, ಡ್ರಗ್ಸ್‌ನಿಂದ ದೂರವಿರುವಂತೆ ಪ್ರೇರೇಪಿಸುತ್ತದೆ. ಆಪರೇಷನ್ ರೈಸ್ ಅಭಿನವು ನಿರಾಕರಿಸಿ (Refuse), ಮಾಹಿತಿ ನೀಡಿ (Inform), ಬೆಂಬಲಿಸಿ (Support) ಮತ್ತು ಸಬಲಪಡಿಸಿ (Empower) ಎಂಬ ನಾಲ್ಕು ಪ್ರಮುಖ ತತ್ವಗಳ ಮೇಲಿದೆ ಎಂದು ತಿಳಿಸಿದರು. ಸಾರ್ವಜನಿಕರು ಡ್ರಗ್ಸ್ ಸಾಗಾಟ ಅಥವಾ ಮಾರಾಟದ ಬಗ್ಗೆ ಗೌಪ್ಯ ಮಾಹಿತಿ ನೀಡಬೇಕು. ಅಕ್ರಮವಾಗಿ ಡ್ರಗ್ಸ್ ತಯಾರಿಸುವ ಹಾಗೂ ಮಾರಾಟ ಮಾಡುವವರ ವಿರುದ್ಧ ಕಠಿಣ ಕಾನೂನು ಕ್ರಮ ಕೈಗೊಳ್ಳಲಾಗುವುದು ಎಂದು ಹೇಳಿದರು. ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ನಿಕಟ ಪೂರ್ವ ಅಧ್ಯಕ್ಷ ಶಶಿಧರ ಕೋಸಂಬೆ, ಆಡಳಿತಾಧಿಕಾರಿ ಮೋಹನರೆಡ್ಡಿ, ನಗರ ಪೊಲೀಸ್ ಠಾಣೆ ಸಿಪಿಐ ಅಂಬರೀಶ್ ಬಿ., ಗ್ರಾಮೀಣ ಪೊಲೀಸ್ ಠಾಣೆ ಸಿಪಿಐ ಹನುಮರೆಡ್ಡಪ್ಪ, ಪ್ರೊಬೇಷನರಿ ಪಿಎ??? ಅನಿಲ್ ಕುಮಾರ್ ಸೇರಿದಂತೆ ಇತರರು ಇದ್ದರು.

ಶಿಕ್ಷಕ ಲಕ್ಷ್ಮಣ ಮೇತ್ರೆ ನಿರೂಪಿಸಿ, ವಂದಿಸಿದರು.

# ಆತ್ಮವಿಶ್ವಾಸ ವಿದ್ಯಾರ್ಥಿಗಳ ನಿಜವಾದ ಶಕ್ತಿ

• ಮಲ್ಲಮ್ಮ ನುಡಿ ವಾರ್ತೆ ಭಾಲ್ಕಿ

ವಿದ್ಯಾರ್ಥಿಗಳು ಯಾವತ್ತು ಆತ್ಮವಿಶ್ವಾಸ ಕಳೆದುಕೊಳ್ಳಬಾರದು. ಆತ್ಮವಿಶ್ವಾಸವೇ ವಿದ್ಯಾರ್ಥಿಗಳ ನಿಜವಾದ ಶಕ್ತಿಯಾಗಿರುತ್ತದೆ. ಫಲಿತಾಂಶದ ಕಡೆ ಗಮನ ಕೊಡದೆ ಪ್ರಯತ್ನದ ಕಡೆ ಗಮನಕೊಟ್ಟರೆ ವಿದ್ಯಾರ್ಥಿಗಳು ಜೀವನದಲ್ಲಿ ತಮ್ಮ ಗುರಿ ಮುಟ್ಟಲು ಸಾಧ್ಯವಾಗುತ್ತದೆ ಎಂದು ಸೇಗುಣಸಿ ಮಠದ ಡಾ.ಮಹಾಂತಪ್ರಭು ಮಹಾಸ್ವಾಮೀಜಿ ಹೇಳಿದರು.

ತಾಲೂಕಿನ ಕರಡ್ಯಾಳ ಚನ್ನಬಸವೇಶ್ವರ ಗುರುಕುಲದಲ್ಲಿ ಸೋಮವಾರ ಆಯೋಜಿಸಿದ್ದ ವ್ಯಕ್ತಿತ್ವ ವಿಕಸನ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಅವರು ಮಾತನಾಡಿದರು.

ಕೇವಲ ಅಂಕಗಳ ಪಡೆಯುವ ಸಂಬಂಧ ಓದುವುದುಕ್ಕಿಂತಲೂ ಸಂಸ್ಕಾರ ಪಡೆಯುವುದಕ್ಕಾಗಿ ಓದಿದರೆ ಅದನ್ನು ನಿಮಗೆ ಉನ್ನತ ಸ್ಥಾನಕ್ಕೆ ಕೊಂಡಯ್ಯುತ್ತದೆ. ವಸ್ತುಗಳಿಂದ ನಿಮಗೆ ಬೆಲೆ ಬರಬಾರದು. ನಿಮ್ಮಿಂದ ವಸ್ತುವಿಗೆ ಬೆಲೆ ಬಂದಾಗ ನಿಮ್ಮ ವ್ಯಕ್ತಿತ್ವ ನಿರ್ಮಾಣವಾಗುತ್ತದೆ. ಹೃದಯ ಶ್ರೀಮಂತಿಕೆಯೇ ನಿಜವಾದ ಸೌಂದರ್ಯ ಎಂಬ ಮಾತು ಭಾರತದ ರಾಷ್ಟ್ರಪತಿಗಳಾದ ಡಾ.ಎ.ಪಿ.ಜೆ.ಅಬ್ದುಲ್ ಕಲಾಂ ಯಾವಾಗಲೂ ಹೇಳುತ್ತಿದ್ದರು. ಅದನ್ನು ನಾವು ಗಮನದಲ್ಲಿಟ್ಟುಕೊಳ್ಳಬೇಕು. ಹೃದಯ ಶ್ರೀಮಂತಿಕೆ ಎಂದರೆ ನಮ್ಮ ಆಚರಣೆಯಲ್ಲಿ ಮಾನವೀಯತೆ, ಕರುಣೆ, ಪ್ರೀತಿ ಇರಬೇಕು. ನಾವು ಸತ್ಯದ ಮಾರ್ಗದಲ್ಲಿ ನಡೆಯಬೇಕು. ಸತ್ಯ ಮಾರ್ಗದಿಂದ ನಮ್ಮ ಆತ್ಮವಿಶ್ವಾಸ ಗಟ್ಟಿಕೊಳ್ಳುತ್ತದೆ. ಆತ್ಮವಿಶ್ವಾಸವಿದ್ದರೆ ನಾವು ಜಗತ್ತನ್ನೇ ಗೆಲ್ಲಬಹುದು. ಇಂತಹ ಅನೇಕ ಉದಾಹರಣೆಗಳು ಇತಿಹಾಸದ ಪುಟಗಳಲ್ಲಿ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಸಾಧಕರಿಂದ ನೋಡಬಹುದು. ವಿದ್ಯಾರ್ಥಿಗಳಲ್ಲಿ ಆತ್ಮವಿಶ್ವಾಸ ತುಂಬುವ ಶಿಕ್ಷಣ ಇಂದು ನಮ್ಮ ಶ್ರೀ ಚನ್ನಬಸವೇಶ್ವರ ಗುರುಕುಲ ಮಾಡುತ್ತಿರುವುದು ಅತ್ಯಂತ ಹೆಮ್ಮೆಯ ಸಂಗತಿಯಾಗಿದೆ.

ಅದಕ್ಕಾಗಿಯೇ ನಮ್ಮ ನಾಡು ಅಷ್ಟೇ ಅಲ್ಲದೆ, ಹೊರನಾಡಿನ ವಿದ್ಯಾರ್ಥಿಗಳು ಕೂಡ ಗುರುಕುಲದಲ್ಲಿ ಪ್ರವೇಶ ಪಡೆದು ಅಧ್ಯಯನ ಮಾಡಿ ತಮ್ಮ ಭವಿಷ್ಯ ರೂಪಿಸಿಕೊಳ್ಳುತ್ತಿದ್ದಾರೆ. ಇಂತಹ ಅಪರೂಪದ ಶಿಕ್ಷಣ ವ್ಯವಸ್ಥೆ ಈ ಭಾಗದಲ್ಲಿ ರೂಪಿಸಿದವರು ಪರಮ ಪೂಜ್ಯ ನಾಡೋಜ ಡಾ.ಬಸವಲಿಂಗ ಪಟ್ಟದ್ದೇವರು. ಅವರ ದೂರದೃಷ್ಟಿ, ಶಿಕ್ಷಣದ ಕಾಳಜಿ, ಬಡಮಕ್ಕಳ ಕುರಿತು ಕರುಣೆ, ಮಾತೃಹೃದಯ ನಮ್ಮೆಲ್ಲರಿಗೆ ದಾರಿದೀಪಗಳಾಗಿವೆ. ಪರಮ ಪೂಜ್ಯ ಗುರುಬಸವ ಪಟ್ಟದ್ದೇವರು ಕೂಡ ಅತ್ಯಂತ ಕ್ರಿಯಾಶೀಲರಾಗಿ ಶ್ರೀಮಠ ಸಂಸ್ಥೆ ಅಷ್ಟೇ ಅಲ್ಲದೆ ಈ ಭಾಗದ ಸರ್ವಾಂಗೀಣ ಅಭಿವೃದ್ಧಿಗಾಗಿ ಅವಿಶ್ರಾಂತವಾಗಿ ಪರಿಶ್ರಮ ಪಡುತ್ತಿದ್ದಾರೆ. ಇಂತಹ ಗುರುಪರಂಪರೆ ದೊರೆತ ಈ ಗುರುಕುಲ ನಿಜಕ್ಕೂ ನಮ್ಮ ನಾಡಿನ ಹೆಮ್ಮೆ ಎಂದು ಹೇಳಲು ಅಭಿಮಾನ ಉಕ್ಕಿ ಬರುತ್ತದೆ ಎಂದು ತಿಳಿಸಿದರು.

ದಿವ್ಯ ಸಾನ್ನಿಧ್ಯ ವಹಿಸಿದ್ದ ಹಿರೇಮಠ ಸಂಸ್ಥಾನದ ಪೀಠಾಧಿಪತಿ ಗುರುಬಸವ ಪಟ್ಟದ್ದೇವರು ಮಾತನಾಡಿ, ಡಾ.ಮಹಾಂತಪ್ರಭುಸ್ವಾಮೀಜಿ ಅವರು ಈ ದಿನಮಾನದ ಅಪರೂಪದ ಯುವಸನ್ಯಾಸಿಗಳಾಗಿದ್ದಾರೆ. ಅವರ ಅಧ್ಯಯನಶೀಲತೆ, ಬಹುಭಾಷೆ ಪಾಂಡಿತ್ಯ, ಅನುಭಾವ, ಪ್ರವಚನಶೈಲಿ ಅತ್ಯಾದ್ಭುತವಾಗಿದೆ. ಪೂಜ್ಯರು ಅತ್ಯಂತ ಕಡಿಮೆ ವಯಸ್ಸಿನಲ್ಲಿ ವಿದೇಶಗಳಲ್ಲಿ ಹೋಗಿ ಬಸವಾದಿ ಶರಣರ ಸಂದೇಶ ಸಾರಿ ಬಂದಿರುವುದು ನಮಗೆಲ್ಲರಿಗೆ ಹೆಮ್ಮೆಯ ಸಂಗತಿಯಾಗಿದೆ ಎಂದು ತಿಳಿಸಿದರು.



ಈ ಸಂದರ್ಭದಲ್ಲಿ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ನಿಕಟಪೂರ್ವ ಅಧ್ಯಕ್ಷ ಶಶಿಧರ ಕೋಸಂಬೆ, ಮಹೇಶ ಘಾಳೆ, ಶೈಲೇಶ ಚಳಕಾಪೂರೆ ಸೇರಿದಂತೆ ಹಲವರು ಇದ್ದರು.

ಸೇಗುಣಸಿಯ ಡಾ.ಮಹಾಂತಪ್ರಭು ಸ್ವಾಮೀಜಿ ಅವರು ನಮ್ಮ ಗುರುಕುಲದ ಮಕ್ಕಳಿಗೆ ಸ್ಫೂರ್ತಿಯ ನುಡಿಗಳು ನುಡಿದು ವಿದ್ಯಾರ್ಥಿಗಳಲ್ಲಿ ಆತ್ಮಸ್ಥೈರ್ಯ ತುಂಬಿರುವುದು ನಮಗೆ ಅತ್ಯಂತ ಸಂತೋಷ ತರಿಸಿದೆ.

**– ಗುರುಬಸವ ಪಟ್ಟದ್ದೇವರು ಹಿರೇಮಠ ಸಂಸ್ಥಾನ ಭಾಲ್ಕಿ**

# ಡೆಂಗೆ ಜ್ವರ ನಿಯಂತ್ರಣಕ್ಕೆ ಕಟ್ಟುನಿಟ್ಟಿನ ಕ್ರಮ

• ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ

ತಾಲೂಕಿನ ಯರಗುಡಿ ಪ್ರಾಥಮಿಕ ಆರೋಗ್ಯ ಕೇಂದ್ರ ವ್ಯಾಪ್ತಿಯ ಬಸರಕೋಡು ಗ್ರಾಮದಲ್ಲಿ ಇತ್ತೀಚೆಗೆ ಜ್ವರದ ಪ್ರಕರಣಗಳು ಹೆಚ್ಚಾದ ಹಿನ್ನೆಲೆಯಲ್ಲಿ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳಾದ ಡಾ. ಅಲಕಾನಂದ ಡಿ. ಮಳಗಿ ಅವರು ಸೋಮವಾರ ಗ್ರಾಮಕ್ಕೆ ಭೇಟಿ ನೀಡಿ ಸ್ಥಿತಿಗತಿಗಳನ್ನು ಪರಿಶೀಲಿಸಿದರು.

ಗ್ರಾಮದ ಪ್ರತಿಯೊಂದು ಓಣಿಯಲ್ಲಿ ಸ್ವಚ್ಛತೆಯನ್ನು ಪರಿಶೀಲಿಸಿದ ಡಿಎಚ್‌ಒ, ಸಾರ್ವಜನಿಕರ ಆರೋಗ್ಯ ವಿಚಾರಿಸಿದರು.ನಂತರ ಮಾತನಾಡಿದ ಅವರು, "ಇದು ಮಳೆಗಾಲವಾಗಿರುವುದರಿಂದ ವೈರಲ್ ಫೀವರ್ ಮತ್ತು ಡೆಂಗ್ಯೂ ಜ್ವರ ಕಾಣಿಸಿಕೊಳ್ಳುವ ಸಾಧ್ಯತೆ ಹೆಚ್ಚಿರುತ್ತದೆ. ಸಾರ್ವಜನಿಕರು ಆತಂಕಪಡುವ ಅಗತ್ಯವಿಲ್ಲ, ಸೂಕ್ತ ಚಿಕಿತ್ಸೆಯಿಂದ ಜ್ವರ ಸಂಪೂರ್ಣವಾಗಿ

ಗುಣಮುಖವಾಗುತ್ತದೆ," ಎಂದು ಧೈರ್ಯ ತುಂಬಿದರು. ಅಲ್ಲದೆ "ಯಾರಿಗಾದರೂ 3 ದಿನಗಳಿಗಿಂತ ಹೆಚ್ಚು ಕಾಲ ಬಿಡದೆ ಜ್ವರ, ವಿಪರೀತ ತಲೆನೋವು, ಕಣ್ಣುಗಳ ಹಿಂಭಾಗದಲ್ಲಿ ನೋವು ಹಾಗೂ ಕೀಲು ನೋವು ಕಂಡುಬಂದರೆ ನಿರ್ಲಕ್ಷಿಸದೆ ತಕ್ಷಣವೇ ಚಿಕಿತ್ಸೆ ಪಡೆಯಬೇಕು.

ಬಸರಕೋಡು ಗ್ರಾಮದ ಆಯುಷ್ಮಾನ್ ಆರೋಗ್ಯ ಕೇಂದ್ರದಲ್ಲಿ ತಾತ್ಕಾಲಿಕ ಚಿಕಿತ್ಸಾ ಕೇಂದ್ರ ತೆರೆಯಲಾಗಿದ್ದು, ಗ್ರಾಮಸ್ಥರು ಇದರ ಸದುಪಯೋಗ ಪಡೆದುಕೊಳ್ಳಬೇಕು ಎಂದು ಮನವಿ ಮಾಡಿದರು.ಕೈಗೊಂಡ ಮುಂಜಾಗ್ರತಾ ಕ್ರಮಗಳು:ಮನೆ ಮನೆ ಸಮೀಕ್ಷೆ: ಈಗಾಗಲೇ ವಿಶೇಷ ಆರೋಗ್ಯ ಸಿಬ್ಬಂದಿಯ ತಂಡಗಳು ಪ್ರತಿಯೊಂದು ಮನೆಗೆ ಭೇಟಿ ನೀಡಿ ಜ್ವರದ ಸಮೀಕ್ಷೆ ನಡೆಸುತ್ತಿದ್ದು, ರಕ್ತದ ಮಾದರಿ ಸಂಗ್ರಹಿಸಿ ಚಿಕಿತ್ಸೆ ನೀಡಲಾಗುತ್ತಿದೆ.



ಲಲಾರ್ವ ನಾಶ ಮತ್ತು ಜಾಗೃತಿ: ನೀರು ಶೇಖರಣಾ ತೊಟ್ಟಿಗಳು, ಹೂವಿನ ಕುಂಡಗಳು, ಹಳೆಯ ಟೈಯರ್, ತೆಂಗಿನ ಚಿಪ್ಪು ಮತ್ತು ಪ್ಲಾಸ್ಟಿಕ್ ತ್ಯಾಜ್ಯಗಳಲ್ಲಿ ಸೊಳ್ಳೆ ಲಾರ್ವಾಗಳು ಉತ್ಪತ್ತಿಯಾಗದಂತೆ ತಡೆಗಟ್ಟಲು ಲಾರ್ವಾ ಜಾಗೃತಿ ಮೂಡಿಸಲಾಯಿತು. ಲಾರ್ವಾ ಕಂಡುಬಂದ ನೀರನ್ನು ತಕ್ಷಣ ಖಾಲಿ ಮಾಡಿಸಲಾಯಿತು.

ಸೊಳ್ಳೆ ನಿಯಂತ್ರಣ ಸಲಹೆಗಳು: ಬೆಳಿಗ್ಗೆ ಮತ್ತು ಸಂಜೆ ಸೊಳ್ಳೆಗಳ ಕಾಟ ಹೆಚ್ಚಿರುವುದರಿಂದ ಕಿಟಕಿಗಳಿಗೆ ಜಾಲರಿ ಅಳವಡಿಸುವುದು, ಮನೆಯ ಮುಂದೆ ಬೇವಿನ ಸೊಪ್ಪಿನ ಹೊಗೆ ಹಾಕುವುದು, ಸೊಳ್ಳೆ ಪರದೆ ಹಾಗೂ ಸೊಳ್ಳೆ ನಿವಾರಕ ತೈಲಗಳನ್ನು ಬಳಸುವಂತೆ ತಿಳಿಸಿದರು.

ಗ್ರಾಮ ಪಂಚಾಯಿತಿಗೆ ಸೂಚನೆ: ಗ್ರಾಮದಲ್ಲಿ ಸೊಳ್ಳೆಗಳ ನಿಯಂತ್ರಣಕ್ಕೆ ತಕ್ಷಣವೇ ಫಾಗಿಂಗ್ ಮಾಡಿಸಲು ಹಾಗೂ ಚರಂಡಿ ನೈರ್ಮಲ್ಯ ಕಾಪಾಡಲು ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದರು.

ಈ ಭೇಟಿಯ ಸಂದರ್ಭದಲ್ಲಿ ಜಿಲ್ಲಾ ಸರ್ವೇಕ್ಷಣಾಧಿಕಾರಿ ಡಾ. ಮರಿಯಂಬಿ ವಿ.ಕೆ, ವೈದ್ಯಾಧಿಕಾರಿ ಡಾ. ಪ್ರಹ್ಲಾದ್, ಗ್ರಾಮದ ಮುಖಂಡರಾದ ತಿಪ್ಪಯ್ಯ, ಕ್ಷೇತ್ರ ಆರೋಗ್ಯ ಶಿಕ್ಷಣಾಧಿಕಾರಿ ಖುರ್ಶಿದ್ ಬೇಗಮ್, ಹಿರಿಯ ಆರೋಗ್ಯ ನಿರೀಕ್ಷಣಾಧಿಕಾರಿ ಪಂಪಾಪತಿ, ಆರೋಗ್ಯ ಇಲಾಖೆಯ ಸಿಬ್ಬಂದಿ, ಆಶಾ ಕಾರ್ಯಕರ್ತೆಯರು ಹಾಗೂ ಗ್ರಾಮಸ್ಥರು ಉಪಸ್ಥಿತರಿದ್ದರು.

# ಅಂಬೇಡ್ಕರ್ ಜೀವನ-ಸಾಧನೆ ವಿದ್ಯಾರ್ಥಿಗಳಿಗೆ ದಾರಿದೀಪ: ಬಸವರಾಜ



• ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ

ಭಾರತರತ್ನ ಡಾ. ಬಿ.ಆರ್. ಅಂಬೇಡ್ಕರ್ ಅವರ ಜೀವನ, ಹೋರಾಟ, ಅಧ್ಯಯನದ ಬದ್ಧತೆ ಮತ್ತು ದೇಶಕ್ಕೆ ನೀಡಿರುವ ಅಪಾರ ಕೊಡುಗೆಗಳ ಬಗ್ಗೆ ವಿದ್ಯಾರ್ಥಿಗಳು ಸಮಗ್ರವಾಗಿ ತಿಳಿದುಕೊಳ್ಳಬೇಕು. ಅವರ ಜೀವನ ಮೌಲ್ಯಗಳನ್ನು ಅಳವಡಿಸಿಕೊಂಡರೆ ಜೀವನದಲ್ಲಿ ಎದುರಾಗುವ ಕಷ್ಟಕರ ಸವಾಲುಗಳನ್ನು ಆತ್ಮವಿಶ್ವಾಸದಿಂದ ಎದುರಿಸಿ ಯಶಸ್ಸಿನತ್ತ ಸಾಗಲು ಸಾಧ್ಯವಾಗುತ್ತದೆ ಎಂದು ಇಂಡೋ ಅಮೆರಿಕನ್ ಪದವಿ ಕಾಲೇಜಿನ ಸಹಾಯಕ ಪ್ರಾಧ್ಯಾಪಕ ಬಸವರಾಜ ಅಮಾತಿ ಹೇಳಿದರು. ನಗರದ ಸರ್ಕಾರಿ (ಮಾ.ಪು.) ಪದವಿ ಪೂರ್ವ ಸಂಯುಕ್ತ ಕಾಲೇಜಿನ ಸಭಾಂಗಣದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಮಂಗಳವಾರ ಆಯೋಜಿಸಿದ್ದ "ಭಾರತರತ್ನ ಡಾ. ಬಿ.ಆರ್. ಅಂಬೇಡ್ಕರ್ ಓದು, ಬದುಕು ಮತ್ತು ಸಾಧನೆಗಳ ಪರಿಚಯ" ಕಾರ್ಯಕ್ರಮ ಹಾಗೂ ವಿದ್ಯಾರ್ಥಿಗಳಿಗಾಗಿ ಏರ್ಪಡಿಸಿದ್ದ ಪ್ರಬಂಧ ಸ್ಪರ್ಧೆಯ ವಿಜೇತರಿಗೆ ಪುಸ್ತಕ ರೂಪದಲ್ಲಿ ಬಹುಮಾನ ವಿತರಣೆ ಸಮಾರಂಭವನ್ನು ಉದ್ಘಾಟಿಸಿ ಅವರು ಮಾತನಾಡಿದರು. ಡಾ. ಅಂಬೇಡ್ಕರ್ ಅವರು ತೀವ್ರ ಬಡತನ ಮತ್ತು ಸಾಮಾಜಿಕ ತಾರತಮ್ಯದ ನಡುವೆಯೇ ಬೆಳೆದು, ಶಿಕ್ಷಣವನ್ನೇ ತಮ್ಮ ಶಕ್ತಿಯನ್ನಾಗಿ ಮಾಡಿಕೊಂಡು ವಿಶ್ವದ ಪ್ರತಿಷ್ಠಿತ ವಿಶ್ವವಿದ್ಯಾಲಯಗಳಲ್ಲಿ ಉನ್ನತ ಶಿಕ್ಷಣ ಪಡೆದರು. ತಮ್ಮ ಜ್ಞಾನ, ಚಿಂತನೆ ಮತ್ತು ದೂರದೃಷ್ಟಿಯ ಮೂಲಕ ಭಾರತೀಯ ಸಂವಿಧಾನದ ಶಿಲ್ಪಿಯಾಗಿ ದೇಶದ ಇತಿಹಾಸದಲ್ಲಿ ಅಜರಾಮರರಾಗಿದ್ದಾರೆ. ಸಮಾನತೆ, ಸಾಮಾಜಿಕ ನ್ಯಾಯ ಮತ್ತು ಮಾನವೀಯ ಮೌಲ್ಯಗಳನ್ನು ಪ್ರತಿಪಾದಿಸಿದ ಅವರ ಆದರ್ಶಗಳು ಇಂದಿನ ಯುವಜನತೆಗೆ ಸ್ಫೂರ್ತಿದಾಯಕವಾಗಿವೆ ಎಂದು ಹೇಳಿದರು.

ಅಂಬೇಡ್ಕರ್ ಅವರು ದಿನಕ್ಕೆ ಸುಮಾರು 18 ಗಂಟೆಗಳ ಕಾಲ ಅಧ್ಯಯನ ಮಾಡುತ್ತಿದ್ದರು. ಓದುವ ಹವ್ಯಾಸವೇ ಅವರನ್ನು ವಿಶ್ವಮಟ್ಟದ ಚಿಂತಕರನ್ನಾಗಿ ರೂಪಿಸಿತು. ಪ್ರತಿಯೊಬ್ಬ ವಿದ್ಯಾರ್ಥಿಯೂ ಪುಸ್ತಕ ಓದುವ ಅಭ್ಯಾಸ ಬೆಳೆಸಿಕೊಂಡು ಜ್ಞಾನವನ್ನು ಸಂಪಾದಿಸಬೇಕು. ಅಂಬೇಡ್ಕರ್ ಅವರ ಜೀವನವನ್ನು ಆದರ್ಶವಾಗಿಸಿಕೊಂಡು ಶಿಕ್ಷಣದ ಮೂಲಕ ಸಮಾಜದಲ್ಲಿ ಉತ್ತಮ ಸ್ಥಾನವನ್ನು ಗಳಿಸಲು ಪ್ರಯತ್ನಿಸಬೇಕು ಎಂದು ಸಲಹೆ ನೀಡಿದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಇಂತಹ ಜ್ಞಾನವರ್ಧಕ ಕಾರ್ಯಕ್ರಮಗಳನ್ನು ಆಯೋಜಿಸುತ್ತಿರುವುದು ವಿದ್ಯಾರ್ಥಿಗಳಲ್ಲಿ ಓದುವ ಸಂಸ್ಕೃತಿ ಬೆಳೆಸುವ ಜೊತೆಗೆ ಸಂವಿಧಾನ, ಸಮಾಜ ಮತ್ತು ರಾಷ್ಟ್ರದ ಬಗ್ಗೆ ಅರಿವು ಮೂಡಿಸಲು ಸಹಕಾರಿಯಾಗಿದೆ ಎಂದು ಅವರು ಅಭಿಪ್ರಾಯಪಟ್ಟರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಸರ್ಕಾರಿ (ಮಾ.ಪು.) ಪದವಿ ಪೂರ್ವ ಸಂಯುಕ್ತ ಕಾಲೇಜಿನ ಪ್ರಾಚಾರ್ಯ ಸುಂಕಪ್ಪ ಕೆ. ಮಾತನಾಡಿ, ಸಂವಿಧಾನವನ್ನು ಅರ್ಥಮಾಡಿಕೊಂಡಾಗ ಮಾತ್ರ ವ್ಯಕ್ತಿ ತನ್ನ ಹಕ್ಕು ಮತ್ತು ಕರ್ತವ್ಯಗಳನ್ನು ಸಮರ್ಪಕವಾಗಿ ತಿಳಿದುಕೊಳ್ಳಲು ಸಾಧ್ಯವಾಗುತ್ತದೆ. ಡಾ. ಅಂಬೇಡ್ಕರ್ ಅವರ ಜೀವನ ಮತ್ತು ಸಾಧನೆಗಳನ್ನು ವಿದ್ಯಾರ್ಥಿಗಳಿಗೆ ಪರಿಚಯಿಸುವ ಇಂತಹ ಕಾರ್ಯಕ್ರಮಗಳು ಅವರಲ್ಲಿ ಆತ್ಮಸ್ಥೈರ್ಯ, ಆತ್ಮವಿಶ್ವಾಸ ಹಾಗೂ ಓದುವ ಆಸಕ್ತಿಯನ್ನು ಹೆಚ್ಚಿಸುತ್ತವೆ ಎಂದು ಹೇಳಿದರು. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಬದುಕುವ ಪ್ರತಿಯೊಬ್ಬ ನಾಗರಿಕನಲ್ಲೂ ಪ್ರಶ್ನಿಸುವ ಮನೋಭಾವ ಇರಬೇಕು. ಸಮಾಜದಲ್ಲಿನ ಬಡತನ ಮತ್ತು ಹಿಂದುಳಿದ ಸ್ಥಿತಿಗೆ ಮೂಢನಂಬಿಕೆಗಳೂ ಒಂದು ಪ್ರಮುಖ ಕಾರಣವಾಗಿದ್ದು, ವೈಜ್ಞಾನಿಕ ಮನೋಭಾವ ಮತ್ತು ಶಿಕ್ಷಣದಿಂದ ಮಾತ್ರ ಸಮಾಜದಲ್ಲಿ ಬದಲಾವಣೆ ಸಾಧ್ಯ ಎಂದು ಅವರು ತಿಳಿಸಿದರು.

ಒಳ್ಳೆಯ ಪುಸ್ತಕವು ಉತ್ತಮ ಸ್ನೇಹಿತನ ಸಮಾನ. ಆದ್ದರಿಂದ ವಿದ್ಯಾರ್ಥಿಗಳು ಪಠ್ಯಪುಸ್ತಕಗಳ ಜೊತೆಗೆ ಜೀವನ ಮೌಲ್ಯಗಳನ್ನು ತಿಳಿಸುವ ಪುಸ್ತಕಗಳನ್ನು ಓದುವ ಅಭ್ಯಾಸ ರೂಢಿಸಿಕೊಳ್ಳಬೇಕು ಎಂದು ಅವರು ಕರೆ ನೀಡಿದರು.

ಇದೇ ಸಂದರ್ಭದಲ್ಲಿ ಡಾ. ಬಿ.ಆರ್. ಅಂಬೇಡ್ಕರ್ ಅವರ ಜೀವನ ಮತ್ತು ಸಾಧನೆಗಳ ಕುರಿತು ಆಯೋಜಿಸಿದ್ದ ಪ್ರಬಂಧ ಸ್ಪರ್ಧೆಯಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಬಿ. ನಾಗರಾಜ ಅವರು ಪುಸ್ತಕ ರೂಪದಲ್ಲಿ ಬಹುಮಾನ ವಿತರಿಸಿ ಅಭಿನಂದಿಸಿದರು.

ಕಾರ್ಯಕ್ರಮದಲ್ಲಿ ಕಾಲೇಜಿನ ರಾಜ್ಯಶಾಸ್ತ್ರ ವಿಭಾಗದ ಉಪನ್ಯಾಸಕರು, ಬಳ್ಳಾರಿ ಮಕ್ಕಳ ರಕ್ಷಣಾ ಘಟಕದ ಸಿಬ್ಬಂದಿ ಹೊನ್ನೂರಪ್ಪ ಪಿ.ಒ., ಬೋಧಕ ಮತ್ತು ಬೋಧಕೇತರ ಸಿಬ್ಬಂದಿ, ವಿದ್ಯಾರ್ಥಿಗಳು ಹಾಗೂ ಗಣ್ಯರು ಭಾಗವಹಿಸಿದ್ದರು.

# ಭೀಮಾಗೆ 65 ಸಾವಿರ ಕ್ಯೂಸೆಕ್ ನೀರು



• ಮಲ್ಲಮ್ಮ ನುಡಿ ವಾರ್ತೆ ಇಂಡಿ

ತಾಲೂಕಿನಲ್ಲಿ ಹರಿಯುವ ಭೀಮಾ ನದಿಗೆ ವೀರಭಟಕರ ಜಲಾಶಯದಿಂದ 40 ಸಾವಿರ ಕ್ಯೂಸೆಕ್ ನೀರು ಮತ್ತು ಉಜನಿ ಜಲಾಶಯದಿಂದ 25 ಕ್ಯೂಸೆಕ್ ನೀರು ಹರಿಯ ಬಿಡಲಾಗಿದೆ ಎಂದು ಕಂದಾಯ ಉಪವಿಬಾಗಾಧಿಕಾರಿ ಚಿದಾನಂದ ಗುರುಸ್ವಾಮಿ ತಿಳಿಸಿದ್ದಾರೆ. ಮಹಾರಾಷ್ಟ್ರದ ವೀರಭಟಕರ ಜಲಾಶಯ ಮತ್ತು ಭೀಮಾ ನದಿಯ ಪಾತ್ರದಲ್ಲಿ ಮಳೆಯು ಹೆಚ್ಚಾಗುತ್ತಿದ್ದು ಜಲಾಶಯ ಪೂರ್ತಿಯಾಗಿರುವ ಹಿನ್ನೆಲೆಯಲ್ಲಿ ನೀರನ್ನು ಹರಿಯ ಬಿಡಲಾಗಿದೆ.

ನೀರಾ ನದಿಯ ವೀರಭಟಕರ ಜಲಾಶಯದಿಂದ ಮತ್ತು ಭೀಮಾ ನದಿಯ ಉಜನಿ ಜಲಾಶಯದಿಂದ ಮಳೆಯಿಂದ ಹೆಚ್ಚಾದ ನೀರನ್ನು ಮಹಾರಾಷ್ಟ್ರದ ಪಂಡರಪೂರ ಹತ್ತಿರದ ಸಂಗಮದಲ್ಲಿ ಸೇರಿ ಅಲ್ಲಿಂದ ಪಂಡರಪೂರ ಮಾರ್ಗವಾಗಿ ಕರ್ನಾಟಕದಲ್ಲಿರುವ ನದಿ ಪಾತ್ರಕ್ಕೆ ನದಿಯ ಮೂಲಕ ಕರ್ನಾಟಕದಲ್ಲಿ ಹರಿಯುವ ಭೀಮಾ ನದಿಗೆ ಬಿಟ್ಟಿದ್ದು ಸಾರ್ವಜನಿಕರು ಎಚ್ಚರಿಕೆಯಿಂದ ಇರಲು ಕೋರಿದ್ದಾರೆ.

ಬಹುತೇಕ ಇಂಡಿ ತಾಲೂಕಿನ ಎಲ್ಲ ಗ್ರಾಮಗಳಲ್ಲಿ ಭೀಮೆಯಲ್ಲಿ ನೀರು ಹರಿಯುತ್ತಿದೆ. ಎಂದು ಗುರುಸ್ವಾಮಿಯವರು ತಿಳಿದಿದ್ದಾರೆ.

ಈ ಮಧ್ಯೆ ತಹಸೀಲ್ದಾರ ನಾಂಗೇಂದ್ರ ಕೋಳಶೆಟ್ಟಿಯವರು ಮತ್ತು ತಾ.ಪಂ ಇಒ ಮಹಾದೇವಪ್ಪ ಏವೂರ ಪ್ರತಿ ಗ್ರಾ.ಪಂ ದವರಿಗೆ ಗ್ರಾಮದಲ್ಲಿ ಡಂಗುರ ಸಾರಲು ತಿಳಿಸಿದ್ದು ನದಿ ತೀರದ ಪ್ರತಿ ಗ್ರಾಮಕ್ಕೂ ಭೇಟಿ ನೀಡಿ ನದಿ ಪಾತ್ರದ ಜನರು ಎಚ್ಚರಿಕೆಯಿಂದ ಇರಲು ಸಲಹೆ ನೀಡುತ್ತಿದ್ದಾರೆ.

# ಜು. 31 ರಂದು ನಿಂಬೆ ರಫ್ತು ಕಾರ್ಯಾಗಾರ

• ಮಲ್ಲಮ್ಮ ನುಡಿ ವಾರ್ತೆ ಇಂಡಿ

ಕೃಷಿ ವಿಜ್ಞಾನಕೇಂದ್ರ, ಇಂಡಿ ಕೆಎಇಪಿಇಸಿ ಕರ್ನಾಟಕರಾಜ್ಯಕೃಷಿ ಉತ್ಪನ್ನಗಳ ಸಂಸ್ಕರಣೆ ಹಾಗೂ ರಫ್ತು ನಿಗಮ ನಿಯಮಿತ ಬೆಂಗಳೂರು ಇವರ ಸಹಯೋಗದೊಂದಿಗೆ ನಿಂಬೆ ರಫ್ತು ಪ್ರಕ್ರಿಯೆ ಕುರಿತು ಅರಿವು ಮೂಡಿಸುವ ಕಾರ್ಯಾಗಾರ" ಜುಲೈ 31 ರಂದು ಹಮ್ಮಿಕೊಳ್ಳಲಾಗುವುದು. ಭಾಗವಹಿಸಲು ಆಸಕ್ತರಿರುವ ನಿಂಬೆ ಬೆಳೆಗಾರರು, ರೈತರು, ರೈತರ ಮಹಿಳೆಯರು, ಯುವಕೃಷಿಕರು, ನಿಂಬೆ ಉದ್ಯಮೆದಾರರು, ಎಫ್.ಪಿ.ಓ. ಗಳು ಅಥವಾ ಆಸಕ್ತ ಸಾರ್ವಜನಿಕರು ಜುಲೈ 29 ರ ಒಳಗಾಗಿ ತಮ್ಮ ಆಧಾರಕಾರ್ಡ ಸಂಖ್ಯೆ ಮತ್ತು ಪಹಣಿ/ಉತಾರ ಸಂಖ್ಯೆಗಳೊಂದಿಗೆ ಕೃಷಿ ವಿಜ್ಞಾನಕೇಂದ್ರ, ಇಂಡಿಯ ಕಛೇರಿಯಲ್ಲಿ ಸಲ್ಲಿಸಿ ತಮ್ಮ ಹೆಸರನ್ನು ನೋಂದಾಯಿಸಿಕೊಳ್ಳಲು ಈ ಮೂಲಕ ಕೋರಲಾಗಿದೆ.

ಈ ಕಾರ್ಯಾಗಾರಕ್ಕೆ 100 ಅಭ್ಯರ್ಥಿಗಳಿಗೆ ಅವಕಾಶವಿದ್ದು, ಮೊದಲು ನೋಂದಣಿ ಮಾಡಿಕೊಂಡವರಿಗೆ ಆದ್ಯತೆ ನೀಡಲಾಗುವುದು.

ಹೆಚ್ಚಿನ ಮಾಹಿತಿಗಾಗಿ ಡಾ. ಪ್ರೇಮ್‌ಚಂದ್ ಯು ವಿಜ್ಞಾನಿ 9620434248, ಡಾ. ವೀಣಾ ಚಂದಾವರಿ ವಿಜ್ಞಾನಿ 8073042631 ರವರನ್ನು ಸಂಪರ್ಕಿಸಲು ಕೃಷಿ ವಿಜ್ಞಾನಕೇಂದ್ರ, ಇಂಡಿಯ ಹಿರಿಯ ವಿಜ್ಞಾನಿ ಹಾಗೂ ಮುಖ್ಯಸ್ಥರಾದ ಡಾ. ಶಿವಶಂಕರಮೂರ್ತಿ ಎಂ. ಇವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಬಳ್ಳಾರಿ ನಗರಾಭಿವೃದ್ಧಿ ಪ್ರಾಧಿಕಾರ: ನಾಗರೀಕ ಸೌಲಭ್ಯ ನಿವೇಶನಗಳಿಗೆ ಅರ್ಜಿ ಆಹ್ವಾನ

• ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ

ಬಳ್ಳಾರಿ ನಗರಾಭಿವೃದ್ಧಿ ಪ್ರಾಧಿಕಾರದ ಒಡೆತನದಲ್ಲಿರುವ ನಾಗರೀಕ ಸೌಲಭ್ಯ ನಿವೇಶನಗಳನ್ನು ಕೇಂದ್ರ ಅಥವಾ ರಾಜ್ಯ ಸರ್ಕಾರಿ ಕಚೇರಿಗಳಿಗೆ ಹಾಗೂ ಸಂಘ ಸಂಸ್ಥೆಗಳಿಗೆ 30 ವರ್ಷಗಳ ಗುತ್ತಿಗೆ ಆಧಾರದಲ್ಲಿ ನೀಡಲು, ಒಟ್ಟು 157 ನಾಗರೀಕ ಸೌಲಭ್ಯ ನಿವೇಶನಗಳ ಪಟ್ಟಿಯಲ್ಲಿನ ಶೇಕಡ 18% ಪರಿಶಿಷ್ಟ ಜಾತಿ ಹಾಗೂ ಶೇಕಡ 7% ಪರಿಶಿಷ್ಟ ಪಂಗಡದ ಸಂಘ ಸಂಸ್ಥೆಗಳಿಗೆ ಮೀಸಲಿರಿಸಿ ಉಳಿದ 75 ಶೇ. ಸಾಮಾನ್ಯ ಸಂಘ ಸಂಸ್ಥೆಗಳಿಗೆ ಮೀಸಲಿರಿಸಲಾಗಿದೆ.

156 ನಾಗರೀಕ ಸೌಲಭ್ಯ ನಿವೇಶನಗಳ ಪೈಕಿ ಇಲ್ಲಿಯವರಿಗೆ ಯಾವುದೇ ಅರ್ಜಿಗಳು ಬಂದಿರುವುದಿಲ್ಲ. ಹಾಗಾಗಿ ಕೇಂದ್ರ ಅಥವಾ ರಾಜ್ಯ ಸರ್ಕಾರಿ ಕಚೇರಿಗಳು ಹಾಗೂ ಸಂಘ ಸಂಸ್ಥೆಯವರು 30 ದಿನಗಳೊಳಗಾಗಿ ಪ್ರಾಧಿಕಾರಕ್ಕೆ ಅರ್ಜಿ ಸಲ್ಲಿಸಲು ಅವಕಾಶ ಕಲ್ಪಿಸಿದ್ದು, ಆಸಕ್ತಿಯುಳ್ಳ ಸಂಘ, ಸಂಸ್ಥೆಯವರು ಅರ್ಜಿ ಶುಲ್ಕವನ್ನು ಪ್ರಾಧಿಕಾರಕ್ಕೆ ಪಾವತಿಸಿ ಕಚೇಊಟಜಜಜಿಟಜಜೇರಿಯಿಂದ ಅರ್ಜಿ ನಮೂನೆಯನ್ನು ಪಡೆದು, ಭರ್ತಿ ಮಾಡಿ ಪ್ರಾಧಿಕಾರಕ್ಕೆ ಸಲ್ಲಿಸಬಹುದಾಗಿದೆ.

ವಿಶೇಷ ಸೂಚನೆ:–

ಅರ್ಜಿ ಸಲ್ಲಿಸಲು ಆಗಸ್ಟ್ 26 ಕೊನೆಯ ದಿನವಾಗಿದ್ದು, ಅವಧಿ ಮೀರಿ ಬರುವ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ.

ಒಂದೇ ನಾಗರೀಕ ಸೌಲಭ್ಯ ನಿವೇಶನಕ್ಕೆ ಕೇಂದ್ರ ಅಥವಾ ರಾಜ್ಯ ಸರ್ಕಾರಿ ಕಚೇರಿ ಮತ್ತು ಸಂಘ, ಸಂಸ್ಥೆಯವರು ಅರ್ಜಿ ಸಲ್ಲಿಸಿದ್ದಲ್ಲಿ ಪ್ರಥಮ ಆದ್ಯತೆ ನೀಡಲಾಗುವುದು.

ನಾಗರೀಕ ಸೌಲಭ್ಯ ನಿವೇಶನದ ಮೊತ್ತ, ಅರ್ಜಿಯ ಶುಲ್ಕ, ನೋಂದಾಣಿ ಶುಲ್ಕ ಹಾಗೂ 18% ಜಿ.ಎಸ್.ಟಿ. ಮೊತ್ತವನ್ನು ಡಿ.ಡಿ.ಮುಖಾಂತರ ಬಳ್ಳಾರಿ ನಗರಾಭಿವೃದ್ಧಿ ಪ್ರಾಧಿಕಾರ ಆಯುಕ್ತರ ಹೆಸರಿಗೆ ಪಾವತಿ ಮಾಡಿ ಪ್ರಾಧಿಕಾರಕ್ಕೆ ಸಲ್ಲಿಸಬಹುದಾಗಿದೆ. ಎಂದು ಬಳ್ಳಾರಿ ನಗರಾಭಿವೃದ್ಧಿ ಪ್ರಾಧಿಕಾರ ಆಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಹೆಚ್ಚಿನ ಮಾಹಿತಿಗಾಗಿ ನಾಗರೀಕ ಸೌಲಭ್ಯ ನಿವೇಶನ ಶಾಖೆಯ ಕಂದಾಯ ಪರಿವೀಕ್ಷಕರ ಕಚೇರಿಗೆ ಭೇಟಿ ನೀಡಿ ಅಥವಾ ದೂ.08392273731 ಗೆ ಕರೆ ಮಾಡಿ ಮಾಹಿತಿಯನ್ನು ಪಡೆಯಬಹುದಾಗಿದೆ ಬಳ್ಳಾರಿ ನಗರಾಭಿವೃದ್ಧಿ ಪ್ರಾಧಿಕಾರ ಆಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಮುಂಗಾರು ಹಂಗಾಮಿನ ಬೆಳೆ ವಿಮೆ ನೋಂದಣಿಗೆ ಅರ್ಜಿ ಆಹ್ವಾನ

• ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ

ಪ್ರಸ್ತಕ ಸಾಲಿನ ಮುಂಗಾರು ಹಂಗಾಮಿನ 'ಕರ್ನಾಟಕ ರೈತ ಸುರಕ್ಷಾ ಪ್ರಧಾನ ಮಂತ್ರಿ ಫಸಲ್ ಬೀಮಾ' ಯೋಜನೆಯಡಿ ಬೆಳೆ ವಿಮೆ ನೋಂದಣಿ ಪ್ರಕ್ರಿಯೆ ಆರಂಭವಾಗಿದ್ದು, ಜಿಲ್ಲೆಯ ರೈತರು ಇದರ ಸದುಪಯೋಗ ಪಡೆದುಕೊಳ್ಳುವಂತೆ ಜಂಟಿ ಕೃಷಿ ನಿರ್ದೇಶಕರು ಕೋರಿದ್ದಾರೆ.

ಬೆಳೆ ಸಾಲ ಪಡೆದ ಹಾಗೂ ಪಡೆಯದ ರೈತರು ತಮ್ಮ ಬೆಳೆಗಳಿಗೆ ಬ್ಯಾಂಕುಗಳು ಅಥವಾ ಸಾರ್ವಜನಿಕ ಸೇವಾ ಕೇಂದ್ರಗಳ ಮೂಲಕ ವಿಮೆ ಮಾಡಿಸಬಹುದಾಗಿದೆ.

*ವಿಮೆಗೊಳಪಡುವ ಪ್ರಮುಖ ಬೆಳೆಗಳು:*

ಗ್ರಾಮ ಪಂಚಾಯಿತಿ ಮಟ್ಟದ ಬೆಳೆಗಳು: ಭತ್ತ (ನೀರಾವರಿ), ಮುಸುಕಿನ ಜೋಳ (ನೀರಾವರಿ/ಮಳೆಯಾಶ್ರಿತ).ಹೋಬಳಿ ಮಟ್ಟದ ಬೆಳೆಗಳು: ಜೋಳ, ರಾಗಿ, ಸಜ್ಜೆ, ಸೂರ್ಯಕಾಂತಿ, ಹತ್ತಿ, ನೆಲಗಡಲೆ, ಈರುಳ್ಳಿ (ನೀರಾವರಿ/ಮಳೆಯಾಶ್ರಿತ), ನವಣೆ, ಹೆಸರು, ಉರುಳಿ (ಮಳೆಯಾಶ್ರಿತ), ತೊಗರಿ (ನೀರಾವರಿ/ಮಳೆಯಾಶ್ರಿತ), ಟೊಮ್ಯಾಟೊ ಹಾಗೂ ಕೆಂಪು ಮೆಣಸಿನಕಾಯಿ (ನೀರಾವರಿ).

*ಬೆಳೆ ವಿಮೆ ಪಾವತಿಸಲು ಕೊನೆಯ ದಿನಾಂಕಗಳು:*

ಮುಸುಕಿನ ಜೋಳ (ನೀ/ಮ), ಜೋಳ (ನೀ/ಮ), ಕೆಂಪು ಮೆಣಸಿನಕಾಯಿ(ನಿ), ಸೂರ್ಯಕಾಂತಿ (ನೀ/ಮ), ತೊಗರಿ (ನೀರಾವರಿ), ಹತ್ತಿ (ನೀ/ಮ), ಈರುಳ್ಳಿ (ನೀ/ಮ): ಜುಲೈ 31.

ಭತ್ತ (ನೀರಾವರಿ), ತೊಗರಿ (ಮಳೆಯಾಶ್ರಿತ), ರಾಗಿ (ನೀ/ಮ), ನವಣೆ (ಮ), ಹುರುಳಿ (ಮ), ನೆಲಗಡಲೆ (ನೀ/ಮ), ಸಜ್ಜೆ (ಮ): ಆಗಸ್ಟ್ 14.

*ಸಾಲ ಪಡೆಯದ ರೈತರಿಗೆ ಸ್ವಯಂ ದೃಢೀಕರಣ ಕಡ್ಡಾಯ:*

ಬೆಳೆ ಸಾಲ ಪಡೆಯದ ರೈತರು ತಾವು ಯಾವುದೇ ಬ್ಯಾಂಕ್‌ನಲ್ಲಿ ಬೆಳೆ ಸಾಲ ಪಡೆದಿಲ್ಲ ಎಂಬುದರ ಕುರಿತು 'ಸ್ವಯಂ ದೃಢೀಕರಣ ಪತ್ರ' ನೀಡುವುದನ್ನು ಈ ವರ್ಷದಿಂದ ಕಡ್ಡಾಯಗೊಳಿಸಲಾಗಿದೆ. ವಿಮೆ ನೋಂದಣಿ ಸಂದರ್ಭದಲ್ಲಿ ರೈತರು ಈ ಪತ್ರವನ್ನು ಸಲ್ಲಿಸಬೇಕಾಗುತ್ತದೆ.


ಹೆಚ್ಚಿನ ಮಾಹಿತಿಗಾಗಿ ರೈತರು ತಮ್ಮ ಹತ್ತಿರದ ರೈತ ಸಂಪರ್ಕ ಕೇಂದ್ರ, ಸಹಾಯಕ ಕೃಷಿ ನಿರ್ದೇಶಕರ ಕಚೇರಿ ಅಥವಾ ಸರ್ಕಾರದ ಅಧಿಕೃತ ಸಂರಕ್ಷಣೆ ಪೋರ್ಟಲ್ (https://www.samrakshane.karnataka.gov.in) ಲಿಂಕ್ ಮೂಲಕ ಮಾಹಿತಿ ಪಡೆಯಬಹುದು ಎಂದು ಜಂಟಿ ಕೃಷಿ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.


# ಬ್ರಾಹ್ಮಣ ಅಭಿವೃದ್ಧಿ ಮಂಡಳಿ: ಸಾಲ ಸೌಲಭ್ಯಕ್ಕೆ ಅರ್ಜಿ ಆಹ್ವಾನ

• ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ

ಕರ್ನಾಟಕ ರಾಜ್ಯ ಬ್ರಾಹ್ಮಣ ಅಭಿವೃದ್ಧಿ ನಿಗಮದ ವತಿಯಿಂದ 2026–27ನೇ ಸಾಲಿನ ವಿವಿಧ ಯೋಜನೆಗಳಡಿ ಸಾಲ–ಸೌಲಭ್ಯಗಳಿಗಾಗಿ ಬ್ರಾಹ್ಮಣ ಸಮುದಾಯ ಜನಾಂಗದ ಅರ್ಹರಿಂದ ಅರ್ಜಿ ಆಹ್ವಾನಿಸಲಾಗಿದೆ.ಗುಡಿ ಕೈಗಾರಿಕೆ, ಸಣ್ಣ ಕೈಗಾರಿಕೆ, ಹೋಟೆಲ್ ಉದ್ಯಮ, ಅಂಗಡಿ, ಟೈಲರಿಂಗ್, ಟ್ಯಾಕ್ಸಿ ಹಾಗೂ ಹಸು ಸಾಕಾಣಿಕೆಯಂತಹ ಸ್ವಯಂ ಉದ್ಯೋಗ ಕೈಗೊಳ್ಳಲು ಕನಿಷ್ಠ ರೂ.1.00ಲಕ್ಷ ಹಾಗೂ ಗರಿಷ್ಠ ರೂ.2 ಲಕ್ಷಗಳ ವರೆಗೆ ಆರ್ಥಿಕ ಸಾಲವನ್ನು ನೀಡಲಾಗುತ್ತದೆ.ಕಿರು ಆರ್ಥಿಕ ಚಟುವಟಿಕೆಗಳನ್ನು ಕೈಗೊಳ್ಳಲು ಘಟಕವೆಚ್ಚ ರೂ.1ಲಕ್ಷ ಇದರಲ್ಲಿ ರೂ.20,000 ಸಹಾಯಧನ ಮತ್ತುಸಾಲ ರೂ.80,000, ಸಾಲ ಮರು ಪಾವತಿ 34 ಕಂತುಗಳಲಿ )ದೊಡ್ಡ ಪ್ರಮಾಣದ ಆರ್ಥಿಕ ಚಟುವಟಿಕೆಗಳನ್ನು ಕೈಗೊಳ್ಳಲು ಘಟಕವೆಚ್ಚ ರೂ.2 ಲಕ್ಷ ಇದರಲ್ಲಿ ರೂ.40,000 ಸಹಾಯಧನ ಮತ್ತು ಸಾಲ ರೂ.160,000, ಸಾಲ ಮರು ಪಾವತಿ 34 ಕಂತುಗಳಲ್ಲಿ) ಅರ್ಹತೆಗಳು:ಅರ್ಜಿದಾರರು ಕರ್ನಾಟಕ ರಾಜ್ಯದ ಖಾಯಂ ನಿವಾಸಿಯಾಗಿರಬೇಕು. ಬ್ರಾಹ್ಮಣ ಸಮುದಾಯದ ಸಾಮಾನ್ಯ ವರ್ಗಕ್ಕೆ ಸೇರಿದ ಅರ್ಜಿದಾರರು ಚಾಲ್ತಿಯಲ್ಲಿರುವ ಆರ್ಥಿಕವಾಗಿ ಹಿಂದುಳಿದ ಪ್ರಮಾಣಪತ್ರ ಹೊಂದಿರಬೇಕು. ಅರ್ಜಿದಾರರ ವಯಸ್ಸು 18 ರಿಂದ 65 ವರ್ಷದ ಒಳಗಿನವರಾಗಿರಬೇಕು. ಒಂದು ಕುಟುಂಬದಿಂದ ಒಬ್ಬರು ಮಾತ್ರ ಅರ್ಜಿ ಸಲ್ಲಿಸಬಹುದು. ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಲು ಅವಕಾಶವಿರುವುದಿಲ್ಲ.ಸಾಲದ ಉದ್ದೇಶವನ್ನು 10 ಪದಗಳಿಗಿಂತ ಕಡಿಮೆ ಇಲ್ಲದಂತೆ, ಸ್ಪಷ್ಟವಾಗಿ ಆನ್‌ಲೈನ್ ಅರ್ಜಿಯಲ್ಲಿ ನಮೂದಿಸಬೇಕು. ಇಲ್ಲವಾದಲ್ಲಿ ಅರ್ಜಿಯನ್ನು ತಿರಸ್ಕರಿಸಲಾಗುವುದು. ಅರ್ಜಿದಾರರ ಆಧಾರ್ ಗೆ ಮೊಬೈಲ್ ಸಂಖ್ಯೆ ಲಿಂಕ್ ಆಗಿರಬೇಕು ಮತ್ತು ಬ್ಯಾಂಕ್ ಖಾತೆ ಎನ್‌ಪಿಸಿಐ ರಡಿ ಸೀಡ್ ಆಗಿರಬೇಕು.ಅರ್ಜಿ ಸಲ್ಲಿಸಲು ವೆಬ್‌ಸೈಟ್‌ಗೆ ಭೇಟಿ ನೀಡಿ https://ksbdb.karnataka.gov.in ಆಗಸ್ಟ್ 31 ರೊಳಗೆ ಅರ್ಜಿ ಸಲ್ಲಿಸಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ಕೌಶಲ್ಯಾಭಿವೃದ್ಧಿ ಕಚೇರಿ ಸಂಖ್ಯೆ 17, ಹೊಸ ಡಿಸಿ ಆಫೀಸ್, ಸಿ ಬ್ಲಾಕ್, ಬಳ್ಳಾರಿ ರವರನ್ನು ಸಂಪರ್ಕಿಸಿ ಅಥವಾ ಬಳ್ಳಾರಿ ದೂ.08392–294230, ಮೊ. 8762249230, ಹೊಸಪೇಟೆ ಕಚೇರಿ ದೂ.08392–294230 ಗೆ ಕರೆ ಮಾಡಿ ಮಾಹಿತಿ ಪಡೆಯಬಹುದಾಗಿದೆ ಎಂದು ಜಿಲ್ಲಾ ಕೌಶಲ್ಯಾಭಿವೃದ್ಧಿ ಅಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಇಂದು ಭಾಲ್ಕಿ ಶ್ರೀಮಠದಲ್ಲಿ ಗುರುಪೂರ್ಣಿಮೆ ಉತ್ಸವ





• ಮಲ್ಲಮ್ಮ ನುಡಿ ವಾರ್ತೆ ಭಾಲ್ಕಿ

ಇಲ್ಲಿಯ ಹಿರೇಮಠ ಸಂಸ್ಥಾನದಲ್ಲಿ ಬುಧವಾರ ಬಸವಕಲ್ಯಾಣ ಅನುಭವ ಮಂಟಪದ ಅಧ್ಯಕ್ಷ ನಾಡೋಜ ಡಾ.ಬಸವಲಿಂಗ ಪಟ್ಟದ್ದೇವರು, ಹಿರೇಮಠ ಸಂಸ್ಥಾನದ ಪೀಠಾಧಿಪತಿ ಗುರುಬಸವ ಪಟ್ಟದ್ದೇವರ ದಿವ್ಯ ಸಾನ್ನಿಧ್ಯದಲ್ಲಿ ಗುರುಪೂರ್ಣಿಮೆ ಉತ್ಸವ ಶ್ರದ್ಧೆ, ಭಕ್ತಿಯಿಂದ ನೆರವೇರಲಿದೆ. ಪರಮ ಪೂಜ್ಯರ ದರುಶನಕ್ಕೆ ಪ್ರತಿವರ್ಷದಂತೆ ಈ ಬಾರಿಯು ಕರ್ನಾಟಕ ಅಷ್ಟೇ ಅಲ್ಲದೆ, ಮಹಾರಾಷ್ಟ್ರ, ತೆಲಂಗಾಣದ ಸದ್ಭಕ್ತರು ಸಾವಿರಾರೂ ಸಂಖ್ಯೆಯಲ್ಲಿ ಆಗಮಿಸುವ ನಿರೀಕ್ಷೆಯಿದೆ. ಕಾರ್ಯಕ್ರಮದ ವಿವರ :

ಬೆಳಿಗ್ಗೆ 7 ಗಂಟೆಗೆ ಷಟ್‌ಸ್ಥಲ ಧ್ವಜಾರೋಹಣದ ಮೂಲಕ ಗುರುಪೂರ್ಣಿಮೆ ಉತ್ಸವಕ್ಕೆ ಚಾಲನೆ ಸಿಗಲಿದೆ. ನಂತರ ಬೆಳಿಗ್ಗೆ 8 ಗಂಟೆಗೆ ಪರಮ ಪೂಜ್ಯರ ಪೂಜೆ–ಪಾದೋದಕ–ಪ್ರಸಾದ ಸೇರಿ ವಿವಿಧ ಧಾರ್ಮಿಕ ಕಾರ್ಯಕ್ರಮಗಳು ಜರುಗಲಿವೆ. ಬಳಿಕ ಬೆಳಿಗ್ಗೆ 10 ಗಂಟೆಗೆ ಇಷ್ಟಲಿಂಗ ದೀಕ್ಷೆ ನಡೆಯಲಿದೆ. ಬೆಳಿಗ್ಗೆ 11 ಗಂಟೆಗೆ ಬಸವಗುರುಪೂಜೆ ಹಾಗೂ ಪ್ರಾರ್ಥನೆ ಬೆಳಿಗ್ಗೆ 11–15 ಗಂಟೆಗೆ ಗುರುಕರಣ ತ್ರಿವಿಧಿ ಪಠಣ ಹಾಗೂ ಬೆಳಿಗ್ಗೆ 11–30 ಗಂಟೆಗೆ ಪೂಜ್ಯರ ಆಶೀರ್ವಚನ ಹಾಗೂ ಗುರುದರ್ಶನ ನೆರವೇರುವುದು. ಮಧ್ಯಾಹ್ನ 1 ಗಂಟೆಗೆ ಮಹಾಪ್ರಸಾದ ನೆರವೇರಲಿದ್ದು, ಎಲ್ಲ ಬಸವ ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ, ಪೂಜ್ಯರ ದರುಶನ ಪಡೆಯಬೇಕು ಎಂದು ಹಿರೇಮಠದ ಕಾರ್ಯದರ್ಶಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಆಗಸ್ಟ್ 5 ವ್ಯಸನ ಮುಕ್ತ ದಿನಾಚರಣೆ



**ಬಾಗಲಕೋಟೆ:** ಇಳಕಲ್ ಡಾ.ಮಹಾಂತ ಶ್ರೀಗಳ ಜನ್ಮದಿನಾಚರಣೆ ಅಂಗವಾಗಿ ಆಗಸ್ಟ 5ರಂದು ವ್ಯಸನ ಮುಕ್ತ ದಿನಾಚರಣೆಯ ಜಿಲ್ಲಾ ಮಟ್ಟದ ಕಾರ್ಯಕ್ರಮವನ್ನು ಅರ್ಥಪೂರ್ಣವಾಗಿ ಆಚರಿಸಲು ನಿರ್ಧರಿಸಲಾಗಿದೆ ಎಂದು ಜಿಲ್ಲಾಧಿಕಾರಿ ಸಂಗಪ್ಪ ಹೇಳಿದರು.

ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಮಂಗಳವಾರ ವ್ಯಸನ ಮುಕ್ತ ದಿನಾಚರಣೆ ಕಾರ್ಯಕ್ರಮ ಆಚರಣೆ ಕುರಿತ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ರಾಜ್ಯ ಮದ್ಯಪಾನ ಸಂಯಮ ಮಂಡಳಿ, ಜಿಲ್ಲಾಡಳಿತ ಹಾಗೂ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಸಹಯೋಗದಲ್ಲಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗುತ್ತಿದೆ. ಜಿಲ್ಲಾ ಮಟ್ಟದ ಕಾರ್ಯಕ್ರಮವನ್ನು ಆಗಸ್ಟ 5 ರಂದು ಹಮ್ಮಿಕೊಳ್ಳಲಾಗಿದೆ. ತಾಲೂಕಾ ಮಟ್ಟದಲ್ಲಿ ತಹಶೀಲ್ದಾರ ನೇತೃತ್ವದಲ್ಲಿ ಆಗಸ್ಟ 1 ರಂದು ಕಾರ್ಯಕ್ರಮ ಆಯೋಜನೆ ಮಾಡುವಂತೆ ತಿಳಿಸಿದರು.

ಜಿಲ್ಲಾ ಮಟ್ಟದ ಕಾರ್ಯಕ್ರಮವನ್ನು ನವನಗರದ ಸರಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಹಮ್ಮಿಕೊಳ್ಳಲು ನಿರ್ಧರಿಸಲಾಗಿದ್ದು, ಶಿಷ್ಟಾಚಾರದ ಪ್ರಕಾರ ಆಮಂತ್ರಣ ಪತ್ರಿಕೆ ಮುದ್ರಣ, ನಗರದ ಪ್ರಮುಖ ಸ್ಥಳಗಳಲ್ಲಿ ಬ್ಯಾನರ್ ಅಳವಡಿಕೆ, ಕಾರ್ಯಕ್ರಮದ ರೂಪು ರೇಷೆಗಳ ಬಗ್ಗೆ ಚರ್ಚಿಸಲಾಯಿತು. ವ್ಯಸನ ಮುಕ್ತ ದಿನಾಚರಣೆ ಕಾರ್ಯಕ್ರಮ ಕುರಿತು ಉಪನ್ಯಾಸ ನೀಡಲು ಉತ್ತಮ ಉಪನ್ಯಾಸಕರನ್ನು ಕರೆಯಿಸುವಂತೆ ಅಧಿಕಾರಿಗಳಿಗೆ ಡಿಸಿ ತಿಳಿಸಿದರು.

ವ್ಯಸನಮುಕ್ತ ಸಮಾಜ ನಿರ್ಮಾಣಕ್ಕೆ ಎಲ್ಲ ಇಲಾಖೆಗಳು ಸಮನ್ವಯದಿಂದ ಕಾರ್ಯನಿರ್ವಹಿಸಬೇಕು. ಯುವಜನರಲ್ಲಿ ಜಾಗೃತಿ ಮೂಡಿಸುವ ಮೂಲಕ ವ್ಯಸನದಿಂದ ದೂರವಿರುವಂತೆ ಪ್ರೇರೇಪಿಸುವುದು ಕಾರ್ಯಕ್ರಮದ ಮುಖ್ಯ ಉದ್ದೇಶವಾಗಿದೆ. ಆದ್ದರಿಂದ ಕಾಲೇಜು ಹಂತದಲ್ಲಿ ಕಾರ್ಯಕ್ರಮ ಆಯೋಜಿಸಲಾಗುತ್ತಿದ್ದು, ಕಾರ್ಯಕ್ರಮದ ಯಶಸ್ವಿಗೆ ಅಗತ್ಯ ಸಿದ್ದತೆಗಳನ್ನು ಕೈಗೊಳ್ಳುವಂತೆ ವಾರ್ತಾ ಇಲಾಖೆಯ ಅಧಿಕಾರಿಗಳಿಗೆ ತಿಳಿಸಿದರು.

ಸಭೆಯಲ್ಲಿ ಅಪರ ಜಿಲ್ಲಾಧಿಕಾರಿ ಅಶೋಕ ತೇಲಿ, ಶಾಲಾ ಶಿಕ್ಷಣ ಇಲಾಖೆಯ ಉಪ ನಿರ್ದೇಶಕ ಅಜೀತ್ ಮನ್ನಿಕೇರಿ, ಜಿಲ್ಲಾ ಪಂಚಾಯತ ಸಹಾಯಕ ಯೋಜನಾಧಿಕಾರಿ ಭೀಮಪ್ಪ ತಳವಾರ, ಆರೋಗ್ಯ ಇಲಾಖೆಯ ಶಿವನಗೌಡ ಪಾಟೀಲ, ಇಲಕಲ್ಲ ಮಹಾಂತ ಶಿವಯೋಗಿಗಳ ಮಠದ ಪ್ರತಿನಿಧಿಯಾಗಿ ಜಿ.ಎಸ್.ಗೌಡರ ಹಾಗೂ ಇತರೆ ಇಲಾಖೆಯ ಅಧಿಕಾರಿಗಳು ಉಪಸ್ಥಿತರಿದ್ದರು.

## ಮೀನುಗಾರರಿಗೆ ಸಲಕರಣೆ ಕಿಟ್ ವಿತರಿಸಿದ ಶಾಸಕ ಮೇಟಿ



**ಬಾಗಲಕೋಟೆ:** 2025–26ನೇ ಸಾಲಿನ ರಾಜ್ಯ ವಲಯದ ಒಳನಾಡು ಮೀನುಗಾರರಿಗೆ ಮೀನು ಸಲಕರಣೆ ಕಿಟ್ ವಿತರಣೆ ಯೋಜನೆಯಡಿ ಬಾಗಲಕೋಟೆ ವಿಧಾನಸಭಾ ಕ್ಷೇತ್ರದ ಆರು ಜನ ಫಲಾನುಭವಿಗಳಿಗೆ ಶಾಸಕ ಉಮೇಶ ಮೇಟಿ ಮಂಗಳವಾರ ತಮ್ಮ ಕಚೇರಿಯಲ್ಲಿ ಮೀನು ಸಲಕರಣೆ ಕಿಟ್‌ಗಳನ್ನು ವಿತರಿಸಿದರು. ಈ ಸಂದರ್ಭದಲ್ಲಿ ಮಾತನಾಡಿದ ಅವರು, ರಾಜ್ಯ ಸರ್ಕಾರ ಮೀನುಗಾರರ ಆರ್ಥಿಕ ಸಬಲೀಕರಣಕ್ಕಾಗಿ ವಿವಿಧ ಯೋಜನೆಗಳನ್ನು ಜಾರಿಗೊಳಿಸಿದ್ದು, ಅರ್ಹ ಫಲಾನುಭವಿಗಳು ಯೋಜನೆಗಳ ಸೌಲಭ್ಯಗಳನ್ನು ಸದುಪಯೋಗಪಡಿಸಿಕೊಳ್ಳ ಬೇಕು ಎಂದು ಹೇಳಿದರು. ಮೀನುಗಾರಿಕೆ ಕ್ಷೇತ್ರದ ಅಭಿವೃದ್ಧಿಗೆ ಸರ್ಕಾರ ಬದ್ಧವಾಗಿದ್ದು, ಮೀನುಗಾರರ ಜೀವನಮಟ್ಟ ಸುಧಾರಣೆಗೆ ಅಗತ್ಯ ನೆರವು ಹಾಗೂ ಪ್ರೋತ್ಸಾಹವನ್ನು ನೀಡಲಾಗುತ್ತಿದೆ ಎಂದರು. ಯೋಜನೆಯಡಿ ಬೊಮ್ಮಣಗಿ ಗ್ರಾಮದ ಕಸ್ತೂರಿ ರಾಮೋಡಗಿ, ಹಿರೇಗುಳಬಾಳದ ಶೇಖರಪ್ಪ ವಾಲಿಕಾರ, ಹಿರೇಮ್ಯಾಗೇರಿ ಗ್ರಾಮದ ಬಸಪ್ಪ ಮಾದರ, ಕಮತಗಿ ಪಟ್ಟಣದ ಧನಸಿಂಗ್ ರಾಠೋಡ, ಲಕ್ಷ್ಮೀಬಾಯಿ ರಾಠೋಡ ಹಾಗೂ ರಂಗಪ್ಪ ಕವಳಿ ಅವರಿಗೆ ಮೀನು ಸಲಕರಣೆ ಕಿಟ್‌ಗಳನ್ನು ವಿತರಿಸಲಾಯಿತು. ಕಾರ್ಯಕ್ರಮದಲ್ಲಿ ಬಸವಂತಪ್ಪ ಮೇಟಿ, ದ್ಯಾಮಣ್ಣ ಗಾಳಿ,ಅಶೋಕ ಪಟಣ್ಣದ, ಬಸವರಾಜ ಕಟಗೇರಿ, ಜಟ್ಟೆಪ್ಪ ಮಾದಾಪುರ, ಹನಮಂತ ಗಣಿ, ಹಣಮಂತ ಬಳಿಗಾರ, ಬಲರಾಮ ಪವಾರ, ಮೀನುಗಾರಿಕೆ ಇಲಾಖೆ ಅಧಿಕಾರಿಗಳು ಉಪಸ್ಥಿತರಿದ್ದರು.

## ಹಿರಿಯ ಹೋರಾಟಗಾರರ ಸ್ಮರಣೆ ಕಾರ್ಯಕ್ರಮ



**ದಾಂಡೇಲಿ:** ದಾಂಡೇಲಿ ಸಮಗ್ರ ಅಭಿವೃದ್ಧಿ ಹೋರಾಟ ಸಮಿತಿ ಇಂದ ಕಚೇರಿಯಲ್ಲಿ ಅನೇಕ ದಿವಂಗತ ಹೋರಾಟಗಾರರು ಸ್ಮರಣೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು ಇದರೊಂದಿಗೆ ದಾಂಡೇಲಿ ತಾಲೂಕ ಹೋರಾಟದಲ್ಲಿ ಭಾಗವಹಿಸಿ ಸತ್ಯಾಗ್ರಹ ಮಾಡಿದಂತಹ ಹೋರಾಟಗಾರರು ಅವರಲ್ಲಿ ಕೆಲವೊಂದು ಜನ ನಮ್ಮನು ಬಿಟ್ಟು ಅಗಲಿದ್ದಾರೆ. ಅವರುಗಳ ಸ್ಮರಣಕ್ಕೆ ಕಾರ್ಯಕ್ರಮವನ್ನು ಹಮ್ಮಿ ಕೊಳ್ಳಲಾಗಿತ್ತು ಈ ಸಂದರ್ಭದಲ್ಲಿ ಸಮಿತಿಯ ಉಪಾಧ್ಯಕ್ಷರಾದ ಅಶೋಕ ಆರ ಪಾಟೀಲ್ ಮಾತ ನಾಡಿದರು ಅಧ್ಯ ಕ್ಷರು ಮಾತನಾ ಡುತ್ತಾ ತಾಲೂಕ ಹೋರಾಟದಲ್ಲಿ ಭಾಗವಹಿಸಿ ಈ ಗಾಗಲೇ ಮಡಿದಿ ರುವ ಹಿರಿಯ ಹೋರಾಟಗಾರರಾದ ಅಬ್ದುಲ ಭಾನ್ಸೂರಿ. ಅಬ್ದುಲ್ ರೆಹಮಾನ್ ಬಾವಾಜಿ. ವಿ.ಎ ಕೋನಾಪುರಿ. ಹರಿಶ್ ನಾಯ. ಟಿ ಎಸ್ ನಾಯ ಕ.ಎಂ ಆರ್ ನಾ ಯ್ಕ್. ಸೈಯದ್ ತಂಗಳ. ಅನುಪ ಸಿಂಗ್ ಇತರೆ ಹಲ ವಾರು ಹೋರಾ ಟಗಾರರನ್ನು ಈ ಸಂದರ್ಭದಲ್ಲಿ ಹೋರಾಟ ಸಮಿತಿಯ ಪ್ರಧಾನ ಕಾರ್ಯದರ್ಶಿಯಾದ ರಾಘ ವೇಂದ್ರ ಗಡಪ್ಪನವರ ವಕೀಲರು ಪ್ರಸ್ತಾವಿಕ ಮಾತನಾಡಿ ಸ್ವಾಗತಿಸಿ ಕಾರ್ಯಕ್ರಮ ನಿರೂಪಿಸಿ ವಂದನಾಪನೆಯನ್ನು ಮಾಡಿರುತ್ತಾರೆ. ಈ ಸಂದರ್ಭದಲ್ಲಿ ಹೋರಾಟ ಸಮಿತಿಯ ಹಿರಿಯರಾದ ಬಲ ವಂತ ಬೊಮ್ಮನಳ್ಳಿ, ಮೊಮ್ಮದ್ ಗೌಸ್ ಬೆಟಗೇರಿ, ರಮೇಶ್ ಚಂದಾ ವರ್, ಶಹಚಾದಿ ಕಳಸಾಪುರ್, ಧನಂಜಯ ಕಲ್ಗುಟ್ಕರ್ ಮದರಾಸಾಬ್ ಮುಂತಾದ ಹಿರಿಯರು ಭಾಗವಹಿಸಿದ್ದರು.

# 54 ಲಕ್ಷ 74 ಸಾವಿರದ ರೂ. ಮೌಲ್ಯದ ಸ್ವತ್ತು ಜಪ್ತಿ, ಇಬ್ಬರ ಸೆರೆ

• ಮಲ್ಲಮ್ಮ ನುಡಿ ವಾರ್ತೆ ಬೀದರ್

ಜಿಲ್ಲೆಯ ಹುಮನಾಬಾದ್ ಪಟ್ಟಣದಲ್ಲಿ ನಡೆದ ಮನೆ ಕಳ್ಳತನ ಪ್ರಕರಣವನ್ನು ಭೇದಿಸಿರುವ ಬೀದರ್ ಜಿಲ್ಲಾ ಪೊಲೀಸರು, ಚಿನ್ನ, ಬೆಳ್ಳಿ, ನಗದು ಹಾಗೂ ಕೃತ್ಯಕ್ಕೆ ಬಳಸಿದ ಕಾರು ಸೇರಿದಂತೆ ಒಟ್ಟು 54 ಲಕ್ಷ 74 ಸಾವಿರ ರೂ. ಮೌಲ್ಯದ ಸ್ವತ್ತನ್ನು ವಶಪಡಿಸಿಕೊಂಡು ಇಬ್ಬರು ಅಂತರ್‌ರಾಜ್ಯ ಕಳ್ಳರನ್ನು ಬಂಧಿಸಿದ್ದಾರೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಪ್ರದೀಪ್ ಗುಂಟಿ ತಿಳಿಸಿದ್ದಾರೆ.

ಮಂಗಳವಾರ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳ ಕಚೇರಿಯಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಹುಮನಾಬಾದ್ ಪಟ್ಟಣದ ಶಿವನಗರ ಕಾಲೋನಿಯಲ್ಲಿರುವ ಶಂಕರರಾವ್ ಅವರ ಮನೆಯ ಮೊದಲ ಮಹಡಿಯಲ್ಲಿ ಬಾಡಿಗೆಗೆ ನೀಡಿದ್ದ ಮೂರು ಮನೆಗಳು ಹಾಗೂ ಜಗನ್ನಾಥ್ ಪಾಟೀಲ್ ಅವರ ಮನೆಯಲ್ಲಿ ಯಾರೂ ಇಲ್ಲದ ವೇಳೆ ಕಳ್ಳರು ಬೀಗ ಮುರಿದು ಒಳನುಗ್ಗಿ ಚಿನ್ನ, ಬೆಳ್ಳಿ ಆಭರಣಗಳು ಮತ್ತು ನಗದು ಹಣವನ್ನು ಕಳವು ಮಾಡಿಕೊಂಡು ಪರಾರಿಯಾಗಿದ್ದರು. ಈ ಕುರಿತು ಹುಮನಾಬಾದ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ತನಿಖೆ ನಡೆಸಲಾಗಿತ್ತು ಎಂದು ತಿಳಿಸಿದರು.

ಪ್ರಕರಣದ ತನಿಖೆ ವೇಳೆ ಆರೋಪಿಗಳ ಬಗ್ಗೆ ಯಾವುದೇ ನೇರ ಸುಳಿವು ಲಭ್ಯವಾಗಿರಲಿಲ್ಲ. ಕಳ್ಳರು ಕೃತ್ಯದ ವೇಳೆ ಮಾಸ್ಕ್ ಧರಿಸಿದ್ದರಿಂದ ಸಿಸಿಟಿವಿ ದೃಶ್ಯಗಳಲ್ಲಿಯೂ ಸ್ಪಷ್ಟ ಗುರುತು ಸಿಗಲಿಲ್ಲ.



ಒಂದೇ ಒಂದು ಸಿಸಿಟಿವಿ ಕ್ಯಾಮೆರಾದಲ್ಲಿ ದೃಶ್ಯ ಸೆರೆಯಾಗಿದ್ದರೂ ಅದರ ಆಧಾರದ ಮೇಲೆ ಆರೋಪಿಗಳನ್ನು ಪತ್ತೆಹಚ್ಚುವುದು ಕಷ್ಟಕರವಾಗಿತ್ತು. ಆದರೂ ತಾಂತ್ರಿಕ ತನಿಖೆ ಹಾಗೂ ಮಾಹಿತಿ ಸಂಗ್ರಹದ ಮೂಲಕ ಪೊಲೀಸರು ಆರೋಪಿಗಳನ್ನು ಪತ್ತೆಹಚ್ಚಿ ಬಂಧಿಸುವಲ್ಲಿ ಯಶಸ್ವಿಯಾಗಿದ್ದಾರೆ ಎಂದು ಎಸ್‌ಪಿ ಹೇಳಿದರು.

ಬಂಧಿತ ಆರೋಪಿಗಳನ್ನು ವಿಜಯಪುರ ಮೂಲದ ಉಮೇಶ್ ಹಾಗೂ ಮಹಾರಾಷ್ಟ್ರದ ಸೋಲಾಪುರ ಮೂಲದ ಹುಸೇನಿ ಗಾಯಕ್ವಾಡ್ ಎಂದು ಗುರುತಿಸಲಾಗಿದೆ.

ಆರೋಪಿಗಳಿಂದ 42.75 ಲಕ್ಷ ರೂ. ಮೌಲ್ಯದ 28.5 ತೊಲೆ ಚಿನ್ನಾಭರಣ, 44 ಸಾವಿರ ರೂ. ಮೌಲ್ಯದ 22 ತೊಲೆ ಬೆಳ್ಳಿ 5.80 ಲಕ್ಷ ರೂ. ನಗದು ಹಾಗೂ ಕೃತ್ಯಕ್ಕೆ ಬಳಸಿದ್ದ 5.75 ಲಕ್ಷ ರೂ. ಮೌಲ್ಯದ ವಿಟಾರಾ ಕಾರನ್ನು ವಶಪಡಿಸಿಕೊಳ್ಳಲಾಗಿದೆ. ಒಟ್ಟಾರೆ 54.74 ಲಕ್ಷ ರೂ. ಮೌಲ್ಯದ ಸ್ವತ್ತು ಜಪ್ತಿ ಮಾಡಲಾಗಿದೆ.

ಬಂಧಿತ ಆರೋಪಿಗಳ ವಿರುದ್ಧ ವಿಜಯಪುರ, ಕೊಪ್ಪಳ, ಕಲಬುರಗಿ, ಮಹಾರಾಷ್ಟ್ರದ ಪೂಣೆ, ಸೋಲಾಪುರ ಹಾಗೂ ತೆಲಂಗಾಣದ ಮೆಹಬೂಬ್ ನಗರ ಸೇರಿದಂತೆ ವಿವಿಧ ಜಿಲ್ಲೆಗಳಲ್ಲಿ ಕಳ್ಳತನ ಪ್ರಕರಣಗಳು ದಾಖಲಾಗಿವೆ. ಇವರು ಅಂತರ್‌ರಾಜ್ಯ ಮಟ್ಟದಲ್ಲಿ ಕಳ್ಳತನ ನಡೆಸುತ್ತಿದ್ದ ಆರೋಪಿಗಳಾಗಿದ್ದು,

> **ಬೀದರ ಜಿಲ್ಲಾ ಪೊಲೀಸರು ಕಳ್ಳತನ ಪ್ರಕರಣವನ್ನು ಭೇದಿಸಿ ಸುಮಾರು 42.75 ಲಕ್ಷ ರೂ. ಮೌಲ್ಯದ 28.5 ತೊಲೆ ಚಿನ್ನಾಭರಣ, 44 ಸಾವಿರ ರೂ. ಮೌಲ್ಯದ 22 ತೊಲೆ ಬೆಳ್ಳಿ 5.80 ಲಕ್ಷ ರೂ. ನಗದು ಹಾಗೂ ಕೃತ್ಯಕ್ಕೆ ಬಳಸಿದ್ದ 5.75 ಲಕ್ಷ ರೂ. ಮೌಲ್ಯದ ವಿಟಾರಾ ಕಾರನ್ನು ವಶಪಡಿಸಿಕೊಳ್ಳಲಾಗಿದೆ. ಒಟ್ಟಾರೆ 54.74 ಲಕ್ಷ ರೂ. ಮೌಲ್ಯದ ಸ್ವತ್ತು ಜಪ್ತಿ ಇಬ್ಬರ ಆರೋಪಿಗಳ ಬಂಧನವಾಗಿದೆ.**
>
> **–ಪ್ರದೀಪ್ ಗುಂಟಿ**
> **ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಬೀದರ**

ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ ಎಂದು ಎಸ್‌ಪಿ ಪ್ರದೀಪ್ ಗುಂಟಿ ಮಾಹಿತಿ ನೀಡಿದರು.

ಪತ್ರಿಕಾಗೋಷ್ಠಿಯಲ್ಲಿ ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಚಂದ್ರಕಾಂತ್ ಪೂಜಾರಿ, ಡಿವೈಎಸ್ಪಿಗಳಾದ ಎನ್ ಡಿ ಸನ್ನದಿ, ಹುಮನಾಬಾದ ಡಿವೈಎಸ್ಪಿ ಮಡೋಳಪ್ಪ ಪಿಎಸ್, ಹುಮನಾಬಾದ ವೃತ್ತ ನಿರೀಕ್ಷಕರಾದ ಸಂತೋಷ್ ಎಲ್ ತಟೆಪಳ್ಳಿ, ನಿರೀಕ್ಷಕರಾದ ಸುರೇಶಕುಮಾರ, ಮಹೇಂದ್ರಕುಮಾರ, ಪ್ರಮೋದ ಪ್ರೋ, ಹುಲಸೂರ ಪೊಲೀಸ್ ಠಾಣೆ, ಗುಪ್ತಚರ ವಿಭಾಗದ ಗುಂಡಪ್ಪಾ ರೆಡ್ಡಿ, ಸಂತೋಷ್ ಮಹಾರಾಜ್, ಹಾಗೂ ಕಾರ್ಯಾಚರಣೆಯಲ್ಲಿ ಹುಮನಾಬಾದ ಪೊಲೀಸ್ ಠಾಣೆಯ ಸಿಬ್ಬಂದಿಗಳು ಭಾಗವಹಿಸಿದರು,

# ಭಾರತ್ ಜೋಡೋ ಯುವ ಸಂಘಗಳ ಸ್ಥಾಪನೆ: ಡಿಸಿ ಸಂಗಪ್ಪ

• ಮಲ್ಲಮ್ಮ ನುಡಿ ವಾರ್ತೆ ಬಾಗಲಕೋಟೆ

ಯುವಜನರಲ್ಲಿ ಕ್ರೀಡೆ, ಸಂಸ್ಕೃತಿ, ವೈಜ್ಞಾನಿಕ ಮನೋಭಾವ ಹಾಗೂ ಸಾಮುದಾಯಿಕ ಸಾಮಾಜಿಕ ಸಾಮರಸ್ಯವನ್ನು ಉತ್ತೇಜಿಸುವ ನಿಟ್ಟಿನಲ್ಲಿ ಸರಕಾರದ ಮಾರ್ಗಸೂಚಿಯನ್ವಯ ಜಿಲ್ಲೆಯ ಗ್ರಾಮ ಪಂಚಾಯತ ಹಾಗೂ ನಗರ ವಾರ್ಡಗಳ ವ್ಯಾಪ್ತಿಯಲ್ಲಿ ಭಾರತ್ ಜೋಡೋ ಯುವ ಸಂಘಗಳನ್ನು ಸ್ಥಾಪಿಸಲಾಗುತ್ತಿದೆ ಎಂದು ಜಿಲ್ಲಾಧಿಕಾರಿ ಸಂಗಪ್ಪ ಹೇಳಿದರು.

ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಮಂಗಳವಾರ ಜರುಗಿದ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಪ್ರತಿ ಗ್ರಾಪಂ ವ್ಯಾಪ್ತಿಯಲ್ಲಿ ಒಂದು ಸಂಘ, ಪ್ರತಿ ಪಟ್ಟಣ ಪಂಚಾಯತ ವ್ಯಾಪ್ತಿಯಲ್ಲಿ ಸರಾಸರಿ 4 ಸಾವಿರ ಜನಸಂಖ್ಯೆಗೆ ಒಂದು ಸಂಘ, ಪ್ರತಿ ಪುರಸಭೆಯಲ್ಲಿ ಸರಾಸರಿ 6 ಸಾವಿರ ಜನಸಂಖ್ಯೆಗೆ ಒಂದು ಸಂಘ, ಪ್ರತಿ ನಗರಸಭೆಯಲ್ಲಿ ಸರಾಸರಿ 8 ಸಾವಿರ ಜನಸಂಖ್ಯೆಗೆ ಒಂದು ಸಂಘ ಸ್ಥಾಪಿಸಲಾಗುತ್ತಿದೆ. ಈ ಯೋಜನೆಯನ್ನು ಕ್ರೀಡಾ ಇಲಾಖೆಯು ಪಿಆರ್‌ಇಡಿ, ನಗರಾಭಿವೃದ್ಧಿ, ಕಂದಾಯ ಹಾಗೂ ಶಿಕ್ಷಣ ಇಲಾಖೆಗಳ ಸಹಯೋಗದಲ್ಲಿ ಅನುಷ್ಠಾನಗೊಳಿಸಲಾಗುತ್ತಿದೆ ಎಂದರು.

ತಳಮಟ್ಟದಲ್ಲಿ ಯುವಜನರ ಪಾಲ್ಗೊಳ್ಳುವಿಕೆಗೆ ವ್ಯವಸ್ಥಿತ ವೇದಿಕೆಗಳ ಕೊರತೆ ಇದ್ದು, ಗ್ರಾಮೀಣ ಮತ್ತು ನಗರದ ಯುವಜನತೆಯಲ್ಲಿ ಕ್ರೀಡೆ, ಫಿಟ್‌ನೆಸ್, ಆರೋಗ್ಯಕರ ಜೀವನಶೈಲಿ ಮತ್ತು ನಾಯಕತ್ವದ ಅವಕಾಶಗಳಲ್ಲಿನ ಅಡಚಣೆಗಳನ್ನು ನಿವಾರಿಸುವ ನಿಟ್ಟಿನಲ್ಲಿ ಪ್ರತಿ ಗ್ರಾಪಂ ಮತ್ತು ನಗರ ವಾರ್ಡಗಳಲ್ಲಿ ಒಂದು ಸಾಂಸ್ಕೃತಿಕ ವೇದಿಕೆ ನಿರ್ಮಿಸಿ, ನಾಯಕತ್ವ ಜವಾಬ್ದಾರಿ ಮತ್ತು ನಾಗರಿಕ ಪ್ರಜ್ಞೆಯನ್ನು ಬೆಳೆಸಬೇಕಾಗಿದೆ. ಸಶಕ್ತ ಯುವ ಜನತೆಯನ್ನೊಳಗೊಂಡ ಬಲಿಷ್ಠ ಸಮುದಾಯಗಳನ್ನು ಒಂದು ಗೂಡಿಸುವ ಉದ್ದೇಶ ಹೊಂದಿದೆ. ಸರಕಾರದ ಮಹತ್ವದ ಯೋಜನೆ ಅನುಷ್ಠಾನಕ್ಕೆ ಅಧಿಕಾರಿಗಳು ಶ್ರಮಿಸಬೇಕಿದೆ ಎಂದರು.

ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕ ಗುರುಪಾದ ಡೂಗನವರ ಮಾತನಾಡಿ ಭಾರತ್ ಜೋಡೋ ಯುವ ಸಂಘ ಸ್ಥಾಪನೆಗೆ ಕನಿಷ್ಠ 100 ಜನ ಸದಸ್ಯರಿರಬೇಕು. ಸದಸ್ಯರು 16 ರಿಂದ 35 ವರ್ಷದೊಳಗಿದ್ದು, ಬಿಜೆವಾಯ್‌ಎಸ್ ಪೋರ್ಟ ಅಥವಾ ಮೊಬೈಲ್ ಆಪ್ ಮೂಲಕ ಇಲ್ಲವೇ ಗ್ರಾ.ಪಂ, ನಗರ ಪ್ರದೇಶಗಳಲ್ಲಿ ಗ್ರಾಮ ಒನ್, ಕರ್ನಾಟಕ ಒನ್, ನಾಗರಿಕ ಸೇವಾ ಕೇಂದ್ರಗಳ ಸಹಾಯದಿಂದ ಅರ್ಜಿ ಸಲ್ಲಿಸಬಹುದಾಗಿದೆ.

ಆಸಕ್ತ ಯುವಕರು ಸಂಘಗಳ ರಚನೆಗೆ ಗ್ರಾಮ ಪಂಚಾಯತಿ ಮಟ್ಟದಲ್ಲಿ ಪಂಚಾಯತ ಅಭಿವೃದ್ಧಿ ಅಧಿಕಾರಿ ಹಾಗೂ ನಗರ ಪ್ರದೇಶದಲ್ಲಿ ಮುಖ್ಯಾಧಿಕಾರಿಗಳನ್ನು ಸಂಪರ್ಕಿಸಬಹುದಾಗಿದೆ ಎಂದು ತಿಳಿಸಿದರು.

ಯೋಜನೆಯ ಅನುಷ್ಠಾನಕ್ಕಾಗಿ ರಾಜ್ಯ ಮಟ್ಟದಲ್ಲಿ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ಉಸ್ತುವಾರಿ ಸಮಿತಿ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಅಪರ ಮುಖ್ಯ ಕಾರ್ಯದರ್ಶಿ, ಪ್ರಧಾನ ಕಾರ್ಯದರ್ಶಿ, ಕಾರ್ಯದರ್ಶಿಗಳ ಅಧ್ಯಕ್ಷೆಯಲ್ಲಿ ಕಾರ್ಯಕಾರಿ ಸಮಿತಿ, ಜಿಲ್ಲಾ ಮಟ್ಟದಲ್ಲಿ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಜಿಲ್ಲಾ ಮಟ್ಟದ ಉಸ್ತುವಾರಿ ಸಮಿತಿಗಳನ್ನು ರಚಿಸಲಾಗಿದೆ. ಪ್ರತಿ ಭಾರತ ಜೋಡೋ ಯುವ ಸಂಘಕ್ಕೆ ವಿವಿಧ ಚಟುವಟಿಕೆಗಳನ್ನು ಕೈಗೊಳ್ಳಲು ವಾರ್ಷಿಕವಾಗಿ ಒಟ್ಟು 10 ಲಕ್ಷ ರೂ.ಗಳ ಅನುದಾನವನ್ನು ಸರಕಾರದಿಂದ ಬಿಡುಗಡೆ ಮಾಡಲಾಗುತ್ತಿದೆ ಎಂದರು.

ಸಭೆಯಲ್ಲಿ ಅಪರ ಜಿಲ್ಲಾಧಿಕಾರಿ ಅಶೋಕ ತೇಲಿ, ಜಿ.ಪಂ ಮುಖ್ಯ ಯೋಜನಾಧಿಕಾರಿ ಅಲ್ಲಮಪ್ರಭು ಅಲ್ಲಾಪೂರ, ಶಾಲಾ ಶಿಕ್ಷಣ ಇಲಾಖೆಯ ಉಪನಿರ್ದೇಶಕ ಅಜೀತ ಮನ್ನಿಕೇರಿ, ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿ ಪಂಕಜ, ಅಲ್ಪಸಂಖ್ಯಾತರ ಕಲ್ಯಾಣಾಧಿಕಾರಿ ಪ್ರೀತಿ, ಮೇರಾ ಯುವ ಭಾರತ ಬಾಗಲಕೋಟೆಯ ಜಿಲ್ಲಾ ಯುವ ಅಧಿಕಾರಿ ಅಶ್ವಿನಿ ಸೇರಿದಂತೆ ಇತರರು ಉಪಸ್ಥಿತರಿದ್ದರು.

# ವಿದ್ಯಾರ್ಥಿಗಳಿಗೆ ಸಂಸ್ಕೃತಿಯ ಅರಿವು ಅಗತ್ಯ: ಡಾ.ಕೆಂಧೂಳಿ

• ಮಲ್ಲಮ್ಮ ನುಡಿ ವಾರ್ತೆ ಬಾಗಲಕೋಟೆ

ಗ್ರಾಮೀಣ ಸಂಸ್ಕೃತಿ, ಜನಪದ ಸಾಹಿತ್ಯ ಬದುಕಿನ ಮೌಲ್ಯಗಳನ್ನು ಸಾರುವ ಜೀವನಾಡಿಯಾಗಿದ್ದು, ವಿದ್ಯಾರ್ಥಿಗಳು ಕನ್ನಡ ನಾಡಿನ ಸಾಂಸ್ಕೃತಿಕ ಪರಂಪರೆ ಹಾಗೂ ಜನಪದ ಸಾಹಿತ್ಯದ ಮಹತ್ವವನ್ನು ಅರಿತುಕೊಳ್ಳುವುದು ಅಗತ್ಯ ಎಂದು ಜನಪದ ಸಾಹಿತಿ ಹಾಗೂ ಗಾಯಕ ಡಾ. ಶ್ರೀಕಾಂತ ಕೆಂಧೂಳಿ ಹೇಳಿದರು.

ನಗರದ ಬಿವಿವಿಎಸ್ ನೂತನ ಸಭಾಭವನದಲ್ಲಿ ಮಂಗಳವಾರ ನಡೆದ ಬಸವೇಶ್ವರ ಪದವಿ ಪೂರ್ವ ವಾಣಿಜ್ಯ ಮಹಾವಿದ್ಯಾಲಯದ 2026–27ನೇ ಶೈಕ್ಷಣಿಕ ಸಾಲಿನ ವಿದ್ಯಾರ್ಥಿ ಸಂಘ, ಕ್ರೀಡಾ ಹಾಗೂ ಸಾಂಸ್ಕೃತಿಕ ಚಟುವಟಿಕೆಗಳ ಉದ್ಘಾಟನೆ ಮತ್ತು ಪ್ರಥಮ ಪಿಯುಸಿ ವಿದ್ಯಾರ್ಥಿಗಳ ಸ್ವಾಗತ ಸಮಾರಂಭ ಉದ್ಘಾಟಿಸಿ ಅವರು ಮಾತನಾಡಿದರು.

ನಮ್ಮ ಪೂರ್ವಜರು ಜನಪದ ಗೀತೆಗಳ ಮೂಲಕ ಗ್ರಾಮೀಣ ಸಂಸ್ಕೃತಿ, ಮಾನವೀಯ ಮೌಲ್ಯಗಳು ಹಾಗೂ ಸರಳ ಬದುಕಿನ ಆದರ್ಶಗಳನ್ನು ಮುಂದಿನ ಪೀಳಿಗೆಗೆ ಪರಿಚಯಿಸಿದ್ದಾರೆ. ನೈತಿಕತೆ, ಸಾಮಾಜಿಕ



ಬಾಂಧವ್ಯ ಮತ್ತು ಶ್ರಮದ ಗೌರವದಂತಹ ಮೌಲ್ಯಗಳೇ ಹಳ್ಳಿಯ ಜೀವನದ ಭದ್ರ ಬುನಾದಿಯಾಗಿವೆ. ಕೇವಲ ಸಾಧನೆಗಿಂತ ಬದುಕಿನ ಮೌಲ್ಯಗಳನ್ನು ಕಲಿಸುವ ಶಿಕ್ಷಣಕ್ಕೆ ಹೆಚ್ಚಿನ ಆದ್ಯತೆ ನೀಡಬೇಕು ಎಂದ ಅವರು, ಕ್ರೀಡೆ, ಕಲೆ, ಸಾಹಿತ್ಯ ಹಾಗೂ ಸಾಂಸ್ಕೃತಿಕ ಚಟುವಟಿಕೆಗಳು ವಿದ್ಯಾರ್ಥಿಗಳ ವ್ಯಕ್ತಿತ್ವ ವಿಕಸನಕ್ಕೆ ಅತ್ಯಂತ ಅಗತ್ಯವಾಗಿದ್ದು, ಕೌಶಲ್ಯಾಧಾರಿತ ಬದುಕು ರೂಪಿಸಿಕೊಳ್ಳಲು ಇವು ಪೂರಕವಾಗಿವೆ ಎಂದು ತಿಳಿಸಿದರು. ಇದೇ ವೇಳೆ "ಟಕಬುಳು ಟಾಂಗು ಚಪಾತಿ ಪಾಂಡು", "ಎಚ್ಚರ ಬಲು ಎಚ್ಚರ, ಜೀವನ ಮೂರು ಅಕ್ಷರ", "ಅಮ್ಮ ಅಮ್ಮ ಎಂದು ಅ ಕಲಿತೆನು" ಸೇರಿದಂತೆ ವಿವಿಧ ಜನಪದ ಗೀತೆಗಳನ್ನು ಹಾಡುವ ಮೂಲಕ ವಿದ್ಯಾರ್ಥಿಗಳ ಮೆಚ್ಚುಗೆ ಗಳಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಮಹಾವಿದ್ಯಾಲಯದ ಪ್ರಾಚಾರ್ಯ ಡಾ.ಜಗನ್ನಾಥ ಚವ್ಹಾಣ ಮಾತನಾಡಿ, ಆಧುನಿಕ ಅಗತ್ಯಗಳಿಗೆ ಅನುಗುಣವಾಗಿ ಗುಣಮಟ್ಟದ ಶಿಕ್ಷಣ ನೀಡುತ್ತಿರುವ ಬಸವೇಶ್ವರ ವಾಣಿಜ್ಯ ಮಹಾವಿದ್ಯಾಲಯ ಶಿಕ್ಷಣ ಕ್ಷೇತ್ರದಲ್ಲಿ ಮಾದರಿ ಸಂಸ್ಥೆಯಾಗಿದೆ ಎಂದು ಹೇಳಿದರು. ಈ ಸಂದರ್ಭದಲ್ಲಿ ವಿವಿಧ ಕ್ಷೇತ್ರಗಳಲ್ಲಿ ಸಾಧನೆಗೈದ ಪ್ರತಿಭಾವಂತ ವಿದ್ಯಾರ್ಥಿಗಳನ್ನು ಸನ್ಮಾನಿಸಿ ಗೌರವಿಸಲಾಯಿತು.

ಕಾರ್ಯಕ್ರಮದಲ್ಲಿ ಡಾ.ಎಂ.ಎ.ಹುನಗುಂದ, ಶ್ರೀಮತಿ ಬಿ.ಎಸ್. ಶೇಲ್ಲಿಕೇರಿ, ಸಮೀಕ್ಷಾ ಚವ್ಹಾಣ ಹಾಗೂ ಡಾ.ಎಸ್.ಎಸ್.ಕೊಟ್ಯಾಳ ಉಪಸ್ಥಿತರಿದ್ದರು.

ಬಳಿಕ ವಿದ್ಯಾರ್ಥಿಗಳಿಂದ ವೈವಿಧ್ಯಮಯ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಿದವು.


# ಗುರು ಶಿಷ್ಯರ ಸಮಾಗಮವೇ ಗುರು ಪೂರ್ಣಿಮೆ



**ಗುರು ಪೂರ್ಣಿಮೆ**
● ಡಾ. ಯಂಕನಗೌಡ ಪಾಟೀಲ್
ಉಪನ್ಯಾಸಕರು, ಕೆಂಭಾವಿ

ವಿದ್ಯಾ ಬುದ್ಧಿ ಕಲಿಸುವ ಶಿಕ್ಷಕ, ಬೋಧಕ, ಆಚಾರ್ಯ, ಹಿರಿಯ, ಮಾರ್ಗದರ್ಶಿ, ಬೃಹಸ್ಪತಿ, ಧಾರ್ಮಿಕ ಸಂತರು, ಎಂಬ ವಿವಿಧ ಅರ್ಥಗಳಿವೆ. ಸಮಾಜದಲ್ಲಿ ಗುರುವಿನ ಪಾತ್ರ ಅತ್ಯಂತ ಮಹತ್ವದ್ದಾಗಿದೆ, ಶಿಷ್ಯಂದಿರಲ್ಲಿ, ಶಿಸ್ತು, ನಯ, ವಿನಯ, ಕರ್ತವ್ಯ ಪ್ರಜ್ಞೆ, ಬೆಳೆಸುವ ನಿಟ್ಟಿನಲ್ಲಿ ಸಮಾಜಕ್ಕೆ ಸತ್ಪ್ರಜೆಗಳನ್ನಾಗಿ ರೂಪಿಸುವಲ್ಲಿ ಗುರುಗಳ ಕೊಡುಗೆ ಅಪಾರ, ದೇಶದ ಏಳಿಗೆಗೆ ವಿದ್ಯಾರ್ಥಿಗಳಲ್ಲಿ ಜಾಗೃತಗೊಳಿಸುವ ಜಗದ ಜಂಗಮ ರೂಪಿ. ಬದುಕಿನ ತವಕ ತಲ್ಲಣಗಳಿಗೆ ತಡವರಿಸದೆ ತಾಳು ಮನವೆ ಎಂದು ಸುಜ್ಞಾನದೆಡೆಗೆ ಕೊಂಡೊಯ್ಯುವ ಸೃಜನಶೀಲ, ಚೈತನ್ಯ ಶಕ್ತಿಯೇ ಗುರು.

"ಶಿವಪಥ ಅರಿವೊಡೆ ಗುರುಪಥ ಮೊದಲು" ಎಂಬ ಬಸವಣ್ಣನವರ ಆಶಯದಂತೆ ಗುರು ಪೂರ್ಣಿಮೆಯಂದು, ಶಿಷ್ಯಂದಿರು, ತಮಗೆ ಜ್ಞಾನಾರ್ಜನೆಗೈದ ಗುರು ಹಿರಿಯರನ್ನು ದೇವರೆಂದೇ ಭಾವಿಸಿ ಭಜಿಸಿ ವಂದಿಸಿ ಕೃತಾರ್ಥರಾಗುವ ಗುರು ಪೂರ್ಣಿಮೆಯನ್ನು ಶ್ರದ್ಧೆ ಭಕ್ತಿಯಿಂದ, ಸಡಗರ ಸಂಭ್ರಮದಿಂದ ದೇಶದೆಲ್ಲೆಡೆ ಶಿಷ್ಯಂದಿರು ಸೇರಿ



ಆಚರಿಸುವ ಪವಿತ್ರ ಹಬ್ಬಕ್ಕೆ ಗುರು ಪೂರ್ಣಿಮೆಯಂದು, ವ್ಯಾಸ ಪೂರ್ಣಿಮೆಯಂದು, ಬೌದ್ಧ ಪೂರ್ಣಿಮೆಯಂದು ಕರೆಯಲಾಗುತ್ತದೆ, ಗುರು ಶಿಷ್ಯರ ಸಮಾಗಮದ ಸಂಕೇತವಾಗಿ ಧಾರ್ಮಿಕ ಹಾಗೂ ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಭವ್ಯ ಪರಂಪರೆಯ ಪ್ರತೀಕ.

ಮಹರ್ಷಿ ವೇದವ್ಯಾಸರು ವೇದಗಳನ್ನು ವಿಂಗಡಿಸಿ, ಮಹಾಭಾರತ ಬರೆದ ಶ್ರೇಷ್ಠ ಗುರು. ವೇದವ್ಯಾಸ ಮಹರ್ಷಿಗಳ ಜನ್ಮದಿನ ವ್ಯಾಸ ಪೂರ್ಣಿಮೆಯಂದು, ಆಸೆಯೇ ದುಃಖಕ್ಕೆ ಮೂಲ ಎಂದ ಗೌತಮ ಬುದ್ಧನು ಸಾರನಾಥದಲ್ಲಿ ಧರ್ಮೋಪದೇಶ ಮಾಡಿದ ಪ್ರಥಮ ದಿನ ಬೌದ್ಧ ಪೂರ್ಣಿಮೆಯಂದು, ಶಿವನು ಸಪ್ತರ್ಷಿಗಳಿಗೆ ಯೋಗ ವಿದ್ಯೆಯನ್ನು ಧಾರೆಯೆರೆದು ಪ್ರಥಮ ಆದಿಗುರು, ಆದ ದಿನವನ್ನು."ಗುರುಪೂರ್ಣಿಮೆ"ಯಂದು ಆಚರಿಸಲಾಗುತ್ತದೆ.

ತಂದೆ ತಾಯಿ ಜೀವವನ್ನು ನೀಡಿದರೆ, ಗುರುಗಳು, ಶಿಕ್ಷಕರು ಜೀವನವನ್ನು ರೂಪಿಸುತ್ತಾರೆ. ಜನ್ಮದಾತರು ನಮಗೆ ಜಗತ್ತನ್ನು ಪರಿಚಯಿಸಿದರೆ, ಜಗದ್ಗುರು ನಮಗೆ ಜಗತ್ತಿನಲ್ಲಿ ಹೇಗೆ ಬದುಕಬೇಕೆಂಬ ದಾರಿಯನ್ನು ತೋರಿಸುತ್ತಾನೆ. ರಾಜ್ಯಶಾಸ್ತ್ರದ ಪಿತಾಮಹ ಅರಿಸ್ಟಾಟಲ್ ಹೇಳುವಂತೆ ಭೂಮಿಯನ್ನೇ ಹಾಳೆಯಾಗಿ, ಸಮುದ್ರದ ನೀರನ್ನು ಶಾಯಿಯನ್ನಾಗಿ ಮತ್ತು ಗಿಡ, ಮರಗಳನ್ನು ಲೇಖನಿಯಾಗಿ ಮಾಡಿ ಬರೆದರೂ ಗುರುಗಳ ಗುಣಗಳನ್ನು, ವರ್ಣನೆಯನ್ನು, ಮಹಿಮೆಯನ್ನು, ಬರೆದು ಮುಗಿಸಲು ಸಾಧ್ಯವಿಲ್ಲ.

ಚಾತುರ್ಮಾಸದಲ್ಲಿ ಬರುವ ಗುರು ಪೂರ್ಣಿಮೆಯಂದು ಗುರು ತತ್ವವು ಸಾಮಾನ್ಯ ದಿನಗಳಿಗಿಂತ ಸಾವಿರ ಪಟ್ಟು ಜಾಸ್ತಿಯೇ ಇರುತ್ತದೆ. ಕಾರಣ ಸಾಧಕರು, ಕಲಿಕಾರ್ಥಿಗಳು ತಮ್ಮ ತಮ್ಮ ಗುರುಗಳಿಗೆ ವಿಶೇಷ ಪೂಜೆ ಸಲ್ಲಿಸುತ್ತಾರೆ. ಸದ್ಗುರುಗಳು ಭಕ್ತಾದಿಗಳಿಗೆ ಪ್ರವಚನ ನೀಡುತ್ತಾ, ಸದ್ಭಕ್ತರ ಬಾಳನ್ನು ತಿದ್ದಿ ತೀಡಿ ಬುದ್ಧಿ ಹೇಳುತ್ತಾ, ನೀತಿ ನಿಯಮಗಳನ್ನು ಬೋಧಿಸುತ್ತಾ, ಮಾನವರನ್ನು ಮಹಾ ಮಾನವರನ್ನಾಗಿಸಲು, ನರನನ್ನು ಹರನನ್ನಾಗಿಸಲು ಹಂಬಲಿಸಿ ಅನುಭವದ ಅಮೃತಧಾರೆ ಎರೆಯುವ ಅದ್ಭುತ ಶಕ್ತಿ ಗುರುವಿಗೆ ಇದ್ದ ಪ್ರಯುಕ್ತ ಧರ್ಮ ಗ್ರಂಥಗಳಲ್ಲಿ ಈ ರೀತಿ ಉಲ್ಲೇಖವಿದೆ.

"ಗುರು ಬ್ರಹ್ಮ, ಗುರು ವಿಷ್ಣು, ಗುರು ದೇವೋ ಮಹೇಶ್ವರ, ಗುರು ಸಾಕ್ಷಾತ್ ಪರಬ್ರಹ್ಮ, ತಸ್ಮೈ ಶ್ರೀ ಗುರುವೇ ನಮಃ." ಗುರುವೇ ಸೃಷ್ಟಿಕರ್ತ, ಗುರುವೇ ಪಾಲನಕರ್ತ, ಗುರುವೇ ಲಯಕರ್ತ, ದೈನಂದಿನ ಬದುಕಿನ ಮಾರ್ಗದರ್ಶಿ, ಜೀವನದ ಸಾರ್ಥಕತೆಗೆ ದಾರಿ ತೋರುವ ಸದ್ಗುರುವಿನ ಮನಸಾರೆ ನೆನೆಯುತ್ತಾ, ಆಧ್ಯಾತ್ಮಿಕ ಚಿಂತನೆಯ ಜೊತೆಗೆ ಶುದ್ಧ ಮನಸ್ಸಿನಿಂದ ಸಂಭ್ರಮಿಸುವ ಸುದಿನ.

ಅಜ್ಞಾನ, ಅಂಧಕಾರ, ಕತ್ತಲು, ಕಾರ್ಮೋಡ, ದುಃಖ, ದುಮ್ಮಾನ,, ದುಗುಡ ಮತ್ತು ಮನಸ್ಸಿನ ವ್ಯಾಕುಲತೆ ನಿವಾರಿಸಿ, ಜ್ಞಾನ, ಬೆಳಕು,ಪ್ರಕಾಶ, ಹೊಳಪು ಮತ್ತು ಕಣ್ಣಿಗೆ ವಸ್ತುಗಳನ್ನು ಕಾಣಿಸುವ ಶಕ್ತಿ ಕರುಣಿಸಿ, ಬದುಕಲಿ ಭರವಸೆ ತುಂಬುವ ಮೂಲಕ ಅಜ್ಞಾನದ ಅಂಧಕಾರ ಹೋಗಲಾಡಿಸಿ ಸುಜ್ಞಾನದೆಡೆಗೆ ಕೊಂಡೊಯ್ಯಲು ಜ್ಞಾನ ದೀವಿಗೆ ಹೊತ್ತಿಸಿದ ಸದ್ಗುರುಗಳನ್ನು ನೆನೆಯುತ್ತಾ ನೇರವಾಗಿ ಭೇಟಿ ಮಾಡಿ ಪೂಜಿಸಿ, ಗೌರವಿಸಿ, ವಂದಿಸಿ ಹೂವು ಹಣ್ಣುಗಳನ್ನು ಅರ್ಪಿಸಿ ಆಶೀರ್ವಾದ ಪಡೆದು ಗುರು ಕೃಪೆಗೆ ಪಾತ್ರರಾಗೋಣ.

# ಸದೃಢ ಆರೋಗ್ಯಕ್ಕಾಗಿ ವ್ಯಸನದಿಂದ ದೂರಾಗಿ: ಮೌನೇಶ



**ಕೆಂಭಾವಿ:** ವಿದ್ಯಾರ್ಥಿಗಳು ಬುದ್ಧಿ, ಮನಸ್ಸು, ನಿಗ್ರಹಿಸಿಕೊಂಡು ಸುಸಂಸ್ಕೃತ ವ್ಯಕ್ತಿಯಾಗಿ ಸುಂದರ ಸಮಾಜ ನಿರ್ಮಾಣಕ್ಕೆ ಮುಂದಾಗಬೇಕು ಎಂದು ಎಎಸ್ಐ ಮೌನೇಶ ಬಡಿಗೇರ ಹೇಳಿದರು.

ಶ್ರೀಮತಿ ಗಂಗೂಬಾಯಿ ಶಾಂತಗೌಡ ಪೋಲಿಸ್ ಪಾಟೀಲ್ ಮೆಮೋರಿಯಲ್ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಹಾಗೂ ಯಾದಗಿರಿ ಜಿಲ್ಲಾ ಪೋಲಿಸ್ ಇಲಾಖೆ ಸಹಯೋಗದಲ್ಲಿ ಸೋಮವಾರ ಹಮ್ಮಿಕೊಂಡಿದ್ದ ಡ್ರಗ್ಸ್ ಮುಕ್ತ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದ ಅವರು ಪದವಿ ಪೂರ್ವ ಹಾಗೂ ಪದವಿ ಈ ಐದು ವರ್ಷಗಳ ವಿದ್ಯಾರ್ಥಿಗಳಿಗೆ ಪಂಚವಾರ್ಷಿಕ ಯೋಜನೆ ಇದ್ದಂತೆ ಎಂದವರು. ಸದೃಢ ಆರೋಗ್ಯಕ್ಕಾಗಿ ಯುವ ಜನತೆ ಗುಟ್ಕಾ, ಮಟ್ಕಾ, ಜೂಜಾಟ, ಆಲ್ಕೋಹಾಲ್, ಸಿಗರೇಟು, ಡ್ರಗ್ಸ್, ಗಾಂಜಾ, ವ್ಯಸನಿಗಳಾಗಬೇಡಿ ಎಂದು ಕರೆ ನೀಡಿದರು.

ಪೋಲಿಸ್ ಕಾನ್ಸ್ಟೇಬಲ್ ರೇಖಾ ಮಾತನಾಡಿ ಯುವ ಪೀಳಿಗೆ ದುಶ್ಚಟಗಳಿಂದ ದೂರವಿದ್ದು ಓದಿನ ಕಡೆ ಗಮನ ಹರಿಸಿ ದೊಡ್ಡ ದೊಡ್ಡ ಹುದ್ದೆಗಳನ್ನು ಪಡೆಯುವಂತೆ ಸಲಹೆ ನೀಡಿದ ಅವರು, ಯುವಕರು ಮಾದಕ ವಸ್ತುಗಳ ಸೇವನೆಯಿಂದ ದೂರವಿದ್ದಾಗ ಸುಶಿಕ್ಷಿತ, ಸಶಕ್ತ, ಸ್ವಾಸ್ಥ್ಯ ಸಮಾಜ ನಿರ್ಮಾಣ ಮಾಡಲು ಸಾಧ್ಯವಿದೆ ಎಂದರು. ಕನ್ನಡ ವಿಭಾಗದ ಮುಖ್ಯಸ್ಥ ಮಲ್ಲಿಕಾರ್ಜುನ ಮರಡ್ಡಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು ಪದವಿ ವಿದ್ಯಾರ್ಥಿಗಳಿಗೆ ಡ್ರಗ್ಸ್ ಕುರಿತು ಜಾಗೃತಿ ಮೂಡಿಸಲು ಮುಂದಾದ ಪೋಲಿಸ್ ಇಲಾಖೆಯ ಕಾರ್ಯ ಸ್ತುತ್ಯಾರ್ಹ ಎಂದರು.

ಉಪನ್ಯಾಸಕಿಯರಾದ ಡಾ ಪೂಜಾ ಹೊನ್ನುಟಗಿ, ನಸ್ರೀನ್ ತಾಜ್, ಸುಮಾ, ಉಪನ್ಯಾಸಕ ಡಾ ಯಂಕನಗೌಡ ಪಾಟೀಲ್, ಶರಣಪ್ಪ ಸಾಹು, ಪೋಲಿಸ್ ಕಾನ್ಸ್ಟೇಬಲ್ ನಿಂಗನಗೌಡ, ಹೋಮ್ ಗಾರ್ಡ್ ಮುರ್ತುಜಾ ಚಿಗರಾಳ, ಬೋಧಕೇತರ ಸಿಬ್ಬಂದಿ ಸಂಗಮೇಶ ಪಟ್ಟಣಕರ್, ಮಾಸುಮ ಅಲಿ ನಾಶಿ ಸೇರಿದಂತೆ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

# ವರದಿ ಬೆನ್ನಲ್ಲೇ ಸ್ಪಂದನೆ: ನಗರ ರಸ್ತೆ ತಾತ್ಕಾಲಿಕ ದುರಸ್ತಿ



**ಹಳಿಯಾಳ:** ಹಳಿಯಾಳ ಪಟ್ಟಣದ ಶಿವಾಜಿ ವೃತ್ತದಿಂದ ದೇಶಪಾಂಡೆ ನಗರದವರೆಗಿನ ಜನನಿಬಿಡ ರಸ್ತೆಯ ದುರವಸ್ಥೆಯ ಬಗ್ಗೆ ಮಲ್ಲಮ್ಮ ನುಡಿ ದಿನಪತ್ರಿಕೆ ವರದಿ ಪ್ರಕಟಗೊಂಡ ಬೆನ್ನಲ್ಲೇ ಸಂಬಂಧಪಟ್ಟ ಇಲಾಖೆ ತಕ್ಷಣ ಸ್ಪಂದಿಸಿದೆ.

ಲೋಕೋಪಯೋಗಿ ಇಲಾಖೆಯ AEE ಶ್ರೀ ಸಂತೋಷ್ ಅಥಣಿ ಅವರು ಸ್ಥಳಕ್ಕೆ ಭೇಟಿ ನೀಡಿ, ರಸ್ತೆಯಲ್ಲಿದ್ದ ದೊಡ್ಡ–ದೊಡ್ಡ ಗುಂಡಿಗಳನ್ನು ತಕ್ಷಣ ತಾತ್ಕಾಲಿಕವಾಗಿ ಮುಚ್ಚಿಸುವ ಕಾಮಗಾರಿಯನ್ನು ಕೈಗೆತ್ತಿಕೊಂಡರು. ಇದರಿಂದ ಸ್ವಾಮಿ ವಿವೇಕಾನಂದ ಶಿಕ್ಷಣ ಸಂಸ್ಥೆಯ ವಿದ್ಯಾರ್ಥಿಗಳು, ಬಸ್ ಡಿಪೋಗೆ ಹೋಗುವ ಪ್ರಯಾಣಿಕರು ಮತ್ತು ಸುತ್ತಮುತ್ತಲಿನ ಸಾವಿರಾರು ಸಾರ್ವಜನಿಕರಿಗೆ ಸುಗಮ ಸಂಚಾರಕ್ಕೆ ಅನುಕೂಲವಾಗಿದೆ. ಮಾಧ್ಯಮಗಳ ವರದಿಗೆ ತಕ್ಷಣ ಸ್ಪಂದಿಸಿ ಸಮಸ್ಯೆ ಬಗೆಹರಿಸಿದ AEE ಸಂತೋಷ್ ಅಥಣಿ ಅವರ ಕಾರ್ಯಕ್ಕೆ ಸಾರ್ವಜನಿಕರು ಹಾಗೂ ಸ್ಥಳೀಯರು ಅಭಿನಂದನೆಗಳನ್ನು ಸಲ್ಲಿಸಿದ್ದಾರೆ. ಶಾಶ್ವತ ರಸ್ತೆ ದುರಸ್ತಿಯೂ ಶೀಘ್ರದಲ್ಲಿ ಆಗಬೇಕು ಎಂಬುದು ಜನರ ಒತ್ತಾಯವಾಗಿದೆ.

# ಆತ್ಮಸಾಕ್ಷಾತ್ಕಾರಕ್ಕೆ ಪುರಾಣ ಶ್ರವಣ ಅಗತ್ಯ: ಶ್ರೀ ಭುವನೇಶ್ವರಯ್ಯ ತಾತ



**ಗಂಗಾವತಿ:** ನಗರದ ಐತಿಹಾಸಿಕ ಕಲ್ಮಠದಲ್ಲಿ ಲಿಂಗೈಕ್ಯ ಶ್ರೀ ಕೊಟ್ಟೂರೇಶ್ವರ ಮಹಾಶಿವಯೋಗಿಗಳವರ 105ನೇ ಸ್ಮರಣೋತ್ಸವ, ಶ್ರೀ ಚನ್ನಬಸವ ಶಿವಯೋಗಿಗಳವರ ಪುರಾಣ ಪ್ರವಚನ ಹಾಗೂ ಶರಣ ಸಂಸ್ಕೃತಿ ಉತ್ಸವಕ್ಕೆ ಸೋಮವಾರ ಭವ್ಯ ಚಾಲನೆ ನೀಡಲಾಯಿತು.

ಸುಳೇಕಲ್ ಬೃಹನ್ಮಠದ ಶ್ರೀ ಭುವನೇಶ್ವರಯ್ಯ ತಾತ ಅವರು ಜ್ಯೋತಿ ಬೆಳಗಿಸುವ ಮೂಲಕ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ಇಂದಿನ ಕಲಿಯುಗದಲ್ಲಿ ಮಾನವೀಯ ಮೌಲ್ಯಗಳು ಕ್ಷೀಣಿಸುತ್ತಿರುವ ಸಂದರ್ಭದಲ್ಲಿ ಮಹಾನ್ ಸಂತರು ಹಾಗೂ ಗುರುಪರಂಪರೆಯ ದೈವತ್ವವನ್ನು ಸಾರುವ ಪುರಾಣಗಳನ್ನು ಶ್ರವಣ ಮಾಡುವ ಮೂಲಕ ಆತ್ಮಸಾಕ್ಷಾತ್ಕಾರವನ್ನು ಹೊಂದುವ ಅಗತ್ಯವಿದೆ ಎಂದು ಹೇಳಿದರು.

ಕಾರ್ಯಕ್ರಮದ ದಿವ್ಯ ಸಾನಿಧ್ಯ ವಹಿಸಿದ್ದ ಕಂಪ್ಲಿ ಕಲ್ಮಠದ ಅಭಿನವ ಪ್ರಭು ಮಹಾಸ್ವಾಮಿಗಳು ಆಶೀರ್ವಚನ ನೀಡಿ, ಕಂಪ್ಲಿ ಕಲ್ಮಠ ಮತ್ತು ಗಂಗಾವತಿ ಕಲ್ಮಠಗಳ ನಡುವೆ ಅವಿನಾಭಾವ ಸಂಬಂಧವಿದೆ. ಕಲ್ಮಠದ ಡಾ. ಕೊಟ್ಟೂರು ಮಹಾಸ್ವಾಮಿಗಳ ನೇತೃತ್ವದಲ್ಲಿ ಜ್ಞಾನದಾಸೋಹ, ಅನ್ನದಾಸೋಹ ಹಾಗೂ ಸಂಗೀತ ಶಾಲೆಯ ಮೂಲಕ ಸಮಾಜಮುಖಿ ಸೇವಾ ಕಾರ್ಯಗಳು ಯಶಸ್ವಿಯಾಗಿ ನಡೆಯುತ್ತಿವೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು. ಈ ಸಂದರ್ಭದಲ್ಲಿ ಪಂಡಿತ್ ಶಿವರಾಜ್ ಶಾಸ್ತ್ರಿ ಅವರಿಂದ ಪುರಾಣ ಪ್ರವಚನ ನಡೆಯಿತು. ಕಾರ್ಯಕ್ರಮದಲ್ಲಿ ರೇವಣಸಿದ್ದಯ್ಯ ತಾತ, ಡಾ. ಶರಣಬಸಪ್ಪ ಕೋಲ್ಕಾರ್, ಶರಣೇಗೌಡ ಮಾಲಿ ಪಾಟೀಲ್, ದುರ್ಗಪ್ಪ ದಳಪತಿ ಸೇರಿದಂತೆ ಹಲವಾರು ಗಣ್ಯರು ಹಾಗೂ ಅಪಾರ ಸಂಖ್ಯೆಯ ಭಕ್ತರು ಭಾಗವಹಿಸಿದ್ದರು.

ಕಾರ್ಯಕ್ರಮದ ನೇತೃತ್ವವನ್ನು ಕಲ್ಮಠದ ಡಾ. ಕೊಟ್ಟೂರು ಮಹಾಸ್ವಾಮಿಗಳು ವಹಿಸಿದ್ದರು. ಶರಣ ಸಂಸ್ಕೃತಿ ಉತ್ಸವದ ಅಂಗವಾಗಿ ವಿವಿಧ ಧಾರ್ಮಿಕ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯಲಿದ್ದು, ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳುವಂತೆ ಮಠದ ವತಿಯಿಂದ ಮನವಿ ಮಾಡಲಾಗಿದೆ.

# ಸಂಘಟನೆ ಸೃಜನ್ ಅಭಿಯಾನ: ಕಾಂಗ್ರೆಸ್ ಜಿಲ್ಲಾಧ್ಯಕ್ಷರ ನೇಮಕ

• ಮಲ್ಲಮ್ಮ ನುಡಿ ವಾರ್ತೆ ಬೀದರ್

ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಪಕ್ಷವು ದೇಶಾದ್ಯಂತ ಸಂಘಟನಾ ಬಲವರ್ಧನೆಗಾಗಿ "ಸಂಘಟನೆ ಸೃಜನ್ ಅಭಿಯಾನ"ವನ್ನು ಆರಂಭಿಸಿದ್ದು, ಇದರ ಮೂಲಕ ಬೀದರ್ ಸೇರಿದಂತೆ ರಾಜ್ಯದಲ್ಲಿ ಎಲ್ಲ ಜಿಲ್ಲಾಧ್ಯಕ್ಷರನ್ನು ನೇಮಕ ಮಾಡಲಾಗುವುದೆಂದು ಎಐಸಿಸಿ ವೀಕ್ಷಕರು ಹಾಗೂ ಮಾಜಿ ಶಾಸಕ ರಾಜೇಶ ಲಿಲೋಥಿಯಾ ತಿಳಿಸಿದರು.



ನಗರದ ಜಿಲ್ಲಾ ಪತ್ರಿಕಾ ಭವನದಲ್ಲಿ ಮಂಗಳವಾರ ಪತ್ರಿಕಾಗೋಷ್ಠಿ ಉದ್ದೇಶಿಸಿ ಮಾತನಾಡಿರುವ ಅವರು, ಜಿಲ್ಲಾ ಕಾಂಗ್ರೆಸ್ ಸಮಿತಿ (ಡಿಸಿಸಿ)ಯ ಪುನರ್‌ರಚನೆ ಹಾಗೂ ಸಂಘಟನೆಯನ್ನು ತಳಮಟ್ಟದಿಂದ ಮತ್ತಷ್ಟು ಬಲಪಡಿಸುವ ಉದ್ದೇಶದಿಂದ ಜಿಲ್ಲೆಯ ಹಿರಿಯ ಕಾಂಗ್ರೆಸ್ ನಾಯಕರು, ಹಾಲಿ ಹಾಗೂ ಮಾಜಿ ಜನಪ್ರತಿನಿಧಿಗಳು, ಜಿಲ್ಲಾ ಮತ್ತು ಬ್ಲಾಕ್ ಕಾಂಗ್ರೆಸ್ ಪದಾಧಿಕಾರಿಗಳು, ವಿವಿಧ ಮುಂಚೂಣಿ ಘಟಕಗಳು, ಪ್ರಕೋಷ್ಠಗಳು, ಮಹಿಳಾ ಕಾಂಗ್ರೆಸ್, ಯುವ ಕಾಂಗ್ರೆಸ್, ಎನ್‌ಎಸ್‌ಯುಐ, ಸೇವಾದಳ, ಅಲ್ಪಸಂಖ್ಯಾತ, ಎಸ್‌ಸಿ, ಎಸ್‌ಟಿ ಹಾಗೂ ಒಬಿಸಿ ವಿಭಾಗಗಳ ಪ್ರತಿನಿಧಿಗಳು ಮತ್ತು ತಳಮಟ್ಟದ ಕಾರ್ಯಕರ್ತರೊಂದಿಗೆ ಸಮಗ್ರ ಸಮಾಲೋಚನೆ ನಡೆಸಲಿದ್ದೇವೆ. ಅದಕ್ಕಾಗಿ ಪ್ರತ್ಯೇಕ ಅರ್ಜಿ ತಯ್ಯಾರಿಸಲಾಗಿದ್ದು, ನಿಷ್ಠಾವಂತ ಕಾರ್ಯಕರ್ತರು ಯಾರಾದರೂ ಸಹ ಅದನ್ನು ಭರ್ತಿ ಮಾಡಿ ಎಐಸಿಸಿ ಘಟಕಕ್ಕೆ ಒಪ್ಪಿಸಬೇಕು ಎಂದರು.

ಅಭಿಯಾನದ ಮುಖ್ಯ ಉದ್ದೇಶ ಪಕ್ಷದ ಸಂಘಟನೆಯನ್ನು ಇನ್ನಷ್ಟು ಬಲಿಷ್ಠ, ಪಾರದರ್ಶಕ, ಪ್ರಜಾಸತ್ತಾತ್ಮಕ, ಉತ್ತರದಾಯಿತ್ವ ಹಾಗೂ ಜನ ಕೇಂದ್ರಿತವಾಗಿಸುವುದಾಗಿದೆ. ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷರ ಆಯ್ಕೆಗೆ ಮಾತ್ರ ಸೀಮಿತವಾಗದೆ, ಜಿಲ್ಲಾ, ಬ್ಲಾಕ್, ಮಂಡಲ ಹಾಗೂ ಗ್ರಾಮ ಮಟ್ಟದ ಸಂಘಟನೆಗಳನ್ನು ಪುನರ್‌ರಚಿಸಿ ಜನಸೇವೆಗೆ ಬದ್ಧವಾದ ಪರಿಣಾಮಕಾರಿ ಸಂಘಟನಾ ವ್ಯವಸ್ಥೆಯನ್ನು ನಿರ್ಮಿಸುವುದು ಇದರ ಗುರಿಯಾಗಿದೆ ಎಂದರು.

ಸಮಾಲೋಚನಾ ಸಭೆಗಳಲ್ಲಿ ವ್ಯಕ್ತವಾಗುವ ಕಾರ್ಯಕರ್ತರ ಅಭಿಪ್ರಾಯಗಳು, ಸಲಹೆಗಳು ಹಾಗೂ ಶಿಫಾರಸುಗಳನ್ನು ಸಂಗ್ರಹಿಸಿ ಸಮಗ್ರ ವರದಿಯನ್ನು ಎಐಸಿಸಿಗೆ ಸಲ್ಲಿಸಲಾಗುವುದು. ಸಂಘಟನೆಯ ಪ್ರತಿಯೊಂದು ಹಂತದಲ್ಲೂ ಪಾರದರ್ಶಕತೆ, ನ್ಯಾಯಸಮ್ಮತತೆ ಹಾಗೂ ಆಂತರಿಕ ಪ್ರಜಾಪ್ರಭುತ್ವದ ತತ್ವಗಳನ್ನು ಅನುಸರಿಸಲಾಗುವುದು ಎಂದು ತಿಳಿಸಿದರು.

ಎಲ್ಲಾ ಅಧ್ಯಕ್ಷರ ನೇಮಕದಲ್ಲಿ ಯುವಕರಿಗೆ ಹೆಚ್ಚಿನ ಅವಕಾಶ ಕಲ್ಪಿಸುವುದು, ಮಹಿಳೆಯರಿಗೆ ಸಮರ್ಪಕ ಪ್ರಾತಿನಿಧ್ಯ ನೀಡುವುದು ಹಾಗೂ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಇತರೆ ಹಿಂದುಳಿದ ವರ್ಗಗಳು, ಅಲ್ಪಸಂಖ್ಯಾತರು ಮತ್ತು ಸಮರ್ಪಿತ ಕಾಂಗ್ರೆಸ್ ಕಾರ್ಯಕರ್ತರಿಗೆ ಸೂಕ್ತ ಸ್ಥಾನಮಾನ ಕಲ್ಪಿಸುವ ಗುರಿ ಹೊಂದಲಾಗಿದೆ ಎಂದವರು ಹೇಳಿದರು. ಭಾರತ ಜೋಡೋ ಯಾತ್ರೆ ಹಾಗೂ ಭಾರತ ಜೋಡೋ ನ್ಯಾಯ ಯಾತ್ರೆಯ ಸ್ಫೂರ್ತಿಯಿಂದ ಪ್ರೇರಿತವಾಗಿರುವ ಈ ಅಭಿಯಾನವು ಸಂವಿಧಾನ, ಸಾಮಾಜಿಕ ನ್ಯಾಯ, ಧರ್ಮ ನಿರಪೇಕ್ಷತೆ, ಸಮಾನತೆ ಮತ್ತು ಪ್ರಜಾಸತ್ತಾತ್ಮಕ ಮೌಲ್ಯಗಳನ್ನು ಮತ್ತಷ್ಟು ಬಲಪಡಿಸುವ ಉದ್ದೇಶ ಹೊಂದಿದೆ ಎಂದರು.

ಕಾಂಗ್ರೆಸ್ ಪಕ್ಷದ ದೃಢನಂಬಿಕೆಯಂತೆ ಸಂಘಟನೆಯ ನಿಜವಾದ ಶಕ್ತಿ ತಳಮಟ್ಟದ ಕಾರ್ಯಕರ್ತರಲ್ಲಿದೆ. ಆದ್ದರಿಂದ ಪ್ರತಿಯೊಬ್ಬ ಕಾಂಗ್ರೆಸ್ ಕಾರ್ಯಕರ್ತರೂ ಸಂಘಟನೆಯನ್ನು ಮತ್ತಷ್ಟು ಬಲಿಷ್ಠಗೊಳಿಸುವಲ್ಲಿ ಮಹತ್ವದ ಪಾತ್ರ ವಹಿಸುತ್ತಾರೆ. ಅಭಿಯಾನವು ಪ್ರತಿಯೊಂದು ಘಟಕವನ್ನು ಹೆಚ್ಚು ಸಕ್ರಿಯ, ಶಿಸ್ತುಬದ್ಧ, ಜವಾಬ್ದಾರಿಯುತ, ಪರಿಣಾಮಕಾರಿ ಹಾಗೂ ಜನಸ್ನೇಹಿಯಾಗಿಸುವ ಸಮಗ್ರ ಸಂಘಟನಾ ಪರಿವರ್ತನಾ ಕಾರ್ಯಕ್ರಮವಾಗಿದ್ದು, ಇದರಿಂದ ದೇಶದ ಪ್ರತಿಯೊಂದು ಹಳ್ಳಿ ಹಾಗೂ ಪ್ರದೇಶದಲ್ಲಿ ಕಾಂಗ್ರೆಸ್ ಪಕ್ಷವನ್ನು ಇನ್ನಷ್ಟು ಬಲಿಷ್ಠಗೊಳಿಸುವುದಾಗಿದೆ ಎಂದರು.

# ಮಳೆಗಾಗಿ ವಿದ್ಯಾರ್ಥಿಗಳಿಂದ ಪ್ರಾರ್ಥನೆ

• ಮಲ್ಲಮ್ಮ ನುಡಿ ವಾರ್ತೆ ಶ್ರೀರಾಮನಗರ

ಉತ್ತರ ಕರ್ನಾಟಕದಲ್ಲಿ ತೀವ್ರ ಮಳೆ ಕೊರತೆ ಹಾಗೂ ಬರಗಾಲದ ಪರಿಸ್ಥಿತಿ ಹಿನ್ನೆಲೆಯಲ್ಲಿ ಶ್ರೀರಾಮನಗರ ಸಮೀಪದ ಶ್ರೀ ಸ್ವಾಮಿ ವಿವೇಕಾನಂದ ಆಂಗ್ಲ ಮಾಧ್ಯಮ ಶಾಲೆ ವಿದ್ಯಾರ್ಥಿಗಳು ವಿಶಿಷ್ಟ ಜನಪದ ಆಚರಣೆಯಾದ ಗುರ್ಜಿ ಪೂಜೆ ನಡೆಸಿ ಮಳೆಗಾಗಿ ವಿಶೇಷ ಪ್ರಾರ್ಥನೆ ಸಲ್ಲಿಸಿದರು.

ಗುರ್ಜಿ ವೇಷಧರಿಸಿ, ಬೇವಿನ ಸೊಪ್ಪು ಕಟ್ಟಿಕೊಂಡ ವಿದ್ಯಾರ್ಥಿಗಳು 'ಗುರ್ಜಿ ಗುರ್ಜಿ ಎಲ್ಲಾಡಿ ಬಂದೆ', 'ಹುಯ್ಯೋ ಹುಯ್ಯೋ ಮಳೆರಾಯ' ಎಂದು ಹಾಡುತ್ತಾ ಕುಣಿದು ವರುಣ ದೇವರನ್ನು ಪ್ರಾರ್ಥಿಸಿದರು. ಕಾರ್ಯಕ್ರಮದ ಮೂಲಕ ರೈತರ ಸಂಕಷ್ಟಕ್ಕೆ ಸ್ಪಂದಿಸಿ ಉತ್ತಮ ಮಳೆಯಾಗಲಿ ಎಂಬ ಸಂದೇಶ ಸಾರಿದರು. ಶಾಲೆಯ ಮುಖ್ಯ ಕಾರ್ಯದರ್ಶಿ ಜಗನ್ನಾಥ್ ಆಲಂಪಲ್ಲಿ ಮಾತನಾಡಿ, ಉತ್ತರ ಕರ್ನಾಟಕದಲ್ಲಿ ಶೇ.61ರಷ್ಟು ಮಳೆ ಕೊರತೆಯಿದ್ದು, ಶ್ರೀರಾಮನಗರ



ಸುತ್ತಮುತ್ತಲಿನ ಪ್ರದೇಶದ ಶೇ.80ರಷ್ಟು ಜನರು ಕೃಷಿಯನ್ನೇ ಅವಲಂಬಿಸಿದ್ದಾರೆ. ರೈತರ ಬದುಕು ಹಸನಾಗಲಿ ಎಂಬ ಉದ್ದೇಶದಿಂದ ವಿದ್ಯಾರ್ಥಿಗಳಿಂದ ಈ ವಿಶೇಷ ಪ್ರಾರ್ಥನೆ ಆಯೋಜಿಸಲಾಗಿದೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಹಿರಿಯ ಶಿಕ್ಷಕರಾದ ಶಾಂತಿ, ರವಿಕುಮಾರ್, ಜಗದೀಶ್, ಲಾವಣ್ಯ ಸೇರಿದಂತೆ ಶಾಲೆಯ ಶಿಕ್ಷಕರು ಹಾಗೂ ವಿದ್ಯಾರ್ಥಿಗಳು ಮಳೆಗಾಗಿ ಸಾಮೂಹಿಕವಾಗಿ ಪ್ರಾರ್ಥನೆ ಸಲ್ಲಿಸಿದರು.

# ನಿಷ್ಪಕ್ಷಪಾತ ತನಿಖೆಗೆ ಸರ್ಕಾರ ಬದ್ಧ: ಸಚಿವ

• ಮಲ್ಲಮ್ಮ ನುಡಿ ವಾರ್ತೆ ಬೆಂಗಳೂರು

ಕರ್ನಾಟಕ ಲೋಕಸೇವಾ ಆಯೋಗ (ಕೆಪಿಎಸ್‌ಸಿ) ಸಂಬಂಧ ಸಾರ್ವಜನಿಕ ಪರೀಕ್ಷೆ ಹಾಗೂ ನೇಮಕಾತಿ ಪ್ರಕ್ರಿಯೆಯಲ್ಲಿ ಅಕ್ರಮಗಳು ನಡೆದಿರುವ ಆರೋಪಗಳ ಕುರಿತು ದಾಖಲಾಗಿರುವ ಎರಡು ಪ್ರಕರಣಗಳ ತನಿಖೆಯನ್ನು ಅಪರಾಧ ತನಿಖಾ ಇಲಾಖೆ (ಸಿಐಡಿ)ಗೆ ವರ್ಗಾಯಿಸಲಾಗಿದೆ ಎಂದು ಗೃಹ ಸಚಿವ ಪ್ರಿಯಾಂಕ್ ಖರ್ಗೆ ತಿಳಿಸಿದ್ದಾರೆ.



ಬೆಂಗಳೂರಿನ ವಿಧಾನಸೌಧ ಪೊಲೀಸ್ ಠಾಣೆಯಲ್ಲಿ ಕರ್ನಾಟಕ ಸಾರ್ವಜನಿಕ ಪರೀಕ್ಷೆ (ಭ್ರಷ್ಟಾಚಾರ ಮತ್ತು ನೇಮಕಾತಿಯಲ್ಲಿನ ಅನ್ಯಾಯದ ವಿಧಾನಗಳ ತಡೆ) ಅಧಿನಿಯಮ, 2023ರ ಕಲಂ 10ರಡಿ ದಾಖಲಾಗಿರುವ ಎರಡು ಪ್ರಕರಣಗಳ ಕುರಿತು ನ್ಯಾಯಸಮ್ಮತ, ನಿಷ್ಪಕ್ಷಪಾತ ಹಾಗೂ ಸಮಗ್ರ ತನಿಖೆ ನಡೆಯುವ ಉದ್ದೇಶದಿಂದ ಈ ಕ್ರಮ ಕೈಗೊಳ್ಳಲಾಗಿದೆ ಎಂದು ಸಚಿವರು ತಿಳಿಸಿದ್ದಾರೆ.

ಸಾರ್ವಜನಿಕ ನೇಮಕಾತಿ ಪ್ರಕ್ರಿಯೆಯ ಪಾವಿತ್ರ್ಯ, ವಿಶ್ವಾಸಾರ್ಹತೆ ಮತ್ತು ಪಾರದರ್ಶಕತೆಯನ್ನು ಕಾಪಾಡುವುದು ರಾಜ್ಯ ಸರ್ಕಾರದ ಅಚಲ ಬದ್ಧತೆಯಾಗಿದೆ ಎಂದು ಅವರು ಹೇಳಿದ್ದಾರೆ.

ಪರೀಕ್ಷೆಗಳು ಅಥವಾ ನೇಮಕಾತಿ ಪ್ರಕ್ರಿಯೆಯಲ್ಲಿ ಭ್ರಷ್ಟಾಚಾರ, ಅಕ್ರಮ, ಅಕ್ರಮ ವಿಧಾನಗಳು ಅಥವಾ ಯಾವುದೇ ರೀತಿಯ ದುರುಪಯೋಗ ನಡೆದಿರುವ ಆರೋಪಗಳು ಕಂಡುಬಂದರೆ, ಅವುಗಳನ್ನು ಯಾವುದೇ ವ್ಯಕ್ತಿಯ ಸ್ಥಾನಮಾನವನ್ನು ಪರಿಗಣಿಸದೆ, ನಿರ್ಭಯವಾಗಿ ಮತ್ತು ನಿಷ್ಪಕ್ಷಪಾತವಾಗಿ ತನಿಖೆ ನಡೆಸಿ, ತಪ್ಪಿತಸ್ಥರ ವಿರುದ್ಧ ಕಾನೂನು ಪ್ರಕಾರ ಕಠಿಣ ಕ್ರಮ ಕೈಗೊಳ್ಳಲಾಗುವುದು ಎಂದು ಸಚಿವರು ಸ್ಪಷ್ಟಪಡಿಸಿದ್ದಾರೆ.

ಪ್ರಕರಣಗಳನ್ನು ಸಿಐಡಿಗೆ ವರ್ಗಾಯಿಸಿರುವುದು ಸ್ವತಂತ್ರ, ಪಾರದರ್ಶಕ ಹಾಗೂ ವಿಶ್ವಾಸಾರ್ಹ ತನಿಖೆ ನಡೆಸುವ ಸರ್ಕಾರದ ದೃಢ ಸಂಕಲ್ಪದ ಪ್ರತೀಕವಾಗಿದೆ ಎಂದು ಅವರು ತಿಳಿಸಿದ್ದಾರೆ.

# ಲೋಕಕಲ್ಯಾಣ, ಮಳೆ–ಬೆಳೆ ಸಮೃದ್ಧಿಗಾಗಿ ವಿಶೇಷ ಪೂಜೆ

• ಮಲ್ಲಮ್ಮ ನುಡಿ ವಾರ್ತೆ ಗಂಗಾವತಿ

ನಗರದ ಸಾಯಿನಗರದಲ್ಲಿರುವ 26ನೇ ವರ್ಷದ ಶ್ರೀ ಶಿರಡಿ ಸಾಯಿಬಾಬಾ ದೇವಸ್ಥಾನದಲ್ಲಿ ಗುರು ಪೂರ್ಣಿಮಾ ಅಂಗವಾಗಿ ಬುಧವಾರ ದಿನಪೂರ್ತಿ ವಿಶೇಷ ಧಾರ್ಮಿಕ ಹಾಗೂ ಆಧ್ಯಾತ್ಮಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ ಎಂದು ಶ್ರೀ ಶಿರಡಿ ಸಾಯಿಬಾಬಾ ಚಾರಿಟೇಬಲ್ ಟ್ರಸ್ಟ್ ಅಧ್ಯಕ್ಷ ಜಿ. ರಾಮಕೃಷ್ಣ ತಿಳಿಸಿದ್ದಾರೆ.

ದೇವಸ್ಥಾನದಲ್ಲಿ ಮಾಧ್ಯಮಗೋಷ್ಠಿಯಲ್ಲಿ ಮಾತನಾಡಿದ ಅವರು, ಲೋಕಕಲ್ಯಾಣ, ರಾಜ್ಯದಲ್ಲಿ ಸಕಾಲಕ್ಕೆ ಉತ್ತಮ ಮಳೆಯಾಗಿ ಬೆಳೆ ಸಮೃದ್ಧಿಯಾಗಲಿ, ರೈತರು ನೆಮ್ಮದಿಯ ಬದುಕು ಸಾಗಿಸಲಿ ಹಾಗೂ ಜನರಲ್ಲಿ ಸುಖ, ಶಾಂತಿ ಮತ್ತು ಸಮೃದ್ಧಿ ನೆಲೆಸಲಿ ಎಂಬ ಉದ್ದೇಶದಿಂದ ವಿವಿಧ ಧಾರ್ಮಿಕ ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ ಎಂದು ಹೇಳಿದರು.



ಗುರು ಪೂರ್ಣಿಮೆಯ ಕಾರ್ಯಕ್ರಮವು ಬೆಳಿಗ್ಗೆ 5.15 ಗಂಟೆಗೆ ಕಾಕಡ ಆರತಿಯೊಂದಿಗೆ ಆರಂಭವಾಗಲಿದೆ. ಬಳಿಕ ಪಂಚಾಮೃತಾಭಿಷೇಕ, ವಿಶೇಷ ಅಲಂಕಾರ ಪೂಜೆ, ಪುಷ್ಪಾರ್ಚನೆ, ವೈವಿಧ್ಯಮಯ ಹೂವಿನ ಅಲಂಕಾರ, ನವಗ್ರಹ ದೋಷ ಪರಿಹಾರ ಪಾರಾಯಣ, ಪಾಲಕಿ ಉತ್ಸವ, ಭಜನಾ ಕಾರ್ಯಕ್ರಮ, ಮಹಾಮಂಗಳಾರತಿ, ತೀರ್ಥ ಪ್ರಸಾದ ಹಾಗೂ ಮಹಾಪ್ರಸಾದ ವಿತರಣೆ ಸೇರಿದಂತೆ ಹಲವು ಧಾರ್ಮಿಕ ಕಾರ್ಯಕ್ರಮಗಳು ನಡೆಯಲಿವೆ ಎಂದು ಮಾಹಿತಿ ನೀಡಿದರು.

ಸುಮಾರು 10,000ಕ್ಕೂ ಹೆಚ್ಚು ಭಕ್ತರಿಗೆ ಅನ್ನಸಂತರ್ಪಣೆ ವ್ಯವಸ್ಥೆ ಮಾಡಲಾಗಿದ್ದು, ಸುತ್ತಮುತ್ತಲಿನ ಜಿಲ್ಲೆಗಳ ಭಕ್ತರು ಸಹ ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸುವ ನಿರೀಕ್ಷೆಯಿದೆ ಎಂದರು.

ದೇವಸ್ಥಾನದ ಅರ್ಚಕ ವೆಂಕಟೇಶ್ ಜೋಶಿ ಮಾತನಾಡಿ, ಕಲಿಯುಗದಲ್ಲಿ ಭಕ್ತರ ಇಷ್ಟಾರ್ಥಗಳನ್ನು ಈಡೇರಿಸುವ ದೈವವಾಗಿ ಶ್ರೀ ಶಿರಡಿ ಸಾಯಿಬಾಬಾರನ್ನು ಭಕ್ತರು ಆರಾಧಿಸುತ್ತಾರೆ. ಸಾಯಿಬಾಬಾ ಅವರು ಶ್ರೀ ದತ್ತಾತ್ರೇಯರ ಅವತಾರ ಎಂಬ ನಂಬಿಕೆ ಭಕ್ತರಲ್ಲಿ ಗಟ್ಟಿಯಾಗಿದೆ. ದೇವಸ್ಥಾನದಲ್ಲಿ ನಡೆಯುತ್ತಿರುವ 'ಶ್ರೀ ಸಾಯಿರಾಮ್ ಕೋಟಿ ಜಪ ಬರಹ' ಮಹಾಸಂಕಲ್ಪ ಭಕ್ತರಲ್ಲಿ ಉತ್ತಮ ಸ್ಪಂದನೆ ಪಡೆದಿದ್ದು, ಮುಂದಿನ ಗುರು ಪೂರ್ಣಿಮೆಯೊಳಗೆ ಜಪ ಬರಹವನ್ನು ಪೂರ್ಣಗೊಳಿಸಿ ವಿಶೇಷ ಹೋಮದ ಮೂಲಕ ಸಮರ್ಪಿಸಲಾಗುವುದು ಎಂದು ತಿಳಿಸಿದರು.

ಗುರು ಪೂರ್ಣಿಮೆಯಂದು ಬೆಳಗ್ಗಿನಿಂದ ಸಂಜೆವರೆಗೆ ಒಟ್ಟು ಐದು ಮಹಾ ಆರತಿಗಳು ನಡೆಯಲಿದ್ದು, ಭಕ್ತರು ಕುಟುಂಬ ಸಮೇತರಾಗಿ ಆಗಮಿಸಿ ಶ್ರೀ ಶಿರಡಿ ಸಾಯಿಬಾಬಾರ ದರ್ಶನ ಪಡೆದು ಆಶೀರ್ವಾದ ಪಡೆಯುವಂತೆ ಮನವಿ ಮಾಡಿದರು.

ಈ ಸಂದರ್ಭದಲ್ಲಿ ದೇವಸ್ಥಾನ ಸಮಿತಿಯ ಸದಸ್ಯರಾದ ಹನುಮಂತಯ್ಯ ಶೆಟ್ಟಿ, ಪ್ರಹ್ಲಾದ್, ಸುರೇಶ್, ಕಿರಣ್, ಗುರುರಾಜ್, ರಾಮಚಂದ್ರ ಶೆಟ್ಟಿ, ಕಲ್ಕಿ ಮೂರ್ತಿ, ನಮಃ ಶಿವಾಯ, ಕೃಷ್ಣಮೂರ್ತಿ ಸೇರಿದಂತೆ ಹಲವಾರು ಭಕ್ತರು ಹಾಗೂ ಟ್ರಸ್ಟ್ ಸದಸ್ಯರು ಉಪಸ್ಥಿತರಿದ್ದರು.

# ಮತಿ ಮತ್ತು ಮನಸ್ಸು–ಶೃತಿಗೆ ಸಂಜೀವಿನಿ



**ಜನ–ಜಾಗೃತಿ**

● ಎಂ.ಪಿ ಎಂ.ಕೊಟ್ರಯ್ಯ
ಹೂವಿನ ಹಡಗಲಿ

ಮತಿ ಮತ್ತು ಮನಸ್ಸು ಇವೆರಡೂ ಮಾನವ ಜೀವನವನ್ನು ಮುನ್ನಡೆಸುವ ಅತ್ಯಂತ ಪ್ರಮುಖ ಆಂತರಿಕ ಶಕ್ತಿಗಳು. ಸಾಮಾನ್ಯ ಮಾತುಕತೆಯಲ್ಲಿ ಇವೆರಡನ್ನೂ ಒಂದೇ ಎಂಬಂತೆ ಬಳಸಿದರೂ, ಇವುಗಳ ಸ್ವರೂಪ, ಕೆಲಸ ಮತ್ತು ಪ್ರಭಾವದಲ್ಲಿ ಸೂಕ್ಷ್ಮ ಹಾಗೂ ಆಳವಾದ ವ್ಯತ್ಯಾಸಗಳಿವೆ ಎಂಬ ಅರಿವು ನಮಗೆ ಗೋಚರಿಸದು.

ಮನಸ್ಸು ಎಂದರೆ ಭಾವನೆಗಳು, ಆಸೆಗಳು, ಕಲ್ಪನೆಗಳು ಮತ್ತು ಚಾಂಚಲ್ಯದ ಕೇಂದ್ರ. ಇದು ಸದಾ ಹರಿಯುವ ನದಿಯಂತೆ. ಪ್ರೀತಿ, ಕೋಪ, ಭಯ, ಸಂತೋಷ, ದುಃಖ, ಆಕರ್ಷಣೆ ಮುಂತಾದ ಭಾವನೆಗಳು ಮನಸ್ಸಿನಲ್ಲಿ ಹುಟ್ಟುತ್ತವೆ. ಇದು ಭೂತಕಾಲದ ನೆನಪುಗಳು ಮತ್ತು ಭವಿಷ್ಯದ ಕಲ್ಪನೆಗಳಲ್ಲಿ ತೇಲಾಡುತ್ತಿರುತ್ತದೆ. ಮನಸ್ಸಿಗೆ ಸ್ವಯಂ ನಿಯಂತ್ರಣ ಕಡಿಮೆ. ಅದು ತಕ್ಷಣದ ಸುಖ ಅಥವಾ ಆಕರ್ಷಣೆಗೆ ಬೇಗನೆ ಮಣಿಯುತ್ತದೆ.

ಮತಿ ಎಂದರೆ ಬುದ್ಧಿಶಕ್ತಿ, ವಿವೇಕ, ತರ್ಕ ಮತ್ತು ನಿರ್ಣಯ ತೆಗೆದುಕೊಳ್ಳುವ ಕ್ಷಮತೆ. ಇದು ಸರಿ–ತಪ್ಪು, ಹಿತ–ಅಹಿತಗಳನ್ನು ವಿವೇಚಿಸಿ ನೋಡುವ ನ್ಯಾಯಾಧೀಶರಿದ್ದಂತೆ. ಮನಸ್ಸಿನಲ್ಲಿ ಏಳುವ ಭಾವನೆಗಳನ್ನು ವಿಶ್ಲೇಷಿಸಿ, ಯಾವುದು ಸರಿ ಯಾವುದು ತಪ್ಪು ಎಂದು ನಿರ್ಣಯಿಸಿ, ಸೂಕ್ತ ಮಾರ್ಗವನ್ನು ತೋರಿಸುವುದೇ 'ಮತಿ' ಅಥವಾ ವಿವೇಕದ ಕೆಲಸ.

**ಭಗವದ್ಗೀತೆಯಲ್ಲಿ:**

**"ಮನ ಏವ ಮನುಷ್ಯಾಣಾಂ ಕಾರಣಂ ಬಂಧಮೋಕ್ಷಯೋಃ**
**ಬಂಧಾಯ ವಿಷಯಾಸಕ್ತಂ ಮುಕ್ತ್ಯೈ ನಿರ್ವಿಷಯಂ ಸ್ಮೃತಮ್"**

ಅಂದರೆ ಮಾನವನ ಬಂಧನಕ್ಕೂ ಮತ್ತು ಬಿಡುಗಡೆಗೂ (ಉದ್ಧಾರಕ್ಕೂ) ಮನಸ್ಸೇ ಪ್ರಮುಖ ಕಾರಣ. ವಿವೇಕವಿಲ್ಲದೆ ವಿಷಯಾಸಕ್ತವಾದ ಮನಸ್ಸು ಮನುಷ್ಯನನ್ನು ಬಂಧಿಸುತ್ತದೆ; ಮತಿಯ (ವಿವೇಕದ) ಸ್ಪರ್ಶದಿಂದ ನಿಯಂತ್ರಿಸಲ್ಪಟ್ಟ ಮನಸ್ಸು ಶ್ರೇಯಸ್ಸನ್ನು ತರುತ್ತದೆ.

ಜೀವನದ ಮೇಲೆ ಇವುಗಳ ಪ್ರಭಾವ ಅಪಾರ. ಮನಸ್ಸು ಮತ್ತು ಮತಿ ನಮ್ಮ ದಿನನಿತ್ಯದ ನಡವಳಿಕೆ ಹಾಗೂ ಜೀವನದ ದಾರಿಯನ್ನು ಸಂಪೂರ್ಣವಾಗಿ ನಿಯಂತ್ರಿಸುತ್ತವೆ: ನಮ್ಮ ಜೀವನದ ಉತ್ಸಾಹ, ಸೃಜನಶೀಲತೆ, ಕಾವ್ಯ–ಸಾಹಿತ್ಯದ ರಸಗ್ರಹಣೆ, ಕರುಣೆ ಮತ್ತು ಸೌಂದರ್ಯದ ಆಸ್ವಾದನೆಗೆ ಮನಸ್ಸೇ ಕಾರಣ. ಆದರೆ, ಮನಸ್ಸು ಮಾತ್ರವೇ ನಿಯಂತ್ರಣದಲ್ಲಿದ್ದರೆ, ಮನುಷ್ಯ ಚಾಂಚಲ್ಯಕ್ಕೆ ಒಳಗಾಗುತ್ತಾನೆ. ಅತಿಯಾದ ಆಸೆ, ಕೋಪ, ಕ್ಷಣಿಕ ಸುಖದ ಬೆನ್ನತ್ತಿ ಹೋಗಿ ತಪ್ಪುದಾರಿ ತುಳಿಯುವ ಸಾಧ್ಯತೆ ಇರುತ್ತದೆ.

ಮತಿಯ ಪ್ರಭಾವವೂ ಅಷ್ಟೇ ಮುಖ್ಯ. ಜೀವನದಲ್ಲಿ ಶಿಸ್ತು, ಧೈರ್ಯ, ದೀರ್ಘಕಾಲದ ಗುರಿಗಳು ಮತ್ತು ಕಷ್ಟದ ಸಮಯದಲ್ಲಿ ಸರಿಯಾದ ನಿರ್ಧಾರ ತೆಗೆದುಕೊಳ್ಳಲು ಮತಿ ಸಹಾಯ ಮಾಡುತ್ತದೆ. ಆದರೆ, ಮನಸ್ಸಿನ ಭಾವನೆಯೇ ಇಲ್ಲದೆ ಬರಿ ಮತಿ (ಶುಷ್ಕ ತರ್ಕ) ಮಾತ್ರವೇ ಕೆಲಸ ಮಾಡಿದರೆ, ಮನುಷ್ಯ ಯಂತ್ರದಂತಾಗುತ್ತಾನೆ. ಜೀವನದಲ್ಲಿ ಪ್ರೀತಿ, ಕರುಣೆ ಮತ್ತು ಬಾಂಧವ್ಯಗಳ ಸೌಂದರ್ಯ ಕಡಿಮೆಯಾಗುತ್ತದೆ.

ಮನಸ್ಸು ಮತ್ತು ಮತಿ ಇವೆರಡೂ ಒಂದಾಗಿ, ಪರಸ್ಪರ ಸಹಕರಿಸುತ್ತಾ ಸಾಗಿದರೆ ಜೀವನದಲ್ಲಿ ಅದ್ಭುತವಾದ ಸುಧಾರಣೆ ಕಾಣಬಹುದು. ಇವುಗಳ ಸಹಯೋಗದಿಂದ:

ತನ್ನ ಮನಸ್ಸಿನಲ್ಲಿ ಮೂಡುವ ಭಾವನೆಗಳಿಗೆ ಮತಿಯು (ವಿವೇಕ) ಸರಿಯಾದ ದಿಕ್ಕು ತೋರಿಸುತ್ತದೆ. ಕೋಪ ಅಥವಾ ದುಃಖ ಬಂದಾಗ ಮನಸ್ಸು ತತ್ತರಿಸಿದರೆ, ಮತಿಯು ಸಮಾಧಾನ ತಂದುಕೊಟ್ಟು ವಿವೇಕದಿಂದ ವರ್ತಿಸುವಂತೆ ಮಾಡುತ್ತದೆ.

ಮನಸ್ಸಿನ ಕಲ್ಪನೆ/ಆಸೆಗಳಿಗೆ ಮತಿಯ ತರ್ಕ ಮತ್ತು ಅನುಭವದ ಒರೆಗಲ್ಲು ಹಚ್ಚಿದಾಗ ತೆಗೆದುಕೊಳ್ಳುವ ನಿರ್ಧಾರಗಳು ಎಂದಿಗೂ ಕೈಕೊಡುವುದಿಲ್ಲ.

ಮನಸ್ಸಿನ ಚಾಂಚಲ್ಯವನ್ನು ಮತಿಯು ನಿಯಂತ್ರಿಸಿದಾಗ ಆಂತರಿಕ ಶಾಂತಿ ಸಿಗುತ್ತದೆ. ಮನುಷ್ಯ ಅನಗತ್ಯ ಆತಂಕಗಳಿಂದ ದೂರವಿರುತ್ತಾನೆ.

ಸೃಜನಶೀಲ ಕಾರ್ಯಗಳಲ್ಲಿ ಅಥವಾ ಸಾಹಿತ್ಯ ರಚನೆಯಲ್ಲಿ, ಮನಸ್ಸಿನ ಭಾವನಾತ್ಮಕ ಸೌಂದರ್ಯಕ್ಕೆ ಮತಿಯ ಶಬ್ದ–ವಿವೇಚನೆ ಮತ್ತು ತರ್ಕಬದ್ಧ ಜೋಡಣೆ ಸಿಕ್ಕಾಗ ಶ್ರೇಷ್ಠ ಕೃತಿಗಳು ಜನ್ಮತಾಳುತ್ತವೆ. ಮನಸ್ಸು ಶ್ರದ್ಧೆ–ಭಕ್ತಿಯನ್ನು ನೀಡಿದರೆ, ಮತಿಯು ಸತ್ಯ ಮತ್ತು ವಿವೇಕವನ್ನು ನೀಡುತ್ತದೆ. ಇವೆರಡರ ಮಿಲನದಿಂದ ಮಾನವನ ಆತ್ಮಿಕ ಮತ್ತು ನೈತಿಕ ವಿಕಾಸ ಸಾಧ್ಯವಾಗುತ್ತದೆ. ಮನಸ್ಸಿನ ಚಾಂಚಲ್ಯಕ್ಕೆ ಮತಿಯೇ ಅಂಕುಶ ಎಂಬ ಅಂಶವನ್ನು ನೋಡುವುದಾದರೆ,

"ಕಡಿವಾಣವಿಲ್ಲದ ಕುದುರೆ ಗುರಿ ತಲುಪಲಾರದು; ವಿವೇಕದ (ಮತಿಯ) ಬೆಂಬಲವಿಲ್ಲದ ಮನಸ್ಸು ಶಾಂತಿ ಪಡೆಯಲಾರದು."

ಮನಸ್ಸು ದಾರಿ ತೋರಿಸುವ ದೀಪವಾದರೆ, ಮತಿಯು ಎತ್ತ ಸಾಗಬೇಕೆಂದು ನಿರ್ಣಯಿಸುವ ದಿಕ್ಸೂಚಿ. ಜಗತ್ತನ್ನು ಗೆಲ್ಲುವುದಕ್ಕಿಂತ ಮೊದಲು ಸ್ವಂತ ಮನಸ್ಸನ್ನು ಗೆಲ್ಲು; ಮನಸ್ಸನ್ನು ಗೆಲ್ಲಲು ನಿನಗೆ ಬೇಕಿರುವುದು ಶ್ರೇಷ್ಠವಾದ ಮತಿ (ವಿವೇಕ) ಮಾತ್ರ. ಮನಸ್ಸು ಚಂಚಲ ಜಲದಂತೆ, ಮತಿಯು ಅದರಲ್ಲಿರುವ ತಿಳಿಯಂತೆ; ತಿಳಿ ಮೂಡಿದಾಗ ಮಾತ್ರ ಆತ್ಮದ ಪ್ರತಿಬಿಂಬ ಸ್ಪಷ್ಟವಾಗಿ ಕಾಣಲು ಸಾಧ್ಯ.

"ಆತ್ಮಾನಂ ರಥಿನಂ ವಿದ್ಧಿ ಶರೀರಂ ರಥಮೇವ ತು"
ಬುದ್ಧಿಂ ತು ಸಾರಥಿಂ ವಿದ್ಧಿ ಮನಃ ಪ್ರಗ್ರಹಮೇವ ಚ"

ಮನಸ್ಸು ಎಂಬುದು ರಥದ ಕುದುರೆಯಿದ್ದಂತೆ, ಮತಿ ಎಂಬುದು ಅದನ್ನು ನಿಯಂತ್ರಿಸುವ ಸಾರಥಿಯಿದ್ದಂತೆ. ಸಾರಥಿಯಾದ ಮತಿಯು ಕುದುರೆಯಾದ ಮನಸ್ಸನ್ನು ಸರಿಯಾಗಿ ಮುನ್ನಡೆಸಿದಾಗ ಮಾತ್ರ ಜೀವನವೆಂಬ ರಥವು ಗುರಿಯನ್ನು ತಲುಪಲು ಸಾಧ್ಯ. ನಾವು ಅವಿವೇಕಿಗಳಾಗದೆ, ವಿವೇಕಿ ಮನುಜರಾಗಬೇಕು; ಹಾಗಾಗಬೇಕಾದರೆ, ಮತಿ ಮತ್ತು ಮನಸ್ಸುಗಳ ಸಹಯೋಗ ಅಗತ್ಯವೆಂಬ ಸತ್ಯ ನಮಗೆ ಅರಿವಾಗುತ್ತದೆ.

ಡಿ.ವಿ.ಗುಂಡಪ್ಪನವರ ಕಗ್ಗ: "ಮತಿ ನಯನದಂತೆ ಮುಂದಿರ್ಪುದನೋಡುವುದು!

**ಮಿತವದರ ಕೆಲಸ ಹೆಳವನ ಚಲನೆಯಂತೆ!**
**ಗತಿಶಕ್ತಿಯದಕೆ ಮನವೆಂಬ ಚರಣದ ಬಲದೆ!**
**ಮತಿ ಬಿಟ್ಟ ಮನ ಕುರುಡು–ಮಂಕುತಿಮ್ಮ**

Printed, Published and Owned by: Ramesh Reddy and Printed at Metropolitan Media Company Ltd., Plot No.224, in Sy.No.41/2, 41/B & 42, Kapnoor 2nd stage, Industrial Area, Kalburagi-585104. Published at Sy.No. 466, TMC No. 22-405, First Floor, Gada Complex, Opp. Inspection Bungalow, Humnabad-585330.Editor: Ramesh Reddy, Office Ph. No: +91 9449732000, Telephone Number:08483200222

PRGI NO. (RNINO:KARKAN/2011/48371)